ಓದು, ಬರಹ ಬಲ್ಲವರ ಮಾಸಪತ್ರಿಕೆ

೭

ಫೆಬ್ರವರಿ ೨೦೦೭

ಸಂಪಾದಕ

ಪುಸ್ತಕಮನೆ ಹರಿಹರಪ್ರಿಯ

ಪುಸ್ತಕಮಾಹಿತಿ

ಸಂಚಿಕೆ : ೬ ಓದು, ಬರಹ ಬಲ್ಲವರ ಮಾಸಪತ್ರಿಕೆ ಫೆಬ್ರವರಿ ೨೦೦೭

ಒಳಪುಟಗಳಲ್ಲಿ....

ಬಿಡಿಪ್ರತಿ : ೧೫/- ರೂ. ಖಾಸಗಿ ಪ್ರಸಾರಕ್ಕಾಗಿ ಮಾತ್ರ ವಾರ್ಷಿಕ ಚಂದಾ : ೧೫೦/- ರೂ.

ಚಂದಾದಾರರ ಹಾಗೂ ಜಾಹೀರಾತುದಾರರ ಗಮನಕ್ಕೆ

ಹಣವನ್ನು ಎಂ.ಓ./ಡಿ.ಡಿ./ಚೆಕ್‌ಗಳಲ್ಲಿ (ಬೆಂಗಳೂರಿನ ಹೊರಗಿನವರು ೨೫/- ರೂ. ಸೇರಿಸಿ) ಪುಸ್ತಕಮನೆ ಹೆಸರಿಗೆ ಕಳಿಸಿಕೊಡಬೇಕಾಗಿ ವಿನಂತಿ.

ಪ್ರಕಾಶನ

ಪುಸ್ತಕಮನೆ

೭೦೨, ಬಿ.ಸಿ.ಸಿ.ಹೆಚ್.ಎಸ್. ಲೇಔಟ್, ವಾಜರಹಳ್ಳಿ, ತಲಘಟ್ಟಪುರ, ಬೆಂಗಳೂರು ೫೬೦೦೬೨
ಮೊಬೈಲ್ : ೯೮೪೫೮೬೭೧೮೪ / ೯೨೪೨೨೧೫೦೬

ಮುದ್ರಣ

ಇಳಾ ಮುದ್ರಣ, ನಂ. ೩೬, ೪೦ ಅಡಿ ರಸ್ತೆ, ರಾಘವನಗರ, ನ್ಯೂಟಿಂಬರ್‌ಯಾರ್ಡ್ ಲೇಔಟ್
ಬೆಂಗಳೂರು ೫೬೦ ೦೨೬. ದೂರವಾಣಿ : ೩೨೭೧೫೭೭೩ / ೨೬೭೫೭೧೯೯

ಲೀಲಾ ವಿನೋದ ಗಣಿತ

ಸೂರ್ಯಸತ್ಯ

ಹೊರನೋಟಕ್ಕೆ : ತನ್ನವನ ಹೆಸರಿನ ಅರ್ಧಭಾಗವನ್ನೇ ಮಗನಿಗೆ ಇಟ್ಟದ್ದು.

ತನ್ನ ಪಾಲಿನದೈವ ತೀರಿಕೊಂಡಾಗ : ವಯಸ್ಸಾದ ತಾನು ಮಾತ್ರವೇ ಅಲ್ಲ, ಮದುವೆಗೆ ಬಂದ ತನ್ನ ಮಗನ ತಲೆಯನ್ನು ಬೋಳಿಸಿಕೊಂಡು ಬಂದು ಸಮಾಧಿ ಬಳಿ ಕುಳಿತದ್ದು.

ತನ್ನ ಸರ್ವಸ್ವವನ್ನೂ ಮಾರಿ, ತನ್ನ ಮಗನ ಏಳಿಗೆಗಾಗಿ ಮುಂದಡಿ ಇಟ್ಟು, ತನ್ನ ಯೌವ್ವನದ ಚಿತ್ರಪಟಗಳನ್ನು ಪುನರ್ ಜೋಡಿಸಿದ್ದು.

ಇವು ನಿಜಕ್ಕು ಪ್ರತಿಭಟನೆಗಾಗಿಯೋ? ತನ್ನ ನಿಜಸ್ಥಿತಿ ಸ್ಥಾಪನೆಗಾಗಿಯೋ?

ಇವು, ಇವುಗಳ ಹಿಂದಿನ ವಸ್ತುಸ್ಥಿತಿ; ಈ ನಾಡಿನ ಅಭಿಮಾನಿ ದೇವತೆಗಳಿಗೆ, ಸಮೂಹ ಮಾಧ್ಯಮದವರಿಗೆ, ಬಂಡಾಯ ಸ್ತ್ರೀ ಸಮಾಜಕ್ಕೆ ಅರ್ಥವೇ ಆಗಿಲ್ಲ ಎಂದು ತಿಳಿಯಬೇಕಾದ ಅಜ್ಞಾನದಲ್ಲಿದ್ದೇವೆಯೆ?

ನಮ್ಮ ಸ್ತ್ರೀವಾದಿ ವಿಮರ್ಶಕರು ಗಂಟಲೆತ್ತಿ ಅರಚುವಂತೆ : ಪುರುಷರ ಮರ್ಯಾದೆ ಕಾಪಾಡಲು, ಸ್ತ್ರೀ, ಸಹನೆಯ ಮೂರ್ತಿಯಾಗಿ ಅನುಭವಿಸುತ್ತ ಬಂದ ಪಾಡಿನ, ಪಡುಪಾಟಲ ಕರ್ಮ ಇದು ಎಂದು ಪರಿಗಣಿಸಬೇಕೆ?

ಇದರಲ್ಲಿನ ತಪ್ಪು ಏನು? ತಪ್ಪು ಯಾರದ್ದು?

ಪ್ರಾರಂಭಕ್ಕೇ ಇದನ್ನು ಸಹಿಸಿಕೊಂಡದ್ದೆ? ತೆಪ್ಪಗೆ ಸಹಿಸಿಕೊಳ್ಳುವಂತೆ ಇರಿಸಿದ ಪರಿಸರದ್ದೆ? ಇಷ್ಟು ಮುಂದುವರಿದ ಸಮಾಜದ ಸಂದರ್ಭದಲ್ಲಿಯೂ ಸಹಿಸಿಕೊಳ್ಳಬೇಕಾದ ಸ್ಥಿತಿ ಸೃಷ್ಟಿಸಿರುವ ಭಯಂಕರ ಅಭಿಮಾನದ ಅಸಹಜ ಸ್ಥಿತಿಯೆ?

ಈ ಅ–ಗಣಿತವನ್ನು ಹೇಗೆ ಬಿಡಿಸುವುದು ಎಂಬುದೇ ನಮ್ಮ ಮುಂದಿನ ಸಮಸ್ಯೆ. ಹಾಗಿದ್ದರೆ ನಮಗೂ ಇದಕ್ಕು ಸಂಬಂಧವೇ ಇಲ್ಲವೆ? ಆಕೆ ಇದೆಲ್ಲವನ್ನೂ ತೋರಿಕೆಗಾಗಿ, ನಟಿಸುತ್ತಿರುವುದೆ? ಅಭಿನೇತ್ರಿ ನಿಜ. ಆದರೆ ತನ್ನವನಷ್ಟೇ ಈ ನಾಡಿನ, ನಟರಂಗದ ಎತ್ತರದ ಕಲಾವಿದೆಯಲ್ಲವೆ ಆಕೆ?

ಒಬ್ಬ ಹೆಣ್ಣು ಮಗಳಾಗಿ, ಕಲಾವಿದೆಯಾಗಿ ಸಿಗಬೇಕಾದ ಸ್ಥಾನ–ಮಾನ–ನ್ಯಾಯ ಸಿಗಬೇಡವೆ?

ನಾಲ್ಕು ಗೋಡೆಯ ನಡುವಿನ ನ್ಯಾಯಾಲಯಕ್ಕೆ ಮೊರೆಹೊಕ್ಕಲಾರದ ಪರಿಸ್ಥಿತಿ ಆಕೆಯ ಮುಂದೆ ಇದ್ದಿರಬಹುದು. ಸಂ–ವಿಧಾನದ ಪುಟಗಳಲ್ಲಿ ಹೆಕ್ಕಿ ಪ್ರಾಣ ಸಂಕಟಕ್ಕೆ ಗುರಿಮಾಡಲಾರದ ಅಸಹಾಯಕತೆ ಕೂಡಿರಬಹುದು.

ಇದೆಲ್ಲವೂ ಈ ನೆಲದಲ್ಲಿ, ಈ ಜನದಲ್ಲಿ, ಈ ಮನಗಳಲ್ಲಿ ಮಾತ್ರ ಏಕೆ?

ನಮ್ಮ ಅಕ್ಕಪಕ್ಕದ ಎರಡೂ ರಾಜ್ಯಗಳಲ್ಲಿ, ಇದೇ ಕಾಲದಲ್ಲೆ, ಇಂತಹ ವರನಟರೇ ಹೇಗೆ ನಡೆದುಕೊಂಡರು! ಅವರಿಗಿಲ್ಲದ ಅಭಿಮಾನಿದೇವತೆಗಳ, ಕುಟುಂಬದ–ಸಂಕೋಲೆ, ಇಲ್ಲಿ, ಈ ಮಣ್ಣಿನ ಮಗನಿಗೆ ಆವರಿಸಿತೆ? ಅಷ್ಟು ದುರ್ಬಲ, ಅಂಜುಬುರುಕ ವ್ಯಕ್ತಿಯೆ? ಕೀರ್ತಿ, ಪ್ರತಿಷ್ಠೆ,

ಮರ್ಯಾದೆ ಸೋಗಿನಲ್ಲಿ ನಮ್ಮ ಪುರುಷೋತ್ತಮ ಬದುಕಿದ್ದನೆ? ಅಂತಹವನನ್ನು ಮಹಾನ್ ನಟ ಎಂದು ನಾವೆಲ್ಲ ಆರಾಧಿಸುತ್ತ ಬಂದೆವೆ? ಆ ಮೂಲಕ ನಾವು ಆಧುನಿಕ ಸೀತಾರಾಮರನ್ನು, ಅಯೋಧ್ಯೆಗಳನ್ನು, ರಾಮಾಯಣಗಳನ್ನು ನಮ್ಮೊಳಗೆ ಸೃಷ್ಟಿಸಿಕೊಂಡು ಆನಂದಿಸುವ, ಆಸ್ವಾದಿಸುವ, ಅಪ್ರಾಮಾಣಿಕ ವ್ಯಕ್ತಿಗಳಾಗಿ ಬಿಟ್ಟವೆ?

ಆಕೆಯ ಉದ್ದೇಶವಾದರೂ ಏನು? ನ್ಯಾಯಾಲಯಕ್ಕೆ ಹೋಗದ ಆ ಮಹಿಳೆ, ತನ್ನ ಕಂದನನ್ನು ಕಟ್ಟಿಕೊಂಡು, ಈ ನಾಡಿನ ಮನೆಮನೆಯ ಮನ ಮನದ ಮುಂದೆನಿಂತು, ಕೇಳುತ್ತಿರುವುದಾದರೂ ಏನನ್ನು? ಹೇಳ ಬಯಸ ಹೊರಟಿರುವುದಾದರೂ ಏನನ್ನು?

ಚಿಲಿಮಿಲಿ ಎಂದೋದುವ ಗಿಳಿಗಳಿರಾ ನೀವು ಕಾಣಿರೇ ನೀವು ಕಾಣಿರೇ
ಸರವರದೊಳಗಾಡುವ ಹಂಸೆಗಳಿರಾ ನೀವು ಕಾಣಿರೇ ನೀವು ಕಾಣಿರೇ
ಸರವೆತ್ತಿಪಾಡುವ ಕೋಗಿಲೆಗಳಿರಾ ನೀವು ಕಾಣಿರೇ ನೀವು ಕಾಣಿರೇ
ಎರಗಿ ಬಂದಾಡುವ ತುಂಬಿಗಳಿರಾ ನೀವು ಕಾಣಿರೇ ನೀವು ಕಾಣಿರೇ
ಗಿರಿಗಹ್ವರದೊಳಗಾಡುವ ನವಿಲುಗಳಿರಾ ನೀವು ಕಾಣಿರೇ ನೀವು ಕಾಣಿರೇ
ಚೆನ್ನಮಲ್ಲಿಕಾರ್ಜುನದೇವನೆಲ್ಲಿದ್ದಾನೆಂಬುದಂ ಬಲ್ಲಡೆ ನೀವು ಹೇಳಿರೇ

೧೨ನೇ ಶತಮಾನದ ಪ್ರತಿರೂಪವಾಗಿ ಭಾರತೀಯನಾರಿ ಅಕ್ಕಮಹಾದೇವಿ ಕನ್ನಡದ ಮೂಲಕ ವಿಶ್ವಸಾಂಸ್ಕೃತಿಕ ಲೋಕವನ್ನು ತಲ್ಲಣಗೊಳಿಸಿದ್ದು ಒಂದು ಪರಿ.

ಆಸೀತಸಹ್ಯ ಕುಲಾಚಲಾಶ್ರಿತಪುರೇ ತ್ರೈವಿದ್ಯ ವಿದ್ವಜ್ಜನೇ
ನಾನಾಸಜ್ಜನ ಧಾಮ್ನಿ ವಿಜ್ಜಡಬಿಡೇ ಶಾಂಡಿಲ್ಯ ಗೋತ್ರೋದ್ವಿಜಃ

ಆ ಸಹ್ಯಾದ್ರಿ ತೀರದಲ್ಲಿ, ತ್ರಿವಿಧ ವಿದ್ವಜ್ಜನರ ಹಾಗೂ ನಾನಾ ಸಜ್ಜನರ ನಿವಾಸವಾಗಿದ್ದ ಆ ವಿಜ್ಜಡಬಿಡ ಏನಿದೆ, ಅದು ಈಗ ಮಹಾರಾಷ್ಟ್ರದಲ್ಲಿಯೇ ಇರಬಹುದು. ಆದರೆ ಆಗ, ೧೨ನೇ ಶತಮಾನದಲ್ಲಿ? ಇನ್ನೂ ಆಗತಾನೇ ಇವತ್ತಿನ ದಲಿತ ಬಂಡಾಯ ಚಳುವಳಿಯಂತೆಯೇ ಶಿವಶರಣರ ಅನುಭವ ಮಂಟಪ ರೂಪುಗೊಳ್ಳುತ್ತಿದ್ದ ಹೊಸ್ತಿಲಲ್ಲಿ, ಭಾಸ್ಕರಾಚಾರ್ಯರ ಕಟ್ಟಾಸಂಪ್ರದಾಯಸ್ಥರ ಮನೆಯಲ್ಲಿ ಸೂರ್ಯಸತ್ಯ ಎನ್ನುವಂತೆ ಸಂಭವಿಸಿತಲ್ಲ, ಲೀಲಾವಿನೋದ ಗಣಿತ ರಚನೆ – ಅದೂ ನೂರಕ್ಕೆ ನೂರು ಕರ್ನಾಟಕದ್ದೆ, ಕನ್ನಡ ನೆಲದ್ದೆ, ಇಲ್ಲಿನ ಹೆಣ್ಣು ಮಕ್ಕಳದ್ದೆ ಆದ ಇನ್ನೊಂದು ಪರಿ. ಎಂಬುದಕ್ಕೆ ಈ ೧೨ನ್ನು ಅದಲುಬದಲು ಮಾಡಿ, ೨೧ನೇ ಶತಮಾನವೆಂದರೂ ಇವತ್ತಿಗೂ ಈಗ್ಲೂ ಇರುವ ಈ ಲೀಲಾವತಿ ಹಣೇಬರಹ, ಮಹಾರಾಷ್ಟ್ರದ ಹೆಣ್ಣು ಮಗಳು ಆಗಲು ಸಾಧ್ಯವೇ? ಸಾಧ್ಯವಾಗಿದ್ದರೆ ರಾಜಕುಮಾರಿಯಾಗಿ ಮೆರೆಯಬೇಕಾದ, ಹೇಳಬಹುದಾದ ಸಂದರ್ಭದಲ್ಲಿ ಹೇಳಿದ್ದರೆ, ನಡೆಯಬೇಕಾದ ರೀತಿ ನಡೆದಿದ್ದರೆ ಕೋಟ್ಯಂತರ ಆಸ್ತಿ, ಅಂತಸ್ಥಿಗೆ ವಾರಸುದಾರಳಾಗಬೇಕಿದ್ದ ಆಕೆ, ಕನ್ನಡದ ಮೂಕಾಂಬಿಕೆ ಅಲ್ಲ ಎನ್ನುವುದಕ್ಕೆ ಬೇರೆ ಪುರಾವೆ ಬೇಕೆ?

ಮೃಚ್ಛಕಟಿಕ ನಮ್ಮದಲ್ಲ, ಲೀಲಾವತೀ ಗಣಿತ ನಮ್ಮದಲ್ಲ; ಯಾವುದೂ ನಮ್ಮದಲ್ಲವೇ ಅಲ್ಲ ಎಂಬ ವಾದ ವಿವಾದದಲ್ಲಿಯೇ ನಿಜಮಾನಶೂನ್ಯರಾಗಿ, ಹಣೇಬರಹದಾಸ್ಯರಾಗಿ, ಅಂತಃಸತ್ವವಿಹೀನ ರಾಗಿ, ಚರಿತ್ರೆಯನ್ನೂ ಚಾರಿತ್ರ್ಯವನ್ನೂ ತಿಳಿದುಕೊಳ್ಳದೆಯೇ ಬದುಕುತ್ತಿರುವ ಈ ಕನ್ನಡಿಗರ ಬದುಕನ್ನು ಸರಿತಿದ್ದಿ ರೂಪಿಸಲು, ೧೨ಅಲ್ಲ ೨೧ಅಲ್ಲ ೧೨೨೧ ವರ್ಷಗಳಾದರೂ ಯಾರು ತಾನೆ ಬಂದಾರು? ಹೆಣ್ಣಾಗಲಿ, ಗಂಡಾಗಲಿ ಕನ್ನಡ ಕಂದಮ್ಮಗಳ ಬಾಳುವೆಯನ್ನು ಬಾಳುಗೊಟ್ಟಾರು? ಅಳಲೇ ಅರ್ಹತೆಯಾಗುವುದಿಲ್ಲ ನಿಜ. ಅರಿವಿನ ದೃಢಸಂಕಲ್ಪದಿಂದ ಜೀವನ ದಡ ಮುಟ್ಟಬೇಕಾದ ಪ್ರಮೇಯ ನಮ್ಮೆಲ್ಲರ ಮುಂದಿದೆಯಲ್ಲವೆ?

□

ರಾಷ್ಟ್ರಕವಿ ಭಾಷಣ, ಪರಿಚಯಗಳಿಗೆ ಸರ್ಕಾರದ ಅನ್ಯಾಯ

ನನ್ನನ್ನೂ ಸೇರಿಸಿಕೊಂಡಂತೆ ಯಾರು ಒಪ್ಪಲಿ ಬಿಡಲಿ, ಕರ್ನಾಟಕ ಸರ್ಕಾರ ೩ನೇ ರಾಷ್ಟಕವಿ ಪ್ರಶಸ್ತಿ ಪ್ರಕಟಿಸಿದೆ. ನಮ್ಮೆಲ್ಲರ ಪ್ರೀತಿಪಾತ್ರರಾದ ಜಿ.ಎಸ್. ಶಿವರುದ್ರಪ್ಪ ಅವರನ್ನು ಆಯ್ಕೆ ಮಾಡಲಾಗಿದೆ.

ಶಿವರುದ್ರಪ್ಪನವರು, ಗ್ರಾಮೀಣ ನೆಲೆಯಿಂದ ಬಂದವರು. ಸಾಮಾನ್ಯ ಕುಟುಂಬಕ್ಕೆ ಸೇರಿದವರು. ಸ್ವಂತ ಪ್ರತಿಭೆ, ಪಾಂಡಿತ್ಯದಿಂದ ಬೆಳೆದವರು. ಎತ್ತರದ ಸ್ಥಾನಗಳನ್ನು ನಿಭಾಯಿಸಿದವರು. ಕುಲಪತಿ ಆಗಿದ್ದರೆ, ಆ ಸ್ಥಾನಕ್ಕೆ ಮತ್ತೊಂದು ಆಯಾಮಕೊಡಬಹುದಾಗಿದ್ದ ಸಾಧ್ಯತೆ ಇದ್ದವರು.

ನರಸಿಂಹಸ್ವಾಮಿಯಂಥ ಕವಿ ಬದುಕಿಗೆ (ಮಾಸ್ತಿ ಗುಣ) ಆಸರೆಯಾಗಿ, ಲಂಕೇಶರಂಥ ಅಪ್ರತಿಮ ಬರಹಗಾರರಿಗೆ (ವೆಂಕಣ್ಣಯ್ಯ ಗುಣ) ಮಾರ್ಗದರ್ಶಕರಾಗಿ, ಡಿ.ಆರ್. ನಾಗರಾಜರಂಥ ಬೌದ್ಧಿಕ ಸಂಪನ್ನರಿಗೆ (ಕುವೆಂಪು ಗುಣ) ಪೋಷಕರಾಗಿ ನಿಂತ ಜಿ.ಎಸ್.ಎಸ್. ಅವರ ಸಾಧನೆ, ಮಹತ್ವದ್ದು.

ಈ ಎಲ್ಲ ಹಿನ್ನೆಲೆಯಲ್ಲಿ ರಾಷ್ಟ್ರಕವಿ ಪ್ರಶಸ್ತಿ ಸ್ವೀಕರಿಸಿದ, ಜಿ.ಎಸ್.ಎಸ್. ನುಡಿಗಳು, ಸಾಹಿತ್ಯ ಕ್ಷೇತ್ರಕ್ಕೆ ಮಾತ್ರ ಸಂಬಂಧಿಸಿದ್ದಲ್ಲ; ಸಾಂಸ್ಕೃತಿಕ ಲೋಕವನ್ನೇ ಮುಂದಿಟ್ಟುಕೊಂಡು, ಒಂದು ಕಡೆ ಆಳುವ ಸರಕಾರಕ್ಕು ಮತ್ತೊಂದು ಕಡೆ ಜಡಗೊಂಡ ಸಮಾಜಕ್ಕು ಹಿರಿತನದಿಂದ, ದಿಟ್ಟ ಬರಹಗಾರರಾಗಿ, ಧೀಮಂತ ವ್ಯಕ್ತಿಯಾಗಿ ಪ್ರತಿಕ್ರಿಯಿಸಿದ್ದಾರೆ. ಹೀಗೆ ಇಂದು ಮಾತಾಡುವವರ ಅಗತ್ಯವಿದೆ.

ಇದನ್ನು ಕೇಳಿಸಿಕೊಂಡ ಮುಖ್ಯಮಂತ್ರಿ, ಉಪಮುಖ್ಯಮಂತ್ರಿಗಳು ಸಮಾರಂಭದಲ್ಲಿ ಇನ್ನಷ್ಟು ಗಂಭೀರವಾಗಿ ಆಲೋಚಿಸಿ, ಉತ್ತರಿಸಬೇಕಿತ್ತು. ಆ ಮೂಲಕ ಕೆಂಗಲ್ ಹನುಮಂತಯ್ಯ, ಡಿ. ದೇವರಾಜ ಅರಸು, ಜೆ.ಎಚ್. ಪಟೇಲರ ಸಾಲಿನಲ್ಲಿ ನಿಲ್ಲುವ ಅರ್ಹತೆ ತೋರಬಹುದಿತ್ತು. ಸರ್ಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರಾಷ್ಟ್ರಕವಿ ಪ್ರಶಸ್ತಿ ಸ್ವೀಕಾರ ಭಾಷಣದ ಮುದ್ರಣಪ್ರತಿಗಳನ್ನು ಅಂದೇ ಹಂಚಬಹುದಿತ್ತು. ಈಗಲಾದರೂ ನಾಡಿನಾದ್ಯಂತ ಮುಟ್ಟಿಸಬೇಕಾದ ಜವಾಬ್ದಾರಿಯನ್ನು ಅವರು ಹೊರಬೇಕಾದ ಅಗತ್ಯವಿದೆ.

ಮುಖ್ಯವಾದ ಮಾತು : 'ರಾಷ್ಟ್ರಕವಿ' ಭಾಷಣದ ಓದು. ಸಾಂಸ್ಕೃತಿಕ ಜರೂರು ಮಾತ್ರವಲ್ಲ, ಚರ್ಚಿಸಬೇಕಾದ ತುರ್ತುಕೂಡ ನಮ್ಮ ಮುಂದಿದೆ. ಜಿ.ಎಸ್.ಎಸ್. ಅವರು; ಪ್ರಚಾರಪ್ರಿಯರೊ, ಹುಸಿ ಪ್ರತಿಷ್ಠಾವಂತರೊ ಆಗಿದ್ದರೆ; ಆಮೇಲಾದರೂ ನಾನಾ ಬಗೆಯ ಸಮೂಹ ಮಾಧ್ಯಮಗಳನ್ನು ಆಶ್ರಯಿಸಿ, ಸುದ್ದಿಮಾನ್ಯರಾಗಬಹುದಿತ್ತು. ಅವರ ಬದುಕಿನ ನಡಿಗೆ, ವ್ಯಕ್ತಿತ್ವದ ಹಿರಿಮೆಗೆ ಸಾಕ್ಷಿಯಾಗಿ, "ಪ್ರಜಾಸಾಹಿತ್ಯ"ದಂಥ ಪತ್ರಿಕೆಯಲ್ಲಿ ಪ್ರಕಟಿಸಲು ಕೇಳಿದ ಕೂಡಲೆ, "ಯಾಕಾಗಬಾರದು, ಕೊಡುತ್ತೇನೆ ಬನ್ನಿ" ಎಂದು ಕರೆದು, ನೀಡಿದ್ದಾರೆ. ಪತ್ರಿಕೆಗೆ, ಆ ಮೂಲಕ ನಿಜವಾದ ಕನ್ನಡ ಓದು ಬರಹಬಲ್ಲವರಿಗೆ ಮನ್ನಣೆ ತೋರಿದ್ದಾರೆ.

ಅಂತೆಯೇ ಪ್ರಶಸ್ತಿ ಸ್ವೀಕಾರದ ದಿನವೆ, ಜಿ.ಎಸ್.ಎಸ್. ಅವರನ್ನು ಕುರಿತು ಮುದ್ರಿಸಿ ಹಂಚಿದ ಲೇಖನವನ್ನು, ನನ್ನ ತಲೆಮಾರಿನ ಮುಖ್ಯ ಬರಹಗಾರ ಎಚ್.ಎಸ್. ವೆಂಕಟೇಶಮೂರ್ತಿ ಬರೆದದ್ದು ಔಚಿತ್ಯಪೂರ್ಣ. ಶಿವರುದ್ರಪ್ಪನವರ ಖಾಸಗಿ ಶಿಷ್ಯರಲ್ಲಿ ಅವರೂ ಒಬ್ಬರು.

ದುರ್ದೈವದ ಸಂಗತಿ ಎಂದರೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಎಳ್ಳಷ್ಟು ಬುದ್ಧಿ ಇದ್ದಿದ್ದರೆ, ಈ ಆಳುವ ಸರ್ಕಾರದವರಿಗೆ ಒಂದು ಸಾಂಸ್ಕೃತಿಕ ನೀತಿ ಗೌರವ ಇದ್ದಿದ್ದರೆ-ಆ ಲೇಖನದಲ್ಲಿ ಬರೆದವರ ಹೆಸರು, ಅದರಲ್ಲೂ ಆಹ್ವಾನಿಸಿದ ಮೇಲೆ ಹಾಕದೇ ಹೋಗಿರುವುದು, ವೆಂಕಟೇಶಮೂರ್ತಿಗೆ ಮಾತ್ರಮಾಡಿದ ಅಪಚಾರವಲ್ಲ, ಇಡೀ ಸಾಂಸ್ಕೃತಿಕ ಲೋಕಕ್ಕೇ ಮಾಡಿದ ಅನ್ಯಾಯಕೂಡ. ಸೌಜನ್ಯ, ಸ್ನೇಹಶೀಲ ವ್ಯಕ್ತಿತ್ವದ ಕವಿ ವೆಂಕಟೇಶಮೂರ್ತಿಯವರು ವರ್ಣಶಿಲ್ಪಿ ಕೆ. ವೆಂಕಟಪ್ಪ ಅವರಲ್ಲವಾದ್ದರಿಂದ; ಸರ್ಕಾರ, ಸಂಸ್ಕೃತಿ ಇಲಾಖೆ ಬದುಕಿಕೊಂಡಿದೆ. ಒಂದು ಪಕ್ಷ : ಹೆಸರು ಹಾಕುವುದಿಲ್ಲ ಎಂಬುದನ್ನು ಸಂಸ್ಕೃತಿ ಇಲಾಖೆ ಮೂರ್ತಿಯವರ ಗಮನಕ್ಕೆ ತಂದು, ಒಪ್ಪಿಗೆ ಪಡೆದಿದ್ದರೂ ಈ ಕೆಟ್ಟ ಸಂಪ್ರದಾಯ ಇಂದಿಗೇ ಕೊನೆಗೊಳ್ಳಬೇಕಾಗಿದೆ. ಗೆಳೆಯ ಮೂರ್ತಿಯವರ ಅಳಲು, ಕೋರಿಕೆಯನ್ನು ಗೌರವಿಸಿ "ಪ್ರಜಾಸಾಹಿತ್ಯ"ದಲ್ಲಿ ಆ ಲೇಖನವನ್ನೂ ಪೂರ್ಣ ಮುದ್ರಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಗೆಳೆಯರಾದ ಬರಹಗಾರ ರಾಘವೇಂದ್ರ ಪಾಟೀಲ ಹಾಗೂ ರಂಗಕರ್ಮಿ ಬಾಲಿ ಕೂಡ ನಮ್ಮೊಡನೆ ಇದ್ದರೆಂಬುದು ನೆನೆಯುವ ಸಂಗತಿಯಾಗಿದೆ.

ವಿಶೇಷವಾಗಿ : ನಾಡಿನ ಇನ್ನೊಬ್ಬ ಹಿರಿಯ ಕವಿ, ಚೆನ್ನವೀರಕಣವಿಯವರು; ಜಿಎಸ್‌ಎಸ್ ಅವರಿಗೆ ೫೦ ಆದಾಗ ಬರೆದ ಕವಿತೆಯನ್ನೂ (ಕಣವಿ ಸಮಗ್ರ ಕಾವ್ಯ, ಪುಟ ೩೬೪) ಈ ಸಂದರ್ಭದಲ್ಲಿ ಅವರ ಅನುಮತಿ ಪಡೆದು ಬಳಸಿಕೊಳ್ಳಲಾಗುತ್ತಿದೆ.

ಸಂಪಾದಕ

"ರಾಷ್ಟ್ರಕವಿ" ಪ್ರಶಸ್ತಿ ಸ್ವೀಕಾರ : ಸಾರ್ವತ್ರಿಕ ಎಚ್ಚರಕ್ಕೆ ಕರೆ

ಜಿ.ಎಸ್.ಶಿವರುದ್ರಪ್ಪ

ಕನ್ನಡ ಜನತೆಯ ಪ್ರತಿನಿಧಿಯಾದ ಕರ್ನಾಟಕ ಸರ್ಕಾರವು ಕೊಡುತ್ತಿರುವ 'ರಾಷ್ಟ್ರಕವಿ' ಎಂಬ ಹೆಸರಿನ ಈ ಪ್ರತಿಷ್ಠಿತ ಪ್ರಶಸ್ತಿಯನ್ನು ನಾನು ತುಂಬ ಸಂತೋಷದಿಂದ ಹಾಗೂ ವಿನಯದಿಂದ ಸ್ವೀಕರಿಸುತ್ತಿದ್ದೇನೆ.

ಒಂದು ಕಾಲಕ್ಕೆ ನಮ್ಮ ದೇಶದ ರಾಜಾಸ್ಥಾನಗಳು ಅಂದಂದಿನ ಕವಿಗಳನ್ನು ವಿದ್ವಾಂಸರನ್ನು ಕಲಾವಿದರನ್ನು ಬಹುಬಗೆಯ ಪ್ರಶಸ್ತಿಗಳ ಮೂಲಕ ಸನ್ಮಾನಿಸಿ, ದಾನದತ್ತಿಗಳನ್ನು ಧಾರಾಳವಾಗಿ ಕೊಟ್ಟು ಅವರಿಗೊಂದು ಪ್ರತಿಷ್ಠೆಯನ್ನೂ ನೆಮ್ಮದಿಯ ನೆಲೆಯನ್ನೂ ಕಲ್ಪಿಸಿದ ಒಂದು ಪರಂಪರೆಯೇ ನಮ್ಮಲ್ಲಿದೆ. ಆದರೆ ಹಾಗೆ ಪುರಸ್ಕರಿಸುವ ಪ್ರಭುತ್ವವು ಪ್ರತಿನಿಧಿಸುವ ಅಧಿಕಾರದ ಸ್ವರೂಪ ಹಿಂದಿನ ರಾಜಮಹಾರಾಜರ ಕಾಲಕ್ಕೂ ಇಂದಿನ ಪ್ರಜಾಪ್ರಭುತ್ವದ ಕಾಲಕ್ಕೂ ಬೇರೆ ಬೇರೆಯಾಗಿದೆ. ಗಮನಿಸಬೇಕಾದ ಮಾತೆಂದರೆ: ನಮ್ಮ ಹಿಂದಿನ ಕವಿಗಳು ರಾಜತ್ವವನ್ನು ಒಂದು ನಿರ್ದುಷ್ಟವಾದ ಸಂಸ್ಥೆ ಎಂದು ಭಾವಿಸಿದ್ದರೆಂದೇನೂ ತಿಳಿಯಬೇಕಾಗಿಲ್ಲ. ಅದರಲ್ಲೂ ಕನ್ನಡದ ಮಹತ್ವದ ಕವಿಗಳು ಯಾವತ್ತೂ ಪ್ರಶಸ್ತಿಗಳನ್ನು ಪಡೆದ ಕಾರಣದಿಂದ ಪ್ರಭುತ್ವದ ಎದುರು ತಮ್ಮ ಆತ್ಮಗೌರವನ್ನು ಕಡಿಮೆ ಮಾಡಿಕೊಂಡವರಲ್ಲ. ಕವಿಯ ವ್ಯಕ್ತಿ ಸ್ವಾತಂತ್ರ್ಯವನ್ನು ನಿಯಂತ್ರಿಸುವ, ಧಾರ್ಮಿಕೇತರವಾದ ಅಧಿಕಾರಗಳನ್ನು ವಿರೋಧಿಸುವ ಆತ್ಮಪ್ರತ್ಯಯ ಮೂಲವಾದ ನಿಲುವೊಂದು ಉದ್ದಕ್ಕೂ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಸ್ಥಾಯಿಯಾಗಿದೆ. ಕನ್ನಡ ಸಾಹಿತ್ಯದ ಸುದೀರ್ಘವಾದ ಚರಿತ್ರೆಯಲ್ಲಿ ಸಾಹಿತ್ಯದ ಕೇಂದ್ರವು ರಾಜಾಸ್ಥಾನಗಳಿಂದ ದೇವಸ್ಥಾನಗಳಿಗೆ, ಅನಂತರ ಜನಾಸ್ಥಾನಗಳಿಗೆ ಯಾಕೆ ಸ್ಥಳಾಂತರಗೊಂಡಿತೆಂಬುದನ್ನು ಈ ದೃಷ್ಟಿಯಿಂದ ನೋಡಬೇಕು. ಈ ಹೊತ್ತು ತಮ್ಮ ಕಾಲದ ವಿವಿಧ ಪ್ರತಿಭಾ ವಿಶೇಷಗಳನ್ನು ಪ್ರಶಸ್ತಿ ಪುರಸ್ಕಾರಗಳ ಮೂಲಕ ಗುರುತಿಸುವ ಹಾಗೂ ಗೌರವಿಸುವ ಕಾರ್ಯವನ್ನು ಜನತೆಯ ಪ್ರತಿನಿಧಿಯಾದ ಸರ್ಕಾರವೂ, ವಿವಿಧ ಸಾರ್ವಜನಿಕ ಸಾಂಸ್ಕೃತಿಕ ಸಂಸ್ಥೆಗಳೂ ಮುಂದುವರಿಸುತ್ತಿವೆ. ಈದಿನ ರಾಷ್ಟ್ರೀಯ ಹಾಗೂ ಅಂತರ್ ರಾಷ್ಟ್ರೀಯ ಸ್ವರೂಪದ ಅನೇಕ ಪ್ರಶಸ್ತಿಗಳಿವೆ. ಸಾಹಿತ್ಯ ಮತ್ತಿತರ ಕ್ಷೇತ್ರಗಳಲ್ಲಿ ಗಣನೀಯವಾದ ಕೆಲಸ ಮಾಡಿದ ಯಾರೂ ಒಂದಲ್ಲ ಒಂದು ಪ್ರಶಸ್ತಿಗೋ ಪುರಸ್ಕಾರಕ್ಕೋ ಪರಿಗಣನೆಯಾಗುವಂಥ ಒಳ್ಳೆಯ ಕಾಲದಲ್ಲಿ ನಾವಿದ್ದೇವೆ. ಒಬ್ಬ ಬರಹಗಾರನಿಗೆ ತನ್ನ ಸಮಕಾಲೀನತೆಯಲ್ಲಿ ಹೀಗೆ ಸಲ್ಲುವ ಈ ಬಗೆಯ ಪ್ರಶಸ್ತಿ–ಗೌರವಗಳು ತನ್ನ ಕಾಲದ ಜನತೆಯ ಪ್ರೀತಿ–ವಿಶ್ವಾಸಗಳ ಸಂಕೇತವೂ ಹೌದು.

'ರಾಷ್ಟ್ರಕವಿ' ಎಂಬ ಮಾತೇ ಕೆಲವರಿಗೆ ವಿಲಕ್ಷಣವಾಗಿ ತೋರಬಹುದು. ಆದರೆ ಭಾರತದಂಥ ಬೃಹತ್ ರಾಷ್ಟ್ರದ ಅಂಗವಾಗಿರುವ ಪ್ರತಿಯೊಂದು ರಾಜ್ಯವೂ ರಾಷ್ಟ್ರ ಎಂದು ಕರೆಯಿಸಿಕೊಳ್ಳಲರ್ಹವಾದ ಅಸ್ತಿತ್ವವನ್ನೂ ಲಕ್ಷಣವನ್ನೂ ಪಡೆದುಕೊಂಡಿದೆ. ಈ ದೃಷ್ಟಿಯಿಂದ ರಾಜ್ಯಕ್ಕೂ ರಾಷ್ಟ್ರಕ್ಕೂ ಅರ್ಥದಲ್ಲಿ ವ್ಯತ್ಯಾಸವೇನೂ ಇಲ್ಲ. 'ರಾಷ್ಟ್ರ' ಎನ್ನುವ ಪದ ನಮ್ಮ ಪಕ್ಕದ ರಾಜ್ಯವಾದ 'ಮಹಾರಾಷ್ಟ್ರ'ದ ಹೆಸರಿನಲ್ಲೇ ಇರುವುದನ್ನು ಗುರುತಿಸಬಹುದು. ಕರ್ನಾಟಕದ ಪ್ರಾಚೀನ ಪ್ರಮುಖ ರಾಜವಂಶದ ಹೆಸರು 'ರಾಷ್ಟ್ರಕೂಟರು' ಎನ್ನುವುದನ್ನು ನೆನೆಯಬಹುದು. ಈ ಅರ್ಥದಲ್ಲಿ 'ರಾಷ್ಟ್ರಕವಿ' ಎಂದರೆ ರಾಜ್ಯದ ಕರ್ನಾಟಕದ ಕವಿ ಎಂದೇ ಅರ್ಥ. 'ರಾಷ್ಟ್ರಕವಿ' ಎನ್ನುವುದು ಯಾವುದೇ ಅಧಿಕಾರದ ಸ್ಥಾನವಲ್ಲ; ಅದೊಂದು ಗೌರವ; ತನ್ನ ಕಾಲದ ಕವಿಯೊಬ್ಬನಿಗೆ ಜನತೆಯಿಂದ ಸರ್ಕಾರದ ಮೂಲಕ ಸಲ್ಲುವ ಗೌರವ.

ಇದು ಕನ್ನಡದ ಮೂರನೆಯ ರಾಷ್ಟ್ರಕವಿ ಪ್ರಶಸ್ತಿ. ಮಂಜೇಶ್ವರದ ಗೋವಿಂದ ಪೈ ಅವರಂಥ ಅಪರೂಪದ ಸಂಶೋಧಕರೂ ಕುವೆಂಪು ಅವರಂಥ ಮಹಾಕವಿಗಳೂ ಪಡೆದ ಮತ್ತು ಆ ಕಾರಣದಿಂದಲೇ ಮೌಲಿಕವಾದ ಈ ಪ್ರಶಸ್ತಿ ನನಗೆ ಲಭ್ಯವಾದದ್ದು ಒಂದು ಭಾಗ್ಯವಿಶೇಷವೆಂದೇ ನಾನು ಭಾವಿಸುತ್ತೇನೆ. ೧೯೯೪ರಲ್ಲಿ ಕುವೆಂಪು ಅವರು ನಿಧನರಾದ ಮೇಲೆ, ಈ ಹನ್ನೆರಡು ವರ್ಷಗಳ ಕಾಲಮಾನದಲ್ಲಿ ಈ ಪ್ರಶಸ್ತಿ ಪರಂಪರೆಯನ್ನು ಅಂದಿನ ಸರ್ಕಾರ ಮುಂದುವರಿಸಿದ್ದರೆ, ನನಗೆ ಹಿರಿಯರೂ ಪ್ರಿಯರೂ ಆದ ಇನ್ನೂ ಕೆಲವು ಕವಿಗಳು ಈ ಪ್ರಶಸ್ತಿಗೆ ಪಾತ್ರವಾಗ ಬಹುದಾಗಿತ್ತೆಂದು ನನಗೆ ಅನ್ನಿಸುತ್ತದೆ. ಅಷ್ಟೆ ಅಲ್ಲ, ಈ ಪ್ರಶಸ್ತಿಗೆ ನನ್ನಷ್ಟೆ ಅಥವಾ ನನಗಿಂತ ಅರ್ಹರಾದವರು ನನ್ನ ಸಮಕಾಲೀನತೆಯಲ್ಲಿ ಇದ್ದಾರೆ ಎಂಬ ಅರಿವೂ ನನಗಿದೆ. ಅದು ಹೇಗೇ ಇರಲಿ. ಸುವರ್ಣ ಕರ್ನಾಟಕ ವರ್ಷದ ಸಂದರ್ಭದಲ್ಲಿ ಮಂಜೇಶ್ವರ ಗೋವಿಂದ ಪೈ ಮತ್ತು ಶ್ರೀ ಕುವೆಂಪು ಅವರ ನಂತರ ಈ ಪ್ರಶಸ್ತಿ ನನಗೆ ಲಭಿಸಿದ ಹೊತ್ತಿನಲ್ಲಿ ಈ ಮಹಾಸಾಹಿತಿಗಳನ್ನು ನಾನು ಅತ್ಯಂತ ವಿನಯದಿಂದ ನೆನೆಯುತ್ತೇನೆ. ಒಬ್ಬರು ಮಹಾ ವಿದ್ವಾಂಸರು ಮತ್ತು ಕವಿಗಳು; ಇನ್ನೊಬ್ಬರು ಈ ಶತಮಾನದ ಶಿಖರ ಸಾಹಿತಿ. ನಾನು ಸಂಶೋಧಕನಲ್ಲವಾದ ಕಾರಣ ನನ್ನ ಮೇಲೆ ಗೋವಿಂದ ಪೈ ಅವರ ಪ್ರಭಾವವಿದೆಯೆಂದು ಹೇಳಲಾರೆ. ಆದರೆ ಶ್ರೀ ಕುವೆಂಪು ಅವರಂತೂ ನಿಸ್ಸಂದೇಹವಾಗಿ ನನ್ನ ಬದುಕು ಮತ್ತು ಬರಹಗಳನ್ನು ನಿರ್ದೇಶಿಸಿದ ಮಾರ್ಗದರ್ಶಕ ಮಹಾಸತ್ವವಾಗಿದ್ದಾರೆ. ನಾನು ಇದುವರೆಗು ಏನನ್ನು ಸಾಧಿಸಿದೆನೋ ಅದಕ್ಕೆಲ್ಲ ಕುವೆಂಪು ಅವರೇ ಕಾರಣ. ಆದ ಕಾರಣ ಈ ಪ್ರಶಸ್ತಿ ನನಗೆ ತಂದುಕೊಟ್ಟ ಈ ಗೌರವವನ್ನು ನಾನು ಕುವೆಂಪು ಅವರ ಸಾಂಸ್ಕೃತಿಕ ಸ್ಮರಣೆಗೆ ಸಮರ್ಪಿಸುತ್ತೇನೆ.

ಇದರ ಜತೆಗೆ ಈ ಹೊತ್ತಿನಲ್ಲಿ ನಾನು ನೆನೆಸಿಕೊಳ್ಳಬೇಕಾದದ್ದು ನಾನು ಎದೆತುಂಬಿ ಹಾಡಿದ್ದನ್ನು ಮನವಿಟ್ಟು ಕೇಳಿದ ಮೊದಲಿಗರಾದ ಮತ್ತು ವಾತ್ಸಲ್ಯದ ಪ್ರತಿಮಾ ಸ್ವರೂಪರಾದ, ಗುರುವರ್ಯ ಪ್ರೊ. ತ.ಸು. ಶಾಮರಾಯರನ್ನು. ಈ ಹಾಡು ಹಕ್ಕಿಯನ್ನು ಪ್ರೀತಿಯಿಂದ ಬೆಳೆಯಿಸಿ ಗರಿಗೆದರಿ ಹಾರಲು ಕಲಿಸಿದ ಅವರ ನನ್ನ ಸಂಬಂಧವನ್ನು ಕೇವಲ ಮಾತುಗಳಲ್ಲಿ ಹೇಳಿ ಮುಗಿಸಲು ಸಾಧ್ಯವಿಲ್ಲ.

ಮೈಸೂರು-ಬೆಂಗಳೂರು ವಿಶ್ವವಿದ್ಯಾಲಯಗಳಲ್ಲಿ ಬಹುಕಾಲ ಒಬ್ಬ ಅಧ್ಯಾಪಕನಾಗಿ ನಾನು ಗಳಿಸಿದ ಸಂಪತ್ತು ಎಂದರೆ, ನನ್ನನ್ನು ಪ್ರೀತಿಗೌರವಗಳಿಂದ ಕಾಣುವ ಬಹುಸಂಖ್ಯೆಯ ವಿದ್ಯಾರ್ಥಿಗಳೇ. ಅವರಲ್ಲಿ ಅನೇಕರು ನಮ್ಮ ಸಮಕಾಲೀನ ಸಾಹಿತ್ಯ ಸಂದರ್ಭದ ವಿವಿಧ ಕ್ಷೇತ್ರಗಳಲ್ಲಿ ತಮ್ಮ ಮೌಲಿಕವಾದ ಕೊಡುಗೆಗಳಿಂದ ಹೆಸರು ಮಾಡಿದ್ದಾರೆ ಎನ್ನುವುದು ನನಗೆ ಹೆಮ್ಮೆಯ ವಿಚಾರವಾಗಿದೆ. ಪ್ರತ್ಯೇಕವಾಗಿ ಹೇಳಬೇಕಾದ ಮಾತೆಂದರೆ: ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕನಾಗಿ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷನಾಗಿ ನಾನು ಮಾಡಿದ ಸಾಹಿತ್ಯ ಸಂಘಟನೆಯ ಕಾರ್ಯಗಳನ್ನು ವಿಶೇಷವಾಗಿ ಪ್ರಶಂಸಿಸಲಾಗಿದೆ. ವಿಭಿನ್ನ ಮನೋಧರ್ಮದ ಹಾಗೂ ವಿವಿಧ ಸಾಹಿತ್ಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡ ಸಾಹಿತಿಗಳನ್ನು ಒಂದು ಸಮಾನವೇದಿಕೆಯ ಮೇಲೆ ತಂದು, ಅವರೆಲ್ಲರೂ ಮುಖಾಮುಖಿಯಾಗಿ ಸಾಹಿತ್ಯಿಕ ವಾಗ್ವಾದಗಳನ್ನು ನಡೆಯಿಸುವಂಥ ಹಾಗೂ ಭಿನ್ನವಿದ್ದೂ ಬೆರೆಯಬಹುದು ಎಂಬಂಥ ಆರೋಗ್ಯ ಪೂರ್ಣ ವಾತಾವರಣವನ್ನು ನಿರ್ಮಾಣ ಮಾಡಲು ಸಾಧ್ಯವಾಯಿತೆಂಬುದು ನನಗೆ ಸಮಾಧಾನದ ಸಂಗತಿಯಾಗಿದೆ. ಆದರೆ ಅದೊಂದು ಚಾರಿತ್ರಿಕ ಆಕಸ್ಮಿಕವಷ್ಟೆ ಎಂದೂ, ಇಂಥದೊಂದು ಮಹತ್ವದ ಸಾಂಸ್ಕೃತಿಕ ಘಟನೆಗೆ ನಾನೊಂದು ನಿಮಿತ್ತವಾಗುವ ಅಪೂರ್ವ ಅವಕಾಶ ನನಗೆ ದೊರೆಯಿತೆಂದೂ ನಾನು ಭಾವಿಸುತ್ತೇನೆ.

ನವೋದಯದ ಉತ್ಕರ್ಷ ಕಾಲದಲ್ಲಿ ಕನ್ನಡ ಸಾಹಿತ್ಯವನ್ನು ಪ್ರವೇಶಿಸಿದ ನಾನು ಈವರೆಗಿನ ಎಲ್ಲ ಸಾಹಿತ್ಯ ಚಳುವಳಿಗಳಿಂದಲೂ ನನ್ನ ಸೃಜನಶೀಲತೆಗೆ ಅಗತ್ಯವಾದ ಗುಣಾತ್ಮಕ ಅಂಶಗಳನ್ನು ಅರಗಿಸಿಕೊಳ್ಳುತ್ತ ವಿವಿಧ ಪ್ರಕಾರಗಳ ಸಾಹಿತ್ಯ ನಿರ್ಮಿತಿಯಲ್ಲಿ ತೊಡಗಿಕೊಂಡಿದ್ದೇನೆ. ಕನ್ನಡ ಜನ ಪ್ರೀತಿಯಿಂದ ನನ್ನನ್ನು ಕವಿ ಎಂದು ಒಪ್ಪಿಕೊಂಡಿದೆ. ಸಾಹಿತ್ಯ ವಲಯಗಳಲ್ಲಿ ಕನ್ನಡ ಸಹೃದಯರೂ ವಿಮರ್ಶಕರೂ ನನ್ನ ಸಾಹಿತ್ಯ ಸಾಧನೆಗಳನ್ನು ಗುರುತಿಸಿ ಅದರ ಇತಿ ಮಿತಿಗಳನ್ನು ತೋರಿಸುವ ಕಾರ್ಯವನ್ನು ತಕ್ಕ ಉತ್ಸಾಹದಿಂದಲೇ ಮಾಡಿದ್ದಾರೆ. ಕಾಲದಿಂದ ಕಾಲಕ್ಕೆ ಆಯಾಚಿತವಾಗಿ ಪ್ರಶಸ್ತಿ-ಪುರಸ್ಕಾರಗಳು ಬಂದು ನನ್ನನ್ನು ಚಕಿತಗೊಳಿಸಿವೆ. ಇದನ್ನೆಲ್ಲ ನೋಡಿದರೆ ನಾನು ಅದೃಷ್ಟವಂತನೆಂದೇ ಹೇಳಬೇಕು. ಈವರೆಗೆ ನಾನು ಪಡೆದ ಪ್ರಶಸ್ತಿಗಳ ಪಂಕ್ತಿಗೆ ಕರ್ನಾಟಕ ಸರ್ಕಾರದ 'ರಾಷ್ಟ್ರಕವಿ' ಪ್ರಶಸ್ತಿಯ ಗೌರವವೂ ಸೇರುತ್ತದೆ. ಹೀಗೆ ಸರ್ಕಾರವು ಒಬ್ಬ ಕವಿಯನ್ನು ಗೌರವಿಸುವುದು ಎಂದರೆ ಒಂದು ಭಾಷೆಯನ್ನು ಗೌರವಿಸುವುದು ಎಂದು ಅರ್ಥ; ಒಂದು ಭಾಷೆಯನ್ನು ಗೌರವಿಸುವುದು ಎಂದರೆ ಆ ಭಾಷೆಯನ್ನಾಡುವ ಒಂದು ಜನತೆಯನ್ನು ಗೌರವಿಸುವುದು ಎಂದು ಅರ್ಥ.

ಕನ್ನಡ ಎಂದರೆ ಕೇವಲ ಅದೊಂದು ಭಾಷೆಯಲ್ಲ. ಅದೊಂದು ಸುದೀರ್ಘ ಜೀವನ ಕ್ರಮದಿಂದ ನಿಷ್ಪನ್ನವಾದ ಒಂದು ಮನೋಧರ್ಮ. ಈ ಜೀವನಕ್ರಮವನ್ನು ಪ್ರತಿನಿಧಿಸುವ ಜನ ಸಮುದಾಯವು ಶತಶತಮಾನಗಳಿಂದ ಕಟ್ಟಿಕೊಂಡ ಕನಸುಗಳೂ, ಇಟ್ಟುಕೊಂಡ ಆದರ್ಶಗಳೂ, ನಡೆಯಿಸಿದ ಚಿಂತನೆಗಳೂ, ಎದುರಿಸಿದ ಸವಾಲುಗಳೂ, ಸಾಧಿಸಿದ ಸಾಧನೆಗಳೂ ಇವೆಲ್ಲವೂ ಸೇರಿ ಕನ್ನಡ ಸಂಸ್ಕೃತಿ ರೂಪುಗೊಂಡಿದೆ. ಇದನ್ನು ಕಟ್ಟಿದವರು ಕರ್ನಾಟಕವನ್ನು ಆಳಿದ ರಾಜರು, ಕವಿಗಳು-ಕಲಾವಿದರು-ಸಂತರು, ಆಚಾರ್ಯರು ಮತ್ತು ಅಸಂಖ್ಯಾತ ಶ್ರೀಸಾಮಾನ್ಯರು, ಇವರೆಲ್ಲರ ಕೊಡುಗೆಗಳು, ಲಿಪಿಗಳಲ್ಲಿ-ಕಲ್ಲುಗಳಲ್ಲಿ-ಬಣ್ಣಗಳಲ್ಲಿ-ರಾಗಗಳಲ್ಲಿ ಹಾಗೂ ಸಮಾನಾಂತರವಾದ ಅಲಿಖಿತ ಧ್ವನಿಗಳಲ್ಲಿ ದಾಖಲಾಗಿವೆ.

ಕರ್ನಾಟಕಕ್ಕೆ ಕನ್ನಡದ್ದೆ ಎಂದು ಗುರುತಿಸಬಹುದಾದ ಚಾಲುಕ್ಯ ರಾಷ್ಟ್ರಕೂಟ ಹೊಯ್ಸಳ ಶಿಲ್ಪ ಪರಂಪರೆಗಳಿವೆ. ಭಾರತೀಯ ಸಂಗೀತಕ್ಕೆ ಕೊಡುಗೆಯಾಗಬಲ್ಲ ಕರ್ನಾಟಕ ಸಂಗೀತವಿದೆ. ಜಗತ್ತಿನ ವಚನ ಸಾಹಿತ್ಯ ಎಂಬ ವಿಶೇಷ ಅಭಿವ್ಯಕ್ತಿ ಪ್ರಕಾರವಿದೆ. ಕರ್ನಾಟಕದಲ್ಲಿ ಪ್ರವರ್ಧಮಾನಕ್ಕೆ ಬಂದ ಜೈನ-ವೈಷ್ಣವ-ವಿರಶೈವ ಮತ್ತು ಮಾಧ್ವ ಮತ ಧರ್ಮಗಳೂ ಹಾಗೂ ಹೊಗಿನಿಂದ ಬಂದ ಇನ್ನಿತರ ಧರ್ಮಗಳೂ ಜತೆಗೂಡಿ, ಒಂದು ಉದಾರ ಮಾನವತಾ ನಿಲುವನ್ನೂ ಧಾರ್ಮಿಕ ಸಾಮರಸ್ಯವನ್ನೂ ಕಾಯ್ದುಕೊಂಡು ಬಂದಿವೆ. ಈ ಎಲ್ಲ ಧರ್ಮಗಳ ಪ್ರೇರಣೆಯಿಂದ ನಿರಂತರತೆಯನ್ನು ಪಡೆದುಕೊಂಡ ಒಂದು ಸಮೃದ್ಧವಾದ ಸಾಹಿತ್ಯ ಪರಂಪರೆಯಿದೆ. ಜಗತ್ತಿಗೆ ಮಾರ್ಗದರ್ಶಕವಾಗಬಲ್ಲ ಅನೇಕ ಮಹತ್ವದ ಚಿಂತನೆಗಳನ್ನು ಮಂಡಿಸುತ್ತ, ಕಾಲದಿಂದ ಕಾಲಕ್ಕೆ ಮನುಷ್ಯತ್ವದ ಕಲ್ಪನೆಗಳನ್ನು ಕಟ್ಟಿ ನಿಲ್ಲಿಸಿದೆ.

ಒಂದು ಸಂಸ್ಕೃತಿ ಅಥವಾ ಜೀವನ ಕ್ರಮದೊಳಗಿನ ತಿಳುವಳಿಕೆಯೆಲ್ಲವೂ ನಮ ಅರಿವಿಗೆ ಬರುವ ಸಾಧನಗಳಲ್ಲಿ ಭಾಷೆ ತುಂಬ ಮುಖ್ಯವಾದದ್ದು, ಈ ಅರ್ಥದಲ್ಲಿ ಭಾಷೆಯನ್ನು ಸಂಸ್ಕೃತಿಯ ವಾಹಕ ಎಂದು ಕರೆಯಲಾಗಿದೆ. ಈ ಹಿನ್ನೆಲೆಯಿಂದ ಕನ್ನಡಿಗರಾದ ನಾವು, ಈ ಕನ್ನಡ ಎನ್ನುವುದು ಯಾವುದಕ್ಕೆ ಸಂಕೇತ, ಅದರ ಪರಂಪರೆಯ ಸ್ವರೂಪವೇನು, ಕಾಲದಿಂದ ಕಾಲಕ್ಕೆ ಅದು ಎದುರಿಸಿದ ಸವಾಲುಗಳು ಯಾವುವು, ಅದರ ಸಾಧನೆಗಳೇನು – ಇತ್ಯಾದಿಗಳ ಅರಿವಿಲ್ಲದೆ ನಾವು ನಿಜವಾದ ಕನ್ನಡಿಗರಾಗಲಾರೆವು. ಆದರೆ, ನಾವು ನಮ್ಮ ವರ್ತಮಾನವನ್ನು ಸಮರ್ಪಕವಾಗಿ ಅರ್ಥಮಾಡಿಕೊಳ್ಳಲು ಅಗತ್ಯವಾದ ನಮ್ಮ ಬೆನ್ನ ಹಿಂದಿನ ಸಾಂಸ್ಕೃತಿಕ ಸ್ಮರಣೆಗಳ ಅರಿವೇ ಇಲ್ಲದವರಂತೆ ನಾವು ಬದುಕುತ್ತಿದ್ದೇವೆ.

ಒಂದು ಕಾಲಕ್ಕೆ ಕಾವೇರಿಯಿಂದ ಗೋದಾವರಿಯವರೆಗೆ ಇತ್ತೆಂದು ವರ್ಣಿತವಾದ ಕನ್ನಡನಾಡು ಬ್ರಿಟಿಷರ ಕಾಲದಲ್ಲಿ ಅತಾರ್ಕಿಕವಾಗಿ ಹರಿದು ಹಂಚಿ ಹೋದದ್ದು, ಮತ್ತೆ ಏಕೀಕೃತವಾದದ್ದು ಸ್ವಾತಂತ್ರೋತ್ತರ ಕಾಲದಲ್ಲೇ. ಹಲವು ದಶಕಗಳ ಕಾಲ ಅಂದಿನ ಸ್ವಾತಂತ್ರ್ಯ ಚಳುವಳಿಯಲ್ಲಿ ತೊಡಗಿಕೊಂಡ ಧುರೀಣರ ಹಾಗೂ ಶಿಕ್ಷಣ, ಸಾಹಿತ್ಯ ಮತ್ತಿತರ ಕ್ಷೇತ್ರಗಳ ಪ್ರಜ್ಞಾವಂತರ ಹೋರಾಟದ ಪರಿಣಾಮವಾಗಿ, ೧೯೫೬ರಲ್ಲಿ ಕರ್ನಾಟಕವು ಏಕೀಕೃತವಾಯಿತೆಂಬುದು ಒಂದು ಮಹತ್ವದ ಐತಿಹಾಸಿಕ ಘಟನೆಯಾಗಿದೆ. ಹೀಗೆ ಕರ್ನಾಟಕವು ರಾಜಕೀಯವಾಗಿ ಎಂದೂ ಒಂದಾಗಿರಲಿಲ್ಲ ಎನ್ನುವುದು ವಿಶೇಷದ ಸಂಗತಿಯಾಗಿದೆ. ಕರ್ನಾಟಕ ಏಕೀಕೃತವಾಗಿ ಐವತ್ತು ವರ್ಷಗಳು ತುಂಬಿದ ಈ ಸಂದರ್ಭವನ್ನು ಅತ್ಯಂತ ಸಂಭ್ರಮ ಮತ್ತು ವೈಭವದಿಂದ ಈ ನಾಡು ಆಚರಿಸುತ್ತಿರುವ ಹೊತ್ತಿನಲ್ಲಿ ಸರ್ಕಾರವು ನನಗೆ ಈ ಪ್ರಶಸ್ತಿಯನ್ನು ನೀಡುತ್ತಿರುವುದು ಒಂದು ವಿಶೇಷದ ಘಟನೆಯಾಗಿದೆ.

ಕರ್ನಾಟಕ ರಾಜ್ಯೋದಯದ ಹಿಂದೆ ಇರುವ ಎಷ್ಟೋ ಆಶಯಗಳು ಇನ್ನೂ ಕಾರ್ಯಗತವಾಗಿಲ್ಲ ಎನ್ನುವುದು ನಿಜವಾದರೂ, ಕರ್ನಟಕವು ಈವರೆಗು ಸಾಧಿಸಿದ್ದೇನು ಎನ್ನುವುದನ್ನು ಕುರಿತು ಮಾತ್ರವಲ್ಲ, ನಾಳೆ ಇನ್ನೂ ಸಾಧಿಸಬೇಕಾದದ್ದು ಏನು ಎನ್ನುವುದರ ಚಿಂತನೆಯೂ ನಡೆಯಬೇಕಾಗಿದೆ.

ಕಳೆದ ಐವತ್ತು ವರ್ಷಗಳಲ್ಲಿ ವಿವಿಧ ಪಕ್ಷಗಳ ಆಡಳಿತದ ಕಾಲಮಾನದಲ್ಲಿ ಈ ವರೆಗೆ ಆದ ಪ್ರಗತಿಯನ್ನು ಗಮನಿಸಿದರೆ ಅನೇಕ ಕ್ಷೇತ್ರಗಳಲ್ಲಿ ಕರ್ನಾಟಕದ ಸಾಧನೆ ಗಣನೀಯವಾಗಿದೆ. ನನಗೆ ಲಭ್ಯವಾದ ಮಾಹಿತಿಯ ಪ್ರಕಾರ ಆಹಾರೋತ್ಪಾದನೆ, ಕೈಗಾರಿಕೀಕರಣ, ಸಾರಿಗೆ, ಸಾಕ್ಷರತೆ, ಗ್ರಾಮೀಣಾಭಿವೃದ್ಧಿ, ಮಹಿಳಾ ಸಬಲೀಕರಣ, ವಿಕೇಂದ್ರೀಕರಣ–ಹೀಗೆ ಯಾವ ಅಭಿವೃದ್ಧಿ ಕ್ಷೇತ್ರವನ್ನೂ ಲೆಕ್ಕಕ್ಕೆ ತೆಗೆದುಕೊಂಡರೂ ಕರ್ನಾಟಕದ ಸಾಧನೆ ಹೇಳಿಕೊಳ್ಳುವಂಥದಾಗಿದೆ. ಮಾಹಿತಿ ತಂತ್ರಜ್ಞಾನ ಕ್ಷೇತ್ರಗಳಲ್ಲಿನ ಪ್ರಗತಿ ಆಶ್ಚರ್ಯಕರವಾಗಿದೆ. ಪ್ರಜಾಪ್ರಭುತ್ವದ ಪ್ರಯೋಜನವನ್ನು ಸಾರ್ಥಕ ಪಡಿಸುವ ನಿಟ್ಟಿನಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ವಿಸ್ತರಿಸಿದ ಕ್ರಮದಲ್ಲಿ ಕರ್ನಾಟಕ ರಾಜ್ಯವು ಮುಂಚೂಣಿಯಲ್ಲಿದೆ. ಪ್ರಸ್ತುತ ಸರ್ಕಾರವು ಇತ್ತೀಚೆಗೆ ಪ್ರಕಟಿಸಿರುವ ಹಲವು ಜನಪರ ಯೋಜನೆಗಳು ಅಭಿವೃದ್ಧಿಯ ಪಥದಲ್ಲಿ ಹೊಸ ಹೆಜ್ಜೆಗಳಾಗಿವೆ. ಅವುಗಳಲ್ಲಿ ಹೆಣ್ಣುಮಕ್ಕಳಿಗೆ ಸಂಬಂಧಿಸಿದ 'ಭಾಗ್ಯಲಕ್ಷ್ಮಿ' ಮತ್ತು 'ಭಾಗ್ಯರಥ' – ಯೋಜನೆಗಳಂತೂ ಇಡೀ ದೇಶಕ್ಕೆ ಮಾದರಿಗಳಾಗಿವೆ.

ಕನ್ನಡದ ಸಂರಕ್ಷಣೆ ಹಾಗೂ ಅಭಿವೃದ್ಧಿಗಾಗಿ ಕರ್ನಾಟಕದಲ್ಲಿ ಇರುವಷ್ಟು ಸಾಂಸ್ಕೃತಿಕ ಸ್ವರೂಪದ ಸಂಸ್ಥೆಗಳು ಬಹುಶಃ ಭಾರತದ ಬೇರಾವ ರಾಜ್ಯಗಳಲ್ಲೂ ಇರಲಾರವು. ಕಲೆ–ಸಾಹಿತ್ಯ–ರಂಗಭೂಮಿ–ಚಲನಚಿತ್ರ ಮೊದಲಾದ ಕ್ಷೇತ್ರಗಳಿಗೆ ರಾಜ್ಯ ಸರ್ಕಾರವು ನೀಡುತ್ತಿರುವ ಪ್ರೋತ್ಸಾಹವು ಗಣನೀಯ ವಾಗಿದೆ. ಸಾಹಿತ್ಯ–ಸಂಗೀತ–ಚಿತ್ರ–ನೃತ್ಯ–ಶಿಲ್ಪ–ನಾಟಕ–ಯಕ್ಷಗಾನ–ಜಾನಪದ ಅಕಾಡೆಮಿಗಳಿವೆ. ಜತೆಗೆ ಅಲ್ಪ ಸಂಖ್ಯಾತ ಭಾಷೆಗಳಾದ ಉರ್ದು–ಕೊಡವ–ತುಳು ಭಾಷೆಗಳಿಗೂ ಅಕಾಡೆಮಿಗಳಿವೆ. ಲೇಖಕ–ಪ್ರಕಾಶಕ–ಓದುಗರ ನಡುವೆ ಸಂಬಂಧಗಳನ್ನು ಬೆಸೆಯಲು ಮತ್ತು ಪುಸ್ತಕೋದ್ಯಮವನ್ನು ಪ್ರೋತ್ಸಾಹಿಸಲು ಕನ್ನಡ ಪುಸ್ತಕ ಪ್ರಾಧಿಕಾರವಿದೆ. ಕನ್ನಡ ಭಾಷೆ–ಇತಿಹಾಸ–ಸಾಹಿತ್ಯ ಇತ್ಯಾದಿಗಳ ಸಂಶೋಧನೆಗಾಗಿ ಕನ್ನಡ ವಿಶ್ವವಿದ್ಯಾಲಯವಿದೆ. ಮಹಿಳಾ ಅಧ್ಯಯನಕ್ಕಾಗಿಯೇ ಮಹಿಳಾ ವಿಶ್ವವಿದ್ಯಾಲಯವಿದೆ. ಕನ್ನಡದ ಸಮಗ್ರ ಅಭಿವೃದ್ಧಿಯಾಗಿ ಕನ್ನಡ ಅಭಿವೃದ್ಧಿ ಪ್ರಾಧಿಕಾರವಿದೆ. ಜತೆಗೆ ಕನ್ನಡ ಸಾಹಿತ್ಯ ಪರಿಷತ್ತಿದೆ. ವಿದ್ಯಾವರ್ಧಕ ಸಂಘವಿದೆ. ಕನ್ನಡದ ಪ್ರಮುಖ ಕವಿಗಳನ್ನು ಕುರಿತು ಸರ್ಕಾರವೇ ರಚಿಸಿದಂಥ ಟ್ರಸ್ಟುಗಳಿವೆ. ರಾಜ್ಯದ ವಿವಿಧ ಅಕಾಡೆಮಿಗಳು ತಮ್ಮ ಕ್ಷೇತ್ರದ ಪರಿಣತರಿಗೆ ಪ್ರತಿವರ್ಷವೂ ಬಹುಮಾನ ಪ್ರಶಸ್ತಿಗಳನ್ನು ನೀಡಿ ಗೌರವಿಸುತ್ತಿವೆ. ಇವಲ್ಲದೆ ಪಂಪ ಪ್ರಶಸ್ತಿ, ಬಸವ ಪ್ರಶಸ್ತಿ, ಕನಕಪುರಂದರ ಪ್ರಶಸ್ತಿ–ಶಿಶುನಾಳ ಷರೀಫ ಪ್ರಶಸ್ತಿ, ಅತ್ತಿಮಬ್ಬೆ ಪ್ರಶಸ್ತಿ ಇಂಥ ಕೆಲವು ಪ್ರತಿಷ್ಠಿತ ಪ್ರಶಸ್ತಿಗಳೂ ಇವೆ. ವಿವಿಧ ಕಾರ್ಯಕ್ಷೇತ್ರಗಳಿಗೆ ಗಣನೀಯವಾದ

ಕೊಡುಗೆಯನ್ನು ನೀಡಿದ ಗಣ್ಯರನ್ನು ಗುರುತಿಸಿ ಪ್ರತಿವರ್ಷವೂ ಸರ್ಕಾರವು ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡುತ್ತಿದೆ. ಸುವರ್ಣ ಕರ್ನಾಟಕದ ಈ ವರ್ಷದಲ್ಲಿ ಕರ್ನಾಟಕ ಏಕೀಕರಣಕ್ಕಾಗಿ ದುಡಿದವರಿಗೆ 'ಏಕೀಕರಣ ಪ್ರಶಸ್ತಿ'ಯನ್ನು ನೀಡಿ ಗೌರವಿಸಿದ್ದು ಅತ್ಯಂತ ಅರ್ಥಪೂರ್ಣವಾಗಿದೆ.

ಸಾಂಸ್ಕೃತಿಕ ನೆಲೆಯಲ್ಲಿ ಇಷ್ಟೊಂದು ಕನ್ನಡ ಪರ ವ್ಯವಸ್ಥೆಗಳಿದ್ದರೂ ಆಡಳಿತ–ಶಿಕ್ಷಣ–ಹಾಗೂ ಕನ್ನಡ ಜನತೆಯ ದೈನಂದಿನ ವ್ಯವಹಾರದ ಎಲ್ಲ ಹಂತಗಳಲ್ಲಿ ಕನ್ನಡ ಭಾಷೆ ತಾನು ನ್ಯಾಯವಾಗಿ ಪಡೆದುಕೊಳ್ಳಬೇಕಾದ ಆದ್ಯತೆ ಹಾಗೂ ಸ್ಥಾನಮಾನಗಳನ್ನು ಕುರಿತ ಪ್ರಶ್ನೆಗಳು ಹಾಗೆಯೇ ಇವೆ. ನೆಲ–ಜಲ–ಗಡಿ ಹಾಗೂ ವಲಸೆಗೆ ಸಂಬಂಧಪಟ್ಟ ಪ್ರಶ್ನೆಗಳೂ ಸಮಾನಾಂತರವಾಗಿ ಚಲನಶೀಲವಾಗಿವೆ. ಕೆಲವನ್ನು ಪ್ರಸ್ತಾಪಿಸುವುದಾದರೆ : ಕರ್ನಾಟಕದಲ್ಲಿ ವಿಪುಲವಾದ ಉದ್ಯೋಗದ ಅವಕಾಶಗಳಿದ್ದರೂ, ಕನ್ನಡಿಗರಿಗೆ ಅವು ನಿರೀಕ್ಷಿತ ಪ್ರಮಾಣದಲ್ಲಿ ದಕ್ಕದೆ ಇರುವ ಪರಿಸ್ಥಿತಿ ನಿರ್ಮಾಣವಾಗಿದೆ. ಕರ್ನಾಟಕದ ಆಸ್ತಿಪಾಸ್ತಿಗಳು, ಜಲಾಶಯಗಳ ಹಿಂದಿರುವ ಜಮೀನುಗಳು ಅನ್ಯಭಾಷಿಕರ ಕೈವಶವಾಗುತ್ತಿರುವುದನ್ನು ತಡೆಯಲು ಸಾಧ್ಯವಾಗುತ್ತಿಲ್ಲ. ಹೊರರಾಜ್ಯಗಳವರು ಬಹು ಸಂಖ್ಯೆಯಲ್ಲಿ ವಲಸೆ ಬರುವುದನ್ನು ನಿರ್ಬಂಧಿಸಲಾಗದ ಕಾರಣದಿಂದ, ಬೆಂಗಳೂರಿನಂಥ ಮಹಾನಗರದಲ್ಲಿ ಕನ್ನಡಿಗರೆ ಅಲ್ಪ ಸಂಖ್ಯಾತರಾಗುವ ಅಪಾಯವನ್ನು ಎದುರಿಸಬೇಕಾಗಿದೆ. ಮಾಹಿತಿ ತಂತ್ರಜ್ಞಾನ ಕ್ಷೇತ್ರಕ್ಕೆ ತರುಣ ಜನಾಂಗ ಗುಳೆ ಹೊರಟಂತೆ ತೋರುವ ಪರಿಸ್ಥಿತಿಯಲ್ಲಿ, ಮೂಲ ವಿಜ್ಞಾನ, ಸಾಹಿತ್ಯ, ಮಾನವಿಕ ಮೊದಲಾದ ವಿಚಾರಗಳಲ್ಲಿ ಒಂದು ಬಗೆಯ ಅವಜ್ಞತೆ ಬೆಳೆಯುತ್ತಿದೆ. ಕನ್ನಡ ಪರವಾದ ಚಳುವಳಿಗಳ ಮೇಲೆ ಚಳುವಳಿಗಳು ನಡೆದರೂ, ಸರ್ಕಾರವೇ ಕಾಲದಿಂದ ಕಾಲಕ್ಕೆ ರಚಿಸಿದ ಆಯೋಗಗಳು ಎಷ್ಟು ವರದಿಗಳನ್ನು ಸಲ್ಲಿಸಿದರೂ, ಅವುಗಳ ಶಿಫಾರಸುಗಳು ಪರಿಣಾಮಕಾರಿಯಾಗಿ ಜಾರಿಗೆ ಬರುತ್ತಿಲ್ಲ. ಕನ್ನಡವನ್ನು ಆಡಳಿತದ ಎಲ್ಲ ಹಂತಗಳಲ್ಲಿಯು ಅನುಷ್ಠಾನಕ್ಕೆ ತರಬೇಕಾದರೆ ಮೊದಲು ಸರ್ಕಾರೀ ಕಛೇರಿಯ ಗಣಕಯಂತ್ರಗಳಲ್ಲಿ ಕನ್ನಡವನ್ನು ಕಡ್ಡಾಯವಾಗಿ ಅಳವಡಿಸುವ ಮತ್ತು ಕನ್ನಡವನ್ನು ಕಂಪ್ಯೂಟರ್ ಯುಗದ ಅಗತ್ಯಕ್ಕೆ ತಕ್ಕಂತೆ ಸಜ್ಜುಗೊಳಿಸುವ ಕಾರ್ಯವು ನಡೆಯಬೇಕಾಗಿದೆ. ಕಡೆಯ ಪಕ್ಷ ಪ್ರಾಥಮಿಕ ಶಾಲಾ ಶಿಕ್ಷಣದ ಹಂತದಲ್ಲಾದರೂ ಮಾತೃಭಾಷಾ ಶಿಕ್ಷಣ ಮಾಧ್ಯಮವನ್ನು ಈ ಸುವರ್ಣ ಕರ್ನಾಟಕ ಸಂದರ್ಭದ ಕೊಡುಗೆ ಎಂಬಂತೆ ಸರ್ಕಾರ ಕಾರ್ಯಗತಗೊಳಿಸುವುದರ ಮೂಲಕ ಸಮಾನ ಶಿಕ್ಷಣ ನೀತಿಗೆ ಅಡಿಪಾಯ ಹಾಕಬೇಕಾಗಿದೆ. ಹಾಗೆಯೇ ಪ್ರಾಥಮಿಕ ಶಾಲಾ ಶಿಕ್ಷಣದ ಮೊದಲ ತರಗತಿಯಿಂದಲೇ ಇಂಗ್ಲಿಷನ್ನು ಕಡ್ಡಾಯವಾಗಿ ಕಲಿಸಬೇಕೆಂಬ ಸರ್ಕಾರದ ನಿರ್ಧಾರವು ಈ ಕುರಿತು ಈವರೆಗೆ ನಡೆದಿರುವ ಚರ್ಚೆಗಳ ಹಿನ್ನೆಲೆಯಲ್ಲಿ, ಭಾಷಾಶಾಸ್ತ್ರಜ್ಞರ ಮನೋವಿಜ್ಞಾನಿಗಳ ಮತ್ತು ಶಿಕ್ಷಣತಜ್ಞರ ಪರಿಣತ ಸಮಿತಿಯೊಂದರ ಪರಿಶೀಲನೆಗೆ ಒಳಪಟ್ಟು ಅನಂತರ ಪರಿಷ್ಕೃತಗೊಂಡು ಜಾರಿಗೆ ಬರುವುದು ಸೂಕ್ತವಾಗಿದೆ. ಕನ್ನಡದ ಸಮಸ್ಯೆಗಳನ್ನು ಕುರಿತ ಈ ಪಟ್ಟಿಯನ್ನು ಹೀಗೇ ವಿಸ್ತರಿಸಲು ಇದು ಸಮಯವಲ್ಲ. ಮುಖ್ಯವಾದ ಮಾತೆಂದರೆ ಕನ್ನಡದ ಈ ಎಲ್ಲ ಸಮಸ್ಯೆಗಳನ್ನು ನಿಭಾಯಿಸುವ ದೃಢವಾದ ಮತ್ತು ಒಮ್ಮತದ ರಾಜಕೀಯ ಸಂಕಲ್ಪವೊಂದು ಇನ್ನೂ ಮೂಡಬೇಕಾಗಿದೆ.

ಕರ್ನಾಟಕದ ಸುವರ್ಣಮಹೋತ್ಸವದ ಸಂದರ್ಭದಲ್ಲಿ ಕರ್ನಾಟಕವನ್ನೂ ಒಳಗೊಂಡಂತೆ ನಮ್ಮ ಸುತ್ತಣ ಜಗತ್ತು ಅನೇಕ ಆತಂಕಗಳಿಂದ ಅಸ್ವಸ್ಥವಾಗಿದೆ. ಅವುಗಳಲ್ಲಿ ಕೆಲವನ್ನು ಹೆಸರಿಸುವುದಾದರೆ : ಅಭಿವೃದ್ಧಿಯ ಹೆಸರಿನಲ್ಲಿ ನಿರಂತರವಾಗಿ ನಡೆಯುತ್ತಿರುವ ಪರಸರನಾಶದ ತಲ್ಲಣಗಳು; ಕೇವಲ ಮನರಂಜನೆಯ ಸರುಕುಗಳನ್ನೆ ಸಂಸ್ಕೃತಿ ಎಂದು ಬಿಂಬಿಸುತ್ತಿರುವ ವಿವಿಧ ದೃಶ್ಯಮಾಧ್ಯಮಗಳು, ಸರ್ವೋದಯಮುಖಿಯಾದ ಪ್ರಜಾಪ್ರಭುತ್ವದ ಸಂಕಲ್ಪವನ್ನೆ ನಿಯಂತ್ರಿಸುತ್ತಿರುವ ಬಂಡವಾಳಶಾಹೀ ಶಕ್ತಿಗಳು; ಬಹುಕಾಲದಿಂದ ಅದು ಹೇಗೋ ಕಾಪಾಡಿಕೊಂಡುಬಂದ

ಕೋಮುಸಾಮರಸ್ಯದ ಆಕೃತಿಗಳನ್ನು ಭಗ್ನಗೊಳಿಸುತ್ತಿರುವ ವಿಚ್ಛಿದ್ರಕಾರಕ ಶಕ್ತಿಗಳು ಮತ್ತು ಇದರ ವಿಸ್ತರಣೆಯೋ ಎಂಬಂತಿರುವ ಭಯೋತ್ಪಾದಕತೆಯ ಪಿಡುಗುಗಳು; ದೇಶಾದ್ಯಂತ ವ್ಯಾಪಿಸಿರುವ ಭ್ರಷ್ಟಾಚಾರದ ಜಾಲಗಳು; ನಾಳಿನ ನಾಯಕರಾಗಿ ರೂಪುಗೊಳ್ಳಬೇಕಾದ ಈ ಹೊತ್ತಿನ ಯುವಕರಿಗೆ ಯಾವ ಮೌಲ್ಯಾಧಾರಿತ ಮಾದರಿಗಳನ್ನೂ ಒದಗಿಸಲಾರದಷ್ಟು ಭ್ರಷ್ಟಗೊಂಡಿರುವ ಪ್ರಸ್ತುತ ರಾಜಕಾರಣದ ವಿದ್ಯಮಾನಗಳು – ಈ ಎಲ್ಲವೂ ಮನುಕುಲದ ನಿದ್ದೆಗೆಡಿಸುವ ಸಂಗತಿಗಳಾಗಿವೆ.

ಇಂಥ ಒಂದು ವ್ಯವಸ್ಥೆಯ ಭಾಗವಾಗಿರುವ ನಾವು, ಅದರಿಂದ ಹೊರಗೆ ನಿಂತು ಟೀಕಿಸುವ ಬದಲು, ಈ ವ್ಯವಸ್ಥೆ ಹೀಗಿರುವುದಕ್ಕೆ ನಾವೂ ಒಂದಲ್ಲ ಒಂದು ರೀತಿಯಲ್ಲಿ ಕಾರಣವಾಗಿದ್ದೇವೆ ಎನ್ನುವ ಪಾಪಪ್ರಜ್ಞೆಯೊಂದು ಸಾರ್ವತ್ರಿಕವಾಗಿ ಎಚ್ಚರಗೊಳ್ಳುವುದಾದರೆ, ಅದು ಬಹುಶಃ ನಾಳಿನ ಶುಭೋದಯಕ್ಕೆ ನಾಂದಿಯಾಗಬಹುದೆಂದು ತೋರುತ್ತದೆ.

ಮುಗಿಸುವ ಮುನ್ನ ಸರ್ಕಾರಕ್ಕೆ ನನ್ನದೊಂದು ಸೂಚನೆಯನ್ನು ಕೊಡಲು ಬಯಸುತ್ತೇನೆ:

ದೇವನಹಳ್ಳಿಯಲ್ಲಿ ನಿರ್ಮಾಣವಾಗುತ್ತಿರುವ ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಯಾವ ಹೆಸರಿಡಬೇಕೆನ್ನುವ ಬಗ್ಗೆ ಹಲವು ಹೆಸರುಗಳು ಸೂಚಿತವಾಗಿವೆ. ಆದರೆ ಕನ್ನಡದ ನೆಲದಲ್ಲಿ ನಿಂತು ವಿಶ್ವಮಾನವ ಕಲ್ಪನೆಯನ್ನು ಮಂಡಿಸಿದ ಈ ಶತಮಾನದ ಶಿಖರ ಸಾಹಿತಿ ಕುವೆಂಪು ಅವರ ಹೆಸರನ್ನಿಡಬೇಕೆಂದು ನಾನು ಸೂಚಿಸುತ್ತೇನೆ.

ಮತ್ತೆ ಮತ್ತೆ ಕವಿಯುವ ಕತ್ತಲೆಯಲ್ಲಿ ಪುಟ್ಟದೊಂದು ಹಣತೆ ಹಚ್ಚುವ ಸಾಹಿತ್ಯ ಕಾಯಕದಲ್ಲಿ ತೊಡಗಿರುವ ನನಗೆ ಕರ್ನಾಟಕ ಸರ್ಕಾರವು 'ರಾಷ್ಟ್ರಕವಿ' ಎಂಬ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಅದಕ್ಕಾಗಿ ನಾನು ಕರ್ನಾಟಕ ಸರ್ಕಾರಕ್ಕೆ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಸಲ್ಲಿಸುತ್ತೇನೆ. ❑

ಸ್ನೇಹ ಕಾರ್ತೀಕ

ಚೆನ್ನವೀರ ಕಣವಿ

ಮುಖವಾಡಗಳ ಅಟಮಟದ ನಟನೆಯ ನಡುವೆ
ದಿಟವ ದಿಟ್ಟಿಸಿ ಧೈರ್ಯದಲಿ ಮುಂದಿಟ್ಟ ಹೆಜ್ಜೆ –
ಬುಟ್ಟಿಗಟ್ಟಲೆ ಮಾತು: ಹೊರಿಸಿದವರಿಗೆ ಒಜ್ಜೆ.
ಶ್ರುತಿಗೆ ಸರಿಯಾದ ಕೃತಿ; ಏಕೆ ಉಪಕೃತಿ ಗೊಡವೆ?
ಕತ್ತಲೆಯ ಜೇರುಂಡೆ ಮೇಳಕುತ್ತರವಾಗಿ
ನಕ್ಷತ್ರಗಳ ಮುಗುಳು ನಗೆ, ಬಾನ ಗಂಭೀರ
ಬಗೆ: ಧ್ಯಾನ. ನಸುಕಿನಲಿ ನಿದ್ದೆತಿಳಿದೆದ್ದವರ
ಕಂಡರಳುವದು ಕೈ ಮುಗಿದ ಮೊಗ್ಗೆ ತಾನಾಗಿ.
ನೋವು ತುಂಬಿದ ನಾವೆ ನಡೆಸಿ ಕವಿತೆಯ ಹುಟ್ಟು
ಅಟ್ಟಹಾಸದ ದೂರ ತೆರೆಯಾಚೆ ಸೌಂದರ್ಯ
ಶೋಧ. ಚಿಂತನ ಕ್ಷಿತಿಜ:ಗುರಿ ನಿರಿಗೊಳಿಪ ಕಾರ್ಯ
ತತ್ಪರತೆ. ಸತ್ತ್ವವೆಲ್ಲಿದೆ ರಜ–ತಮವ ಬಿಟ್ಟು?
ನೂರು ಶರದೈಸಿರಿಗೆ ಏರಬೇಕಿದೆ ಜೇಕ–
ತೂಕ. ಅದಕೆ ಹಾರೈಕೆ; ಸ್ನೇಹಕಾರ್ತೀಕ.

ವರ್ತಮಾನದ ಸಾಂಸ್ಕೃತಿಕ ನಾಯಕ : ಜಿ.ಎಸ್.ಎಸ್.

ಎಚ್.ಎಸ್. ವೆಂಕಟೇಶಮೂರ್ತಿ

ಸುವರ್ಣ ಕರ್ನಾಟಕ ವರ್ಷದ ಸಂಭ್ರಮದ ಸಂದರ್ಭದಲ್ಲಿ ಡಾ। ಜಿ.ಎಸ್. ಶಿವರುದ್ರಪ್ಪನವರಿಗೆ ಕರ್ನಾಟಕ ಸರ್ಕಾರ ಘೋಷಿಸಿರುವ ರಾಷ್ಟ್ರಕವಿ ಪುರಸ್ಕಾರವನ್ನು ಕನ್ನಡ ನಾಡೇ ಸಂಭ್ರಮೋತ್ಸಾಹಗಳಿಂದ ಸ್ವಾಗತಿಸಿದೆ. ಇದು ಈ ನೇಮಕದ ಔಚಿತ್ಯವನ್ನು ಎತ್ತಿ ಸಾರುತ್ತಿದೆ. ನಾಡಿನ ಹೆಸರಾಂತ ಸಾಹಿತ್ಯ ಸಾಧಕರಾದ ಡಾ। ಜಿ.ಎಸ್. ಶಿವರುದ್ರಪ್ಪ ಅವರು ತಮ್ಮ ಸಾಹಿತ್ಯಕ ಜೀವನದಲ್ಲಿ ಹೇಗೋ ಹಾಗೇ ನಾಡಿನ ಸಾಂಸ್ಕೃತಿಕ ಜೀವನದಲ್ಲೂ ತಮ್ಮ ವ್ಯಕ್ತಿತ್ವದ ಛಾಪು ಒತ್ತಿದವರು. ಹಾಗಾಗಿ ಜಿ.ಎಸ್.ಎಸ್. ಅವರ ಬರವಣಿಗೆಯಷ್ಟೇ ಅವರ ಬದುಕು ಕೂಡಾ ಮುಖ್ಯ. ನಾಡಿನ ಒಟ್ಟಾರೆ ಸಾಮಾಜಿಕ–ಸಾಂಸ್ಕೃತಿಕ ಬಾಳುವೆಯಲ್ಲಿ ಶಿವರುದ್ರಪ್ಪನವರ ಬದುಕು ಸಮ್ಮಿಳಿತವಾಗಿ ಹೋಗಿದೆ. ನಾಡಿನ ಸಾಮಾಜಿಕ ಬದುಕಿನ ಸಂದಿಗ್ಧ ಕ್ಷಣಗಳಲ್ಲಿ ಉದ್ದಕ್ಕೂ ಅವರು ತೋರುತ್ತಾ ಬಂದಿರುವ ಕ್ರಿಯಾಶೀಲ ಸ್ಪಂದನ ಮತ್ತು ಮುಖ್ಯ ಐತಿಹಾಸಿಕ ಸಂದರ್ಭಗಳಲ್ಲಿ ಅವರು ತೆಗೆದುಕೊಳ್ಳುತ್ತಾ ಬಂದಿರುವ ನಿರ್ಣಾಯಕವೆನ್ನಬಹುದಾದ ಸಮಷ್ಟಿಪರವಾದ ನಿಲುವುಗಳಿಂದ ಜಿ.ಎಸ್.ಎಸ್. ನಾಡಿನ ಸಾಂಸ್ಕೃತಿಕ–ಸಾಮಾಜಿಕ ಬದುಕಿನ ದರ್ಶಕಪ್ರಜ್ಞೆಯಾಗಿ ಪರಿಣಮಿಸಿದ್ದಾರೆ. ಹಾಗಾಗಿ ಇಂಥ ತುಂಬಿಕೊಂಡ ವ್ಯಕ್ತಿತ್ವ ರಾಷ್ಟ್ರಕವಿಯೆಂದು ಗೌರವಿಸಲ್ಪಡುವುದು ತೀರ ಯುಕ್ತವೂ ಸಹಜವೂ ಆಗಿದೆ.

ಡಾ। ಜಿ.ಎಸ್. ಶಿವರುದ್ರಪ್ಪನವರು ಕಳೆದ ನಾಲ್ಕು ದಶಕಗಳಿಂದ ನಿರಂತರವಾಗಿ ಸಾಹಿತ್ಯಕ ಅಭಿಯೋಗದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಕವಿ. ಈ ಅಭಿಯೋಗದಲ್ಲಿ ಅವರ ವೈಯಕ್ತಿಕ ಸಾಹಿತ್ಯ ರಚನೆಯ ಬಹು ದೊಡ್ಡ ಪಾಲು ಇರುವಂತೆಯೇ ಒಟ್ಟಾರೆ ಸಾಹಿತ್ಯ ಸಂಸ್ಕೃತಿಯನ್ನು ಜೀವಂತವೂ ಸ್ಪಂದನಶೀಲವೂ ಮುಕ್ತವೂ ಆಗಿ ಇಡುವಲ್ಲಿ ಅವರು ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾಗಿ ಮತ್ತು ಆನಂತರ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸುವಾಗ ನಡೆಸಿದ ವಿಮರ್ಶಾ ಜಾಗರಣೆ, ಪುಸ್ತಕ ಪ್ರಕಟಣೆ, ವಿಚಾರ ಸಂಕಿರಣಗಳ ನಿಯೋಜನೆ, ಹೊಸ ಯುಗಕ್ಕೆ ಅಗತ್ಯವಾದ ಶಿಕ್ಷಣ ಪಠ್ಯಗಳ ನಿರ್ಮಾಣ, ಸಾಹಿತ್ಯಕ ಪರಂಪರೆಯ ಮರುಅಧ್ಯಯನ, ಹೊಸ ಸಾಹಿತ್ಯಕ ಪ್ರತಿಭಾ ಪೀಳಿಗೆಯನ್ನು ಗುರುತಿಸಿ, ಆ ಪ್ರತಿಭೆಗಳ ಅರಳುವಿಕೆಗೆ ತಕ್ಕ ವೇದಿಕೆಗಳ ನಿರ್ಮಾಣ–ಹೀಗೆ ಬಹುಮುಖೀ ನೆಲೆಯಲ್ಲಿ ತಮ್ಮ ಕ್ರಿಯಾಶೀಲತೆಯನ್ನು ತೊಡಗಿಸಿಕೊಂಡವರು. ಜೊತೆಗೆ ಕವಿವರ್ಯ ಕುವೆಂಪು ಅವರ ವೈಚಾರಿಕ ಪ್ರಜ್ಞೆ ಮತ್ತು ಕ್ರಾಂತಿಕಾರಿ ನಿಲುವುಗಳನ್ನು ತಮ್ಮ ಬದುಕಿನುದ್ದಕ್ಕೂ ಕನ್ನಡದ ಮಣ್ಣಿನಲ್ಲಿ ಬಿತ್ತಿ ಬೆಳೆಯಲು ಯತ್ನಿಸುತ್ತಾ ಬಂದವರು. ಆದುದರಿಂದಲೇ ಡಾ। ಜಿ.ಎಸ್.ಎಸ್. ಅವರ ಬಾಳ್ವೆಯ ವ್ಯಾಪ್ತಿ ಬಹು ವಿಸ್ತೃತವಾದುದು; ಸರ್ವ ವ್ಯಾಪಿಯಾದುದು.

ಸಾಹಿತ್ಯಕ ಸಾಧನೆಗಳು:

ಡಾ। ಜಿ.ಎಸ್. ಶಿವರುದ್ರಪ್ಪನವರು ಕವಿಯೆಂದೇ ಖ್ಯಾತರಾದವರು. ಆದರೂ ಸಾಹಿತ್ಯ ವಿಮರ್ಶೆ ಮತ್ತು ಕಾವ್ಯಮೀಮಾಂಸೆಗಳ ಕ್ಷೇತ್ರದಲ್ಲಿ ಅವರು ಮಾಡಿರುವ ಸಾಧನೆ ಯಾವ ನೆಲೆಯಲ್ಲೂ ಸಾಮಾನ್ಯವೆನಿಸುವಂಥದಲ್ಲ. ಪ್ರೊ। ಕೀರ್ತಿನಾಥ ಕುರ್ತಕೋಟಿಯವರು ಗುರುತಿಸಿರುವಂತೆ ಜಿ.ಎಸ್.ಎಸ್. ಕವಿ ಮತ್ತು ಸಾಹಿತ್ಯ ವಿದ್ವಾಂಸರು. ಅವರ ವಿಮರ್ಶೆ ಕನ್ನಡದ ಸಮಗ್ರ ಸಾಹಿತ್ಯದ

ವಿಸ್ತರಣೆಯಲ್ಲಿ ಕ್ರಿಯಾಶೀಲವಾಗಿರುವಂಥದ್ದು. ಹಳಗನ್ನಡ, ನಡುಗನ್ನಡ, ಆಧುನಿಕ ಕನ್ನಡ ಈ ಮೂರು ಜಗತ್ತನ್ನು ಆವರಿಸಿರುವಂಥದ್ದು. ಇಷ್ಟು ಗಾಢವಾದ ಪರಂಪರೆಯ ಅರಿವಿನೊಂದಿಗೆ ವಿಮರ್ಶೆಯಲ್ಲಿ ತೊಡಗಿಕೊಂಡಿರುವ ಜಿ.ಎಸ್.ಎಸ್. ಅವರ ಮನಸ್ಸು ಆ ಕಾರಣದಿಂದಲೇ ಅನೇಕ ಅಪೂರ್ವ ಒಳನೋಟಗಳನ್ನು ನಿರಾಯಾಸವಾಗಿ ವಿಮರ್ಶಾನುಸಂಧಾನದಲ್ಲಿ ತನ್ನ ಒಡಲಲ್ಲಿ ಹೊಳಯಿಸಲಬಲ್ಲದು. ಪಂಪ, ವಚನಕಾರರು, ರಾಘವಾಂಕ, ರತ್ನಾಕರವರ್ಣಿ, ಕುಮಾರವ್ಯಾಸ ಮೊದಲಾದವರ ಬಗ್ಗೆ ಅವರು ಬರೆದಿರುವ ಲೇಖನಗಳು ಆಯಾ ಲೇಖಕರನ್ನು ಹೊಸ ರೀತಿಯಲ್ಲಿ ನೋಡುವುದನ್ನು ಒತ್ತಾಯಿಸುವಂಥ ಲೇಖನಗಳು. ವಿಮರ್ಶೆಯ ಜೊತೆಗೆ ಕಾವ್ಯಮೀಮಾಂಸಾ ಕ್ಷೇತ್ರದಲ್ಲೂ ಜಿ.ಎಸ್.ಎಸ್. ಅವರದ್ದು ಅಪೂರ್ವವೆನ್ನಿಸುವಂಥ ಸಾಧನೆ. ಅವರ ಕಾವ್ಯಾರ್ಥ ಚಿಂತನ ಕಾವ್ಯಮೀಮಾಂಸಾ ಕ್ಷೇತ್ರಕ್ಕೆ ಅತ್ಯಂತ ಬೆಲೆಯುಳ್ಳ ಕಾಣಿಕೆಯಾಗಿದೆ. ಪ್ರವಾಸ ಕಥನ ಅವರಿಗೆ ಪ್ರಿಯವಾದ ಇನ್ನೊಂದು ಸಾಹಿತ್ಯಕ ಮಾರ್ಗ. ಸ್ವಭಾವತಃ ಪ್ರವಾಸ ಪ್ರಿಯರಾದ ಜಿ.ಎಸ್.ಎಸ್. ಒಂದು ಬಗೆಯ ಜಂಗಮತ್ವವನ್ನು ಮೊದಲಿನಿಂದಲೂ ತಮ್ಮ ಮೇಲೆ ಆರೋಪಿಸಿಕೊಂಡು ಬಂದಂಥವರು. ಅವರ ಲೋಕ ಸಂಗ್ರಹ ಇಡೀ ಜಗತ್ತನ್ನೇ ಆತ್ಮಸಾತ್ ಮಾಡಿಕೊಳ್ಳುವ ಹಟವುಳ್ಳದ್ದು. ಅದು ಪರ ಮತ್ತು ಸ್ವ ಎರಡರಲ್ಲೂ ಉತ್ಸಾಹದಿಂದ, ಆದರೆ ತನ್ನ ವಿಮರ್ಶಾ ನಿಲುವನ್ನು ಕಳೆದುಕೊಳ್ಳದೆ ತೊಡಗಿಕೊಳ್ಳುವಂಥದ್ದು. ಅವರ ಪ್ರವಾಸ ಕಥನದಲ್ಲಿ ಅನ್ವೇಷಣೆಯು, ರಾಜಕೀಯ ಸ್ವರೂಪದ್ದಾಗಿರುವುದಕ್ಕಿಂತ ಶ್ರೀಸಾಮಾನ್ಯನ ಬದುಕಿನ ಅನುಸಂಧಾನ ಮತ್ತು ಆಯಾ ಪ್ರಾಂತ್ಯಗಳ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಅನುಸಂಧಾನದಲ್ಲಿ ಆಸಕ್ತಿ ಉಳ್ಳಂಥದ್ದು. ಜನರ ಬಾಳುವೆಯ ರೀತಿ, ನೆಲೆ, ನಂಬುಗೆಗಳನ್ನು ಬೆರಗಿನಿಂದ ನೋಡುತ್ತಾ, ಜೀವನ ಮೌಲ್ಯಗಳ ವಿಮರ್ಶಾತ್ಮಕ ಅನುಸಂಧಾನದಲ್ಲಿ ತೊಡಗಿಕೊಳ್ಳುವಂಥದ್ದು. ಜೊತೆಗೆ ಪ್ರಕೃತಿಯ ಭವ್ಯ ಸೌಂದರ್ಯದಲ್ಲಿ ತನ್ಮಯಗೊಳ್ಳುವಂಥದ್ದು.

ಡಾ। ಜಿ.ಎಸ್. ಶಿವರುದ್ರಪ್ಪನವರು ಐವತ್ತು ವರ್ಷಗಳಿಂದ ನಿರಂತರವಾಗಿ ಕಾವ್ಯ ರಚನೆ ಮಾಡುತ್ತಾ ಬಂದಿದ್ದಾರೆ. ಹಾಡುವುದು ಕವಿಯೊಬ್ಬನ ಅನಿವಾರ್ಯ ಕರ್ಮ ಎಂದವರು ಅವರು. ಕನ್ನಡದ ಜನತೆ ಅವರ ಹಾಡನ್ನು ಪ್ರೀತಿಯಿಂದ ಕೇಳುತ್ತಾ ಬಂದಿದೆ. ಅವರ ಕವನ ಸಂಗ್ರಹಗಳು ಅನೇಕ ಮುದ್ರಣಗಳನ್ನು ಕಂಡಿರುವುದೇ ಅವರ ಜನಪ್ರಿಯತೆಗೆ ಸಾಕ್ಷಿ. ಜಿ.ಎಸ್.ಎಸ್. ಅವರ ಸಮಗ್ರ ಕಾವ್ಯದ ಮೂರು ಆವೃತ್ತಿಗಳು ಬಂದಿವೆ. ಅವರ ಕಾವ್ಯದ ಸುಭಗತೆ, ಸಂವೇದನಾಶೀಲತೆ, ಅಂದಂದಿನ ಅನುಭವಕ್ಕೆ ಪ್ರಾಮಾಣಿಕ ಅಭಿವ್ಯಕ್ತಿ ಕೊಡುವ ತುಡಿತ ಇವು ಅವರ ಜನಪ್ರಿಯತೆಗೆ ಕಾರಣಗಳು. ಕನ್ನಡ ಭಾಷೆಯ ಹೃದಯವನ್ನು ಬಲ್ಲ ಕವಿ ಜಿ.ಎಸ್.ಎಸ್. ಸಹಜವಾದ ಕನ್ನಡ ನುಡಿಗಟ್ಟಿನಲ್ಲಿ, ಮಾತುಗಾರಿಕೆಯ ಎಲ್ಲ ಚೆಲುವು, ಶಕ್ತಿಯನ್ನು ಸೂರೆ ಮಾಡುತ್ತಾ ಅವರ ಕವನಗಳು ಆಕಾರ ತಾಳುತ್ತವೆ. ವ್ಯಷ್ಟಿ ಮತ್ತು ಸಮಷ್ಟಿಯ ಅನ್ಯೋನ್ಯತೆಯನ್ನು ಸದಾ ಹಾರೈಸುವ ಜಿ.ಎಸ್.ಎಸ್. ಜನತೆಗೆ ಪ್ರಿಯವಾದುದರಲ್ಲಿ ಆಶ್ಚರ್ಯವಿಲ್ಲ. ಯಾವ ಕಾವ್ಯ, ಸಮುದಾಯವನ್ನು ಗೌರವಿಸುತ್ತೋ, ಯಾವ ಕಾವ್ಯ ಸಮುದಾಯದ ಸ್ಪಂದನ ಮತ್ತು ಆಶಯಗಳಿಗೆ ದನಿಯಾಗುತ್ತದೋ ಅಂತಹ ಕಾವ್ಯವನ್ನು ಸಮುದಾಯವು ಪ್ರೀತಿಯಿಂದ ಒಪ್ಪಿಕೊಳ್ಳುತ್ತದೆ. ವಾಸ್ತವದ ಕಠೋರತೆಯ ನಡುವೆ ಒಂದು ಆಸೆಯ ಹಂಬಲ ಜನತೆಗೆ ಬೇಕಾಗಿತ್ತು. ಅದನ್ನು ಜಿ.ಎಸ್.ಎಸ್. ಕಾವ್ಯ ಸಮಕಾಲೀನ ನಿಷ್ಠುರತೆಯ ಅರಿವಿನೊಂದಿಗೇ ಜನತೆಗೆ ಒದಗಿಸಿತು.

ಜಿ.ಎಸ್.ಎಸ್. ಕಾವ್ಯ ರಚನೆ ಆರಂಭಿಸಿದ ಕಾಲ ಒಂದು ಸಂಧಿಕಾಲ. ೧೯೫೧ರಲ್ಲಿ ಅವರ 'ಸಾಮಗಾನ' ಪ್ರಕಟವಾಯಿತು. ದೇಶದ ಹಿತದಲ್ಲಿ ಹುರಿಗಟ್ಟಿಕೊಂಡು, ಮಿಂಚಿನ ಚಾವಟಿ ಆಡಿಸಿದ್ದ

ಸಮಾಜ, ಎಳೆ ಬಿಡಿಸಿಕೊಂಡು ಸ್ವಹಿತದ ಕಡೆಗೆ ಹೊರಳಿಕೊಳ್ಳುತ್ತಿದ್ದ ಸಂಧಿ ಸಮಯವದು. ಇಡೀ ಇಂಡಿಯಾ ಒಂದು ಎನ್ನುವಂತಿದ್ದದ್ದು, ಸ್ವಾತಂತ್ರ್ಯ ಬಂದ ಮೇಲೆ ಎಲ್ಲರೂ ಬೇರೆ ಬೇರೆ ಅನ್ನುವ ಹಾಗಾಗಿತ್ತು. ಆದುದರಿಂದ ಇಂಡಿಯಾದ ಉತ್ಸಾಹದ ಭೂಮಿಕೆಯು ಮನಸ್ಸು ವಿಷಾದದ ಭೂಮಿಕೆಗೆ ಅನಿವಾರ್ಯವಾಗಿ ಜಾರಿಕೊಳ್ಳತೊಡಗಿತು. ಸಾಹಿತ್ಯದಲ್ಲಿ ಈ ಸಂವೇದನೆಯ ಗುರುತು ಸ್ಪಷ್ಟವಾಗಿ ಕಾಣಿಸತೊಡಗಿತು. ನವೋದಯದ ಉತ್ಸಾಹಪರ್ವ ಮುಗಿದು ನವ್ಯದ ವಿಷಾದ ಪರ್ವ, ಅಶಾಂತಿ ಪರ್ವ ಪ್ರಾರಂಭವಾದ ಸಮಯ. ಅದೇ ಹೊತ್ತಿನಲ್ಲಿ ಭೌತಿಕವಾಗಿ ಹಡಗು ಹತ್ತಿದ ವಸಾಹತುಶಾಹಿ ನಿರ್ದೇಹಿಯಾಗಿ ಭಾರತವನ್ನು ಹಿಂಡಿ ಕಾಡತೊಡಗಿದ ಸಂಧಿಸಮಯವದು. ಜಿ.ಎಸ್.ಎಸ್. ಕಾವ್ಯ ಕ್ರಿಯೆಗೆ ತೊಡಗಿದ್ದು ಇಂತಹ ಸಂದರ್ಭದಲ್ಲಿ. ಆದುದರಿಂದಲೇ ನವ್ಯ ಕವಿಗಳಂತೆ ವಿಷಾದ ವಿಡಂಬನೆ ಜಿ.ಎಸ್.ಎಸ್. ಕಾವ್ಯದಲ್ಲೂ ಪ್ರಧಾನ ಅಂಶವಾಗಿದೆ. ಮುಖ್ಯ ವ್ಯತ್ಯಾಸವೆಂದರೆ ಇಂತಹ ವಿಷಮ ಸಮಯದಲ್ಲಿ ಜಿ.ಎಸ್.ಎಸ್. ತಮ್ಮ ಕತ್ತಲಿನಲ್ಲಿನ ಯಾನವನ್ನು ನವೋದಯದ ಹಿರಿಯರಿಂದ ಪಡೆದಿದ್ದ ಆದರ್ಶ ಮತ್ತು ಕನಸುಗಾರಿಕೆಯ ದೊಂದಿ ಹಿಡಿದು ಮುಂದುವರೆಸಿದರು. ಆದರೆ ಸ್ವಾತಂತ್ರ್ಯೋತ್ತರದ ಎಲ್ಲ ಕವಿಗಳಂತೆ ಜಿ.ಎಸ್.ಎಸ್. ಅವರದ್ದೂ ವಿಷಾದದಲ್ಲಿ ಅದ್ದಿದ ದನಿ. ತೀವ್ರವಾದ ವಾಸ್ತವಿಕ ಅರಿವು ಮತ್ತು ಕನಸು ಕಾಣುವ ಹುಚ್ಚು ಎರಡೂ ಏಕತ್ರ ಮುಖಾಮುಖಿಯಾಗುವ ವಿಶಿಷ್ಟ ಮನಃಸ್ಥಿತಿಯಲ್ಲಿ ಕಾವ್ಯ ರಚಿಸುತ್ತಾ ಜಿ.ಎಸ್.ಎಸ್. ನವೋದಯದಿಂದ ಭಿನ್ನರಾಗಿದ್ದರು. ಹಾಗೇ ಆಶಾದೀಪವನ್ನು ಆರದಂತೆ ನೋಡಿ ಕೊಳ್ಳುವ ಹುಚ್ಚು ಹಟದಲ್ಲಿ ತೊಡಗಿ ನವ್ಯರಿಂದಲೂ ಭಿನ್ನರಾಗಿದ್ದರು! ಇದು ಅವರ ಇಡೀ ಕಾವ್ಯದ ಸ್ವರೂಪ ಮತ್ತು ಚರಿತ್ರೆಯನ್ನು ನಿರ್ಮಿಸಿದ ಮುಖ್ಯ ಅಂಶವಾಗಿದೆ.

ಜಿ.ಎಸ್.ಎಸ್. ಅವರದ್ದು ಪ್ರಧಾನವಾಗಿ ಇಹನಿಷ್ಠ ಮನೋಧರ್ಮ. 'ನೆಲವೇ ನನ್ನ ವಾಹನ' ಎನ್ನುವ ಕಾವ್ಯ ಅವರದ್ದು. ಆಕಾಶಯಾನಕ್ಕೆ ಅವರ ಕಾವ್ಯ ವಿಮುಖವಾಗಿದೆ. ದೊಡ್ಡ ದೊಡ್ಡ ಮಾತಾಡುತ್ತಾ ದಿನ ದಿನದ ಸರಳ ಸಾಧಾರಣ ಬದುಕಿಗೆ ಅಪಮಾನ ಮಾಡುವವರನ್ನು ಕಂಡರೆ ಅವರಿಗೆ ಆಗುವುದಿಲ್ಲ. ಈ ನೆಲೆಯಲ್ಲಿ ನಿಜಕ್ಕೂ ಅವರು ಶ್ರೀಸಾಮಾನ್ಯತೆಯ ಆರಾಧಕರು. ಪ್ರಜಾಪ್ರಭುತ್ವಕ್ಕೆ ಹೇಳಿ ಮಾಡಿಸಿದ ಮನೋಧರ್ಮವಿದು. ವ್ಯಕ್ತಿ ಒಂಟಿಯಾದಾಗ ಅವನು ಸಿನಿಕನಾಗಬೇಕು. ಅಥವಾ ವಿನಯಶಾಲಿಯಾಗಬೇಕು. ಜಿ.ಎಸ್.ಎಸ್. ಕಾವ್ಯ ವ್ಯಕ್ತಿತ್ವ ಹೀಗೆ ವಿನಯದಲ್ಲಿ ರೂಪಗೊಂಡ ಕಾವ್ಯ ವ್ಯಕ್ತಿತ್ವ

ಹೇಗೋ ನನ್ನ ಪಾಡಿಗೆ ನಾನು ಬದುಕುತ್ತೇನೆ
ಇದ್ದಷ್ಟು ನೆಲವ ಉತ್ತಿ ಬಿತ್ತಿ ನೀರೆರೆದು
ಮಲಗಿರುವ ಬೀಜಗಳ ಕಣ್ಣು ತೆರೆಸುತ್ತೇನೆ.
ನಾಳೆ ಈ ಸಸಿಗಳೆಲ್ಲಾ ವಟವೃಕ್ಷಗಳಾಗಿ
ಸಾವಿರ ಜನಕ್ಕೆ ನೆರಳಾಗಲೆಂಬ
ಮಹದಾಸೆ ಇರದಿದ್ದರು
ಒಂದೆರಡಾದರೂ ಬೀಜವಾಗುವ
ಹಣ್ಣು ಬಿಟ್ಟಾವೆಂದು ಕಾಯುತ್ತೇನೆ.

ಹೀಗು ಉತ್ತು ಬಿತ್ತಿ ಮಲಗಿರುವ ಬೀಜದ ಕಣ್ಣು ತೆರೆಸುವ ಕಾರ್ಯವನ್ನು ಜಿ.ಎಸ್.ಎಸ್. ತಮ್ಮ ಕಾವ್ಯದಲ್ಲಿ ಮತ್ತು ಬದುಕಿನಲ್ಲಿ ಉದ್ದಕ್ಕೂ ಮಾಡಿಕೊಂಡು ಬಂದಿದ್ದಾರೆ. ನಾಶದ ಪ್ರಜ್ಞೆ ಅವರನ್ನು ತೀವ್ರವಾಗಿ ಕಾಡಿದೆ ನಿಜ. ಆದರೆ ನಾಶ ಅನಿವಾರ್ಯ ಎಂಬ ದಾರುಣ ಅರಿವಿನಲ್ಲೆ ಸೃಷ್ಟಿಶೀಲವಾಗಿರುವ ಮನಸ್ಸು ಅವರದ್ದು. ನಾಶವನ್ನು ಎದುರಿಸುವ ಏಕೈಕ ಉಪಾಯ ಸೃಷ್ಟಿಕ್ರಿಯೆ ಎಂದು ಅವರು ನಂಬಿದ್ದಾರೆ. ಈ ದೃಷ್ಟಿಯಿಂದ ಅವರ 'ಅಸ್ತಮಾನ' ಎಂಬ ಕವನ ತುಂಬಾ

ಅರ್ಥಪೂರ್ಣವಾದುದು. ಅಸಾಮಾನ್ಯ ಪುರುಷನಾದ ಕೃಷ್ಣನ ಸಾವನ್ನು ಆ ಕವಿತೆ ಹೇಳುತ್ತದೆ. ಆ ಯುಗಪುರುಷನ ಸಾವಿನ ಪರಿಣಾಮ ಭೂವ್ಯೋಮಗಳನ್ನು ವ್ಯಾಪಿಸುವಂಥದ್ದು. ಅಂತಹ ವಿಷಾದದ ಭೂಮಿಕೆಯಲ್ಲೂ ಒಂದು ಆಸೆಯ ಬೀಜವನ್ನು ಬಿತ್ತುವುದನ್ನು ಅವರ ಕವಿತೆ ಮರೆಯುವುದಿಲ್ಲ. ಗಾಂಧಿಯ ನಂತರ ಏನು ಎಂದು ಅವರ ಮನೋಧರ್ಮ ಅಶಂಕೆಗೆ ಒಳಗಾಗುವುದು ನಿಜ. ಆದರೆ ಒಬ್ಬ ಮಹಾಪುರುಷನೊಂದಿಗೇ ಎಲ್ಲವೂ ಮುಗಿಯಿತು ಎನ್ನುವ ವ್ಯಕ್ತಿಪೂಜೆಯ ವೈಭವೀಕರಣಕ್ಕೆ ಒಳಗಾಗಿ ಭವಿಷ್ಯದ ಬಗ್ಗೆ ನಕಾರಾತ್ಮಕ ನಿಲುವು ತೆಗೆದುಕೊಳ್ಳುವುದು ಅವರಿಗೆ ಪ್ರಿಯವಾದುದಲ್ಲ. ಕೃಷ್ಣನ ನಂತರವು ಸೃಷ್ಟಿ ಪಾಲನೆಗಳು ನಡೆದೇ ನಡೆಯುತ್ತವೆ ಎನ್ನುವ, ಶ್ರೀಸಾಮಾನ್ಯನಲ್ಲಿ ನಂಬುಗೆ ಇಟ್ಟ ಕಾವ್ಯ ಅವರದ್ದು. ಸೂರ್ಯಾಸ್ತಮದ ಬಳಿಕವೇ ಹಣತೆಯ ಹೊಣೆಗಾರಿಕೆ ಹೆಚ್ಚಾಗುತ್ತದೆ ಎನ್ನುವುದನ್ನು ಅವರ ಕಾವ್ಯ ತತ್ವೀಕರಿಸುತ್ತದೆ.

ಜಿ.ಎಸ್.ಎಸ್. ಜೀವನವನ್ನು ಮಾತ್ರವಲ್ಲ ಪ್ರಕೃತಿಯನ್ನೂ ಸೃಷ್ಟಿಶೀಲತೆಯ ಆಡಂಬೊಲವಾಗಿ ಪ್ರೀತಿಸುತ್ತಾರೆ. ಅದರ ನಿತ್ಯ ನವೀಕರಣ ವೃತ್ತಿ ಅವರನ್ನು ರೋಮಾಂಚನಗೊಳಿಸುತ್ತದೆ. ನವೋದಯದ ಕವಿಗಳು ಪ್ರಕೃತಿಯನ್ನು ನೋಡುವ ಕ್ರಮಕ್ಕೂ ಜಿ.ಎಸ್.ಎಸ್. ಪ್ರಕೃತಿಯನ್ನು ನೋಡುವ ಕ್ರಮಕ್ಕೂ ವ್ಯತ್ಯಾಸವಿದೆ. ಪ್ರಕೃತಿ ಜಿ.ಎಸ್.ಎಸ್. ಅವರಲ್ಲಿ ಆಧ್ಯಾತ್ಮಿಕ ತುಡಿತವನ್ನೋ, ಆರಾಧನಾ ಭಾವವನ್ನೋ ಕೆರಳಿಸುವುದಿಲ್ಲ. ಪ್ರಕೃತಿ ಅದರ ಸೃಷ್ಟಿಶೀಲತೆಯಿಂದ ಅವರಿಗೆ ಪ್ರಿಯವಾಗುತ್ತದೆ. ಬಿತ್ತ, ಬಿತ್ತುವಿಕೆ ಜಿ.ಎಸ್.ಎಸ್. ಕಾವ್ಯದ ಪ್ರಧಾನ ಕಾಳಜಿಗಳಲ್ಲೊಂದು. ಮರುಭೂಮಿಯನ್ನು ಫಲವತ್ತಾಗಿಸುವ ಏಕಮೇವ ಉಪಾಯವದು ಎಂದು ಅವರ ಕಾವ್ಯ ನಂಬಿದೆ. ಪ್ರಕೃತಿ ಮತ್ತು ಮನುಷ್ಯನ ಅಂತರಂಗ ಗಳನ್ನು ಮುಖಾಮುಖಿಗೊಳಿಸುವಲ್ಲಿ ಈ ತಾತ್ವಿಕತೆಯ ಮಾನವೀಯ ವಿಸ್ತರಣವಿದೆ. ಈ ಸೃಷ್ಟಿಶೀಲತೆಗೆ ಪ್ರೀತಿ ಒಂದೇ ಮಾರ್ಗವೆಂದು ಅವರು ನಂಬಿದ್ದಾರೆ.

ಪ್ರೀತಿ ಇಲ್ಲದ ಮೇಲೆ
ಸಂಶಯದ ಗಡಿಗಳುದ್ದಕ್ಕೂ
ಸಿಡಿಗುಂಡುಗಳ ಕದನ ನಿಂತೀತು ಹೇಗೆ?
ಜಾತಿ ಮತ ಭಾಷೆ ಬಣ್ಣಗಳ ಗೋಡೆಯ ನಡುವೆ
ನರಳುವ ಪಾಡು ತಪ್ಪೀತು ಹೇಗೆ?
ನಮ್ಮ ನಿಮ್ಮ ಮನಸ್ಸು
ಮರುಭೂಮಿಯಾಗದ ಹಾಗೆ
ತಡೆಗಟ್ಟುವುದು ಹೇಗೆ?

ಜಿ.ಎಸ್.ಎಸ್. ಅವರ ಈ ಪ್ರೀತಿಯ ಕಲ್ಪನೆ ವಿಶ್ವವಿಶಾಲ. ಮನುಷ್ಯ ಮನುಷ್ಯರ ನಡುವೆ ಇರುವ ಗೋಡೆಗಳೆಲ್ಲಾ ಬಿದ್ದು ಅವರು ಒಂದಾಗುವ ದಿನವನ್ನು ಅವರ ಕಾವ್ಯ ಹಂಬಲಿಸುತ್ತದೆ. ಇದು ವ್ಯಷ್ಟಿ ಕಾಣುವ ಸಮಷ್ಟಿಯ ಕನಸು. ಆ ಕನಸು ಬಹಳ ಆರ್ತವಾಗಿದೆ; ದೀನವಾಗಿದೆ. ಆದರೂ ಅದು ಪ್ರಯತ್ನಶೀಲತೆಯನ್ನು ಬಿಟ್ಟುಕೊಟ್ಟು ನಿಷ್ಕ್ರಿಯವಾಗಿಲ್ಲ. ಮನುಷ್ಯನ ಬಗ್ಗೆ ಮೂಲಭೂತ ವಾದ ನಂಬಿಕೆಯನ್ನು ಕಳೆದುಕೊಂಡಿಲ್ಲ.

ಆಧುನಿಕ ಸಮಾಜದ ಅಬ್ಬರದ ನಡುವೆ ಒಂದು ಹೃದಯವಿದ್ರಾವಕ ದನಿ ಜಿ.ಎಸ್.ಎಸ್. ಅವರನ್ನು ಕಾಡುತ್ತಿದೆ. ಅದು ಮೋಹನ ಮುರಲಿಯಲ್ಲ; ಕೋಗಿಲೆಯ ಕೂಗೂ ಅಲ್ಲ; ಒಂದು ಮಗು ಅಳುತ್ತಿರುವ ದೀನ ಸ್ವರ.

ಮಗು ಅಳುತಾ ಇದೆ ಎಲ್ಲೋ
ಒಂದೇ ಸಮನೆ–
ಶತ ಶತಮಾನದ ಬೆವರಿನ ತೆನೆಗಳ–
ನೆತ್ತಿದ ಹೊಲ ಗದ್ದೆಗಳಲ್ಲಿ

ಕವಿ ವಿಜ್ಞಾನಿಯ ಕ್ರಾಂತಿಕಾರಿಗಳ
ಸಾಧನೆ ಅನ್ವೇಷಣೆಗಳ ಹಾದಿಯಲಿ
ಬಿರುಗಣ್ಣುರಿಯಲಿ ಕಮರುವ ಕನಸಿನ
ಚಿತೆಯ ಜ್ವಾಲೆಗಳ ಧೂಮದಲಿ
ಚರಿತ್ರೆಯುದ್ಧಕು ಕೆನೆವ ಕುದುರೆಗಳ
ರಥಚಕ್ರದ ಕೆಂಧೂಳಿಯಲಿ
ಎಲ್ಲೋ ಮಗು ಅಳುತಾ ಇದೆ
ಒಂದೇ ಸಮನೆ.

ಅನಾಥವಾದ ಮಾನವತೆಯ ಈ ಆರ್ತದನಿ ಜಿ.ಎಸ್.ಎಸ್. ಕಾವ್ಯದುದ್ದಕ್ಕೂ ಇರುವ ಅಖಂಡಿತ ಶ್ರುತಿ. ಆಳದಲ್ಲಿ ಅವರಿಗೆ ಮಗುವಿನ ಅಳುವೇ ಪ್ರಧಾನವಾಗಿ ಕೇಳುತ್ತಾ ಇದೆ. ಇದು ಮಾನವತೆಯ ದೀನ ಅಳು. ಮನುಷ್ಯ ಹೀಗಾದನಲ್ಲ ಅನ್ನುವ ನೋವು, ದುಃಖ, ವಿಷಾದ ಅದನ್ನು ಸರಿಪಡಿಸಲಾಗದ ಕೈಮೀರಿದ ಸ್ಥಿತಿ.

ಈ ತಪ್ತ ಮನಃಸ್ಥಿತಿಯೇ ಜಿ.ಎಸ್.ಎಸ್. ಅವರ ವೈಚಾರಿಕತೆಯನ್ನು ರೂಪಿಸಿರುವ ಪ್ರಧಾನ ಅಂಶವಾಗಿದೆ. ಮೌಲ್ಯನಾಶದ ಕಡೆ ಸಮಾಜವನ್ನು ಕ್ಷಿಪ್ರಗತಿಯಲ್ಲಿ ತಳ್ಳುವ ದುಷ್ಟ ಶಕ್ತಿಗಳು ಜಿ.ಎಸ್.ಎಸ್. ಅವರ ತೀವ್ರ ಆಕ್ರೋಶಕ್ಕೆ ಗುರಿಯಾಗುತ್ತವೆ. ಭ್ರಷ್ಟತೆ, ಕುಬ್ಜತೆ, ಸಮಾಜದ ಒಟ್ಟಂದದ ಅರಳುವಿಕೆಗೆ ತಡೆಯೊಡ್ಡುವ ವ್ಯವಸ್ಥೆ–ಅದರ ಧಾರ್ಮಿಕ, ರಾಜಕೀಯ ಸ್ವರೂಪ ಕವಿಯ ಕೋಪಕ್ಕೆ ಗುರಿಯಾಗುತ್ತವೆ. ಈ ನೆಲೆಯಲ್ಲಿ ಕುವೆಂಪು ಪ್ರಣೀತ ವೈಚಾರಿಕತೆಯನ್ನು ಬಹಳ ಸಮರ್ಥವಾಗಿ ಪ್ರತಿನಿಧಿಸುವ ಕವಿ ಜಿ.ಎಸ್. ಶಿವರುದ್ರಪ್ಪನವರೆನ್ನಬಹುದು. ಬಂಡಾಯ ಸಾಹಿತ್ಯ ಮಾರ್ಗದೊಂದಿಗೆ ಜಿ.ಎಸ್.ಎಸ್. ಸಹಜವಾಗಿ ತಮ್ಮನ್ನು ಗುರುತಿಸಿಕೊಂಡದ್ದರ ಹಿನ್ನೆಲೆ ಇಲ್ಲಿ ಸ್ಪಷ್ಟವಾಗುತ್ತದೆ. ಬಂಡಾಯ ಜಿ.ಎಸ್.ಎಸ್. ಅವರ ಸಹಜ ಮನೋವೃತ್ತಿಯಾಗಿದೆ. ನವೋದಯ ಸಂದರ್ಭದಲ್ಲೂ ಕುವೆಂಪು ಅವರಂತೆ ಅವರು ಬಂಡಾಯ ಕವಿಯೇ. ಪ್ರತಿಭಟನೆಯ ಉರಿ, ಅವರ ಕಾವ್ಯಕ್ಕೆ ಸಹಜವಾಗಿಯೇ ತೀವ್ರವಾದ ವ್ಯಗ್ರತೆಯನ್ನು ನೀಡುತ್ತದೆ.

ಎಂತೆಂಥವರು ಏನೇನೋ ಆದದ್ದ ಕಂಡೆ
ಗೊಮ್ಮಟನಾಗಿ ನಿಂತಿದ್ದ ಮಹಾಮೂರ್ತಿ
ಕರಗಿ ಕೊಚ್ಚೆಯಾಗಿ ಹರಿದಿದ್ದ ಕಂಡೆ
ಇಂದ್ರನೈರಾವತಕ್ಕೆ ತೊಣಚಿ ಹತ್ತಿ
ಬೀದಿನಾಯಾಗಿ ಬೂದಿಯಲ್ಲಿ ಹೊರಳಾಡಿದ್ದ ಕಂಡೆ
ನಿಗಿ ನಿಗಿ ಉರಿವ ಉಜ್ವಲ ಮಾತೆಲ್ಲಾ
ಬರೀ ಬೂದಿಯಾಗಿ ತೆಪ್ಪಗಾಗಿದ್ದ ಕಂಡೆ
ಕೊಳಕುಮಂಡಲಕ್ಕೆ ಏಳು ಹೆಡೆ ಮೂಡಿ
ಮಾನಸ ಸರೋವರದಲ್ಲಿ ಜಲಕ್ರೀಡೆಯಾಡಿದ್ದ ಕಂಡೆ.....

ಈ ಮೌಲ್ಯನಾಶದ ದುರಂತ ಚಿತ್ರ ಆಕ್ರೋಶದೊಂದಿಗೇ ವಿಷಾದವನ್ನೂ ಒಳಗೊಳ್ಳುತ್ತದೆ ಎನ್ನುವ ವಿಶೇಷವಾದ ಮಾತಾಗಿದೆ. ಸ್ವಪ್ನಸದೃಶವಾದ ಈ ಭಯಾವಹ ಮುನ್ನರಿವು ಎದೆಯನ್ನು ತಲ್ಲಣಗೊಳಿಸುವಂಥದು. ಇಂತಹ ಸಂದರ್ಭದಲ್ಲಿ ನಿಜವಾಗಿಯೂ ಪೌರುಷವಂತರು ನಿಷ್ಕ್ರಿಯರಾಗಿರುವುದನ್ನು ಅವರ 'ಭೀಮಾಲಾಪ' ಕವಿತೆ ಚಿತ್ರಿಸುತ್ತದೆ.

ಸೀರೆ ಉಟ್ಟು ಬಳೆ ತೊಟ್ಟು ಕಾಲಿಗೆ
ಗೆಜ್ಜೆ ಕಟ್ಟಿದ್ದಾನೆ ಒಬ್ಬ
ಇನ್ನೊಬ್ಬ ಕಾವಿ ಉಟ್ಟು
ಮೂಲೆಗೆ ಕೂತಿದ್ದಾನೆ
ದನದ ಕೊಟ್ಟಿಗೆಯಲ್ಲಿ ಒಬ್ಬ ಕುದುರೆ ಲಾಯದಲ್ಲಿ

ಮತ್ತೊಬ್ಬ
ಇದ್ದಾಳೆ ಇವಳು ಅವರಿವರ ತಲೆಯ
ಹೇನು ಕುಕ್ಕುತ್ತ
ಆಗಾಗ ನಮ್ಮನ್ನೂ ಕುಕ್ಕುತ್ತಾ.

ನಾನೂ ಇದ್ದೇನೆ–ಅಡುಗೆ ಮನೆಯಲ್ಲಿ
ಉರಿವ ಸೌದೆಗಳ ಜೊತೆಗೆ
ಪಾತ್ರೆಗಳಲ್ಲಿ ಕೊತ ಕೊತ ಕುದಿದು
ಹಳೆಯ ನೆನಪುಗಳನ್ನು ರುಬ್ಬುತ್ತಾ...

ಗೆರೆ ದಾಟಲರದ ನಾನು ಕಾಯುತ್ತಿದ್ದೇನೆ
ಉರಿವ ಸೌದೆಗಳ ಜೊತೆಗೆ
ಪಾತ್ರೆಗಳಲ್ಲಿ ಕೊತ ಕೊತ ಕುದಿದು ಕಾಯುತ್ತಿದ್ದೇನೆ...

ದುಷ್ಟರ ವಿಜೃಂಭಣೆ, ಶಿಷ್ಟರ ನಿಷ್ಕ್ರಿಯತೆಗಳನ್ನು ಅಜ್ಞಾತಪರ್ವದ ಭೀಮನ ಈ ಸ್ವಗತ ಲಹರಿ ಅನನ್ಯವಾಗಿ ಹಿಡಿದಿಡುತ್ತದೆ. ಇದು ಸದ್ಯದ ಸಾಮಾಜಿಕ ಸಂದರ್ಭಕ್ಕೆ ಹಿಡಿದ ಸರ್ವಗ್ರಾಹೀಪ್ರತಿಮೆ.

ಕಾವ್ಯನಾಯಕನಾದ ಭೀಮ ಇಲ್ಲಿ ಶಿಷ್ಟದ ಸಾಮಾನ್ಯೀಕೃತ ಪ್ರತಿನಿಧಿ ಮಾತ್ರ, ಕವಿಯೊಬ್ಬ ಇದಕ್ಕಿಂತ ಭಿನ್ನವಾದ ನೆಲೆಯಲ್ಲಿ ನಿಂತು ತನ್ನ ತಳಮಳವನ್ನು ಅಭಿವ್ಯಕ್ತಿಸುತ್ತಿರುತ್ತಾನೆ. ಆ ಹಪಾಹಪಿಯ ಚಿತ್ರ ಪರಮೋಜ್ವಲವಾದುದೇನೂ ಅಲ್ಲ. ಆದರೆ ಒಂದು ವಿನಯಶೀಲವಾದ ಹೋರಾಟದ ನೆಲೆಯಲ್ಲಿ ಕವಿ ನಿಂತಿದ್ದಾನೆ. ಜಿ.ಎಸ್.ಎಸ್. ಅವರ ಪ್ರಧಾನವಾದ ಕಾವ್ಯರೂಪಕವೊಂದು ಇಲ್ಲಿ ತನ್ನನ್ನು ಸ್ಥಾಪಿಸಿಕೊಳ್ಳುತ್ತದೆ. ಅದೇ ಅನಂತವಾದ ಕತ್ತಲೆಯ ವಿರುದ್ಧ ಹಣತೆಯೊಂದನ್ನು ಎತ್ತಿ ಹಿಡಿಯುವ ಹೋರಾಟ. "ಯಾವ ಹಾಡ ಹಾಡಲಿ? ಯಾವ ಹಾಡಿನಿಂದ ನಿಮಗೆ ನೆಮ್ಮದಿಯನು ನೀಡಲಿ?" ಎನ್ನುವ ಕವಿಯ ತಳಮಳಕ್ಕೆ ಇಲ್ಲೊಂದು ನಮ್ರವಾದ ಆದರೆ ದಿಟ್ಟವಾದ ಉತ್ತರವಿದೆ ಎಂದುಕೊಳ್ಳುತ್ತೇನೆ. ಇದು ಸ್ವಾಭಿಮಾನಿಯೂ ಆತ್ಮವಿಶ್ವಾಸ ಕಳೆದುಕೊಳ್ಳದವನೂ ಆದ ವ್ಯಕ್ತಿಯೊಬ್ಬನ ಏಕಾಂಗಿ ಹೋರಾಟವಾಗಿ ಕಂಡುಬರುತ್ತದೆ. ಏಕಾಂಗಿ ಹೋರಾಟ ಎಂಬುದನ್ನು ಉದ್ದೇಶಪೂರ್ವಕವಾಗಿ ಬಳಸಲಾಗಿದೆ. ಯಾಕೆಂದರೆ ನೊಂದವರ ಆಕ್ರಂದನ ಆಲಿಸಿ ಕೈ ಆಸರೆ ನೀಡುವ ಅತೀಂದ್ರಿಯ ಶಕ್ತಿಯಲ್ಲಿ ಜಿ.ಎಸ್.ಎಸ್. ಕಾವ್ಯಕ್ಕೆ ನಂಬಿಕೆ ಇಲ್ಲ. "ಎಲ್ಲೋ ಹುಡುಕಿದೆ ಇಲ್ಲದ ದೇವರ ಕಲ್ಲುಮಣ್ಣುಗಳ ಗುಡಿಯೊಳಗೆ! ಇಲ್ಲೇ ಇರುವ ಪ್ರೀತಿ ಸ್ನೇಹಗಳ ಗುರುತಿಸದಾದೆನು ನಮ್ಮೊಳಗೆ!"–ಎಂದು ಜಿ.ಎಸ್.ಎಸ್. ಕಾವ್ಯ ಉದ್ಘೋಷಿಸಿಯಾಗಿದೆ. ಮನುಷ್ಯ ತನ್ನ ಹೊಣೆಗಾರಿಕೆಯನ್ನು ತಾನೇ ಹೊರಲು ಸಿದ್ಧನಾಗುವ ಅಸ್ತಿತ್ವವಾದೀ ನಿಲುವಿದು. ದೈವದ ನಿಷ್ಪತ್ತಿಯನ್ನು ಭಿನ್ನ ನೆಲೆಯಲ್ಲಿ ಇಲ್ಲಿ ವಿವರಿಸಲಾಗಿದೆ. ಆದರೆ ಇಲ್ಲೇ ಇರುವ ಪ್ರೀತಿ ಸ್ನೇಹಗಳ ಸಮೃದ್ಧಿಯ ಅರಕೆಯನ್ನೂ ಜಿ.ಎಸ್.ಎಸ್. ಕಾವ್ಯ ಉದ್ದಕ್ಕೂ ಗುರುತಿಸುತ್ತಾ ಬಂದಿದೆ. ಹೀಗಾಗಿ ವ್ಯಕ್ತಿ ಇಲ್ಲಿ ಅಕ್ಷರಶಃ ಒಂಟಿಯಾಗಿದ್ದಾನೆ. ಈಗ ಪ್ರಾಪ್ತವಾಗುವಂಥದ್ದೇ ಜಿ.ಎಸ್.ಎಸ್. ಕಾವ್ಯದ ಧೀರೋದಾತ್ತ ಏಕಾಂಗಿ ನಿಲುವು. ಕತ್ತಲೆಯ ತೀರದ ದಾಯಾರಿಕೆಯ ಬಗ್ಗೆ ಅವರಿಗೆ ಗೊತ್ತಿದೆ. ಆದರೆ ಅವರಿಗೆ ಹಣತೆಯ ಬಗ್ಗೆ ವಿಶ್ವಾಸ ನಾಶವಾಗಿಲ್ಲ. ಅದರ ಪ್ರಜ್ವಲನ ಶಕ್ತಿಯ ಬಗ್ಗೆಯೂ ನಂಬಿಕೆ ನಾಶವಾಗಿಲ್ಲ. ಅದಕ್ಕಾಗಿಯೇ ಅವರು ಸಮಷ್ಟಿಗೆ ಒಂದು ಎತ್ತರದ ದನಿಯ ಕರೆ ಕೊಡುತ್ತಾರೆ:

ಸುತ್ತಲು ಕವಿಯುವ ಕತ್ತಲೆಯೊಳಗೆ
ಪ್ರೀತಿಯ ಹಣತೆಯ ಹಚ್ಚೋಣ
ಬಿರುಗಾಳಿಗೆ ಹೊಯ್ದಾಡುವ ಹಡಗನು
ಎಚ್ಚರದಲಿ ಮುನ್ನಡೆಸೋಣ

ಕವಿತೆಯು ಈ ಕರೆಗೆ ಸಮಷ್ಟಿ ಸ್ಪಂದಿಸೀತು ಎನ್ನುವುದು ಒಂದು ಊಹಾತ್ಮಕ ಆಶಯ. ಸಮಷ್ಟಿಯ ಪ್ರತಿನಿಧಿಯಾಗಿ ರೂಪುಗೊಳ್ಳುವ ಸಾಂಸ್ಕೃತಿಕ ನಾಯಕನ ಆಶಾವಾದೀ ಮನಃಸ್ಥಿತಿಯಿದು. ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರು ಅಂತಹ ಸಂಚಲನ ಶಕ್ತಿಯನ್ನು ರೂಢಿಸಿರುವ ವರ್ತಮಾನದ ವಿರಲ ಸಾಂಸ್ಕೃತಿಕ ನಾಯಕರಲ್ಲಿ ಒಬ್ಬರಾಗಿದ್ದಾರೆ. ಹಾಗಾಗಿ ಸಮಷ್ಟಿಯ ಸ್ಪಂದನ ಕಪಿಧ್ವಜಗೆ ದೊರಕುವುದು.

ಕಾವ್ಯಾತ್ಮಕ ನೆಲೆಯಲ್ಲಿ ಜಿ.ಎಸ್.ಎಸ್. ಕಾವ್ಯದಲ್ಲಿ ಇದಕ್ಕೆ ಸಮಾನಾಂತರದಲ್ಲಿ ಪ್ರವಹಿಸುವ ಇನ್ನೊಂದು ವಿಷಾದಲಿಪ್ತ ಧ್ವನಿಯಿದೆ. ಅದು ಹೃದಯವೇಧಕವಾದ ವ್ಯಷ್ಟಿ ಧ್ವನಿ.

ಕವಿ ಹೇಳುತ್ತಾರೆ:

ಹಣತೆ ಹಚ್ಚುತ್ತೇನೆ ನಾನೂ;
ಕತ್ತಲೆಯನ್ನು ದಾಟುತ್ತೇನೆಂಬ ಭ್ರಮೆಯಿಂದಲ್ಲ,
ಇರುವಷ್ಟು ಹೊತ್ತು ನಿನ್ನ ಮುಖ ನಾನು, ನನ್ನ ಮುಖ ನೀನು
ನೋಡಬಹುದೆಂಬ ಒಂದೇ ಒಂದು ಆಸೆಯಿಂದ;
ಹಣತೆ ಆರಿದ ಮೇಲೆ ನೀನು ಯಾರೋ ಮತ್ತೆ
ನಾನು ಯಾರೋ...

ಆವರಿಸುವ ಕತ್ತಲೆಯ ವಿರುದ್ಧ ದೀಪಧ್ವಜವನ್ನು ಎತ್ತಿ ಹಿಡಿಯುವ ಕವಿ ಜಿ.ಎಸ್. ಶಿವರುದ್ರಪ್ಪನವರು ಆಧುನಿಕ ಯುಗದ ಒಂದು ಘನವಾದ ಆಶಯಪ್ರತೀಕವನ್ನು ಈ ನಿಲುವಿನಲ್ಲಿ ನಿರ್ಮಿಸಿದ್ದಾರೆ. ಈ ಕಾರಣಕ್ಕಾಗಿ ಈ ದೀಪಾರಾಧಕ ಕವಿಗೆ ಕನ್ನಡ ಮನಸ್ಸುಗಳು ಅಭಿನಂದಿಸುತ್ತವೆ. ❑

ಜಿ.ಎಸ್.ಎಸ್. ಕೃತಿಗಳು

ಅ) ಕವನ ಸಂಗ್ರಹಗಳು :

೧. ಸಾಮಗಾನ
೨. ಚೆಲುವು ಒಲವು
೩. ದೇವಶಿಲ್ಪ
೪. ತೀರ್ಥವಾಣಿ
೫. ಕಾರ್ತೀಕ
೬. ದೀಪದ ಹೆಜ್ಜೆ
೭. ಅನಾವರಣ
೮. ತೆರೆದ ದಾರಿ
೯. ಗೋಡೆ
೧೦. ಕಾಡಿನ ಕತ್ತಲಲ್ಲಿ
೧೧. ಪ್ರೀತಿ ಇಲ್ಲದ ಮೇಲೆ
೧೨. ಚಕ್ರಗತಿ
೧೩. ವ್ಯಕ್ತಮಧ್ಯ
೧೪. ಸಮಗ್ರ ಕಾವ್ಯ

ಆ) ಗದ್ಯ ಕೃತಿಗಳು :

೧. ಕರ್ಮಯೋಗಿ
೨. ಮಾಸ್ಕೋದಲ್ಲಿ ಇಪ್ಪತ್ತೆರಡು ದಿನ
೩. ಗಂಗೆಯ ಶಿಖರಗಳಲ್ಲಿ
೪. ವಿಮರ್ಶೆಯ ಪೂರ್ವ-ಪಶ್ಚಿಮ
೫. ಪರಿಶೀಲನ
೬. ಗತಿಬಿಂಬ
೭. ಪ್ರತಿಕ್ರಿಯೆ
೮. ನವೋದಯ
೯. ಕನ್ನಡ ಸಾಹಿತ್ಯ ಸಮೀಕ್ಷೆ
೧೦. ಅನುರಣನ
೧೧. ಸೌಂದರ್ಯ ಸಮೀಕ್ಷೆ
೧೨. ಮಹಾಕಾವ್ಯ ಸ್ವರೂಪ
೧೩. ಕಾವ್ಯಾರ್ಥ ಚಿಂತನ
೧೪. ಕನ್ನಡ ಕವಿಗಳ ಕಾವ್ಯ-ಕಲ್ಪನೆ
೧೫. ಚತುರಂಗ
೧೬. ಬೆಡಗು
೧೭. ಅಮೆರಿಕಾದಲ್ಲಿ ಕನ್ನಡಿಗ
೧೮. ಹೊಸಗನ್ನಡ ಕವಿತೆಗಳಲ್ಲಿ ಕಾವ್ಯಚಿಂತನ

೧೯. ವಿಸ್ತರಣ
೨೦. ಶಿವಯೋಗಿ ಸಿದ್ಧರಾಮ
೨೧. ಸರ್ವಘೋಷಣ ಶಿವಯೋಗಿ
೨೨. ಇಂಗ್ಲೆಂಡಿನಲ್ಲಿ ಚತುರ್ಮಾಸ
೨೩. ಚದುರಿದ ಚಿಂತನೆಗಳು
೨೪. ಕುವೆಂಪು – ಒಂದು ಪುನರಾಲೋಕನ

ಇ) **ಸಂಪಾದಿತ :**

೧. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ – ಆರು ಸಂಪುಟಗಳಲ್ಲಿ
೨. ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ – ಹತ್ತು ಸಂಪುಟಗಳಲ್ಲಿ
೩. ಸಾಹಿತ್ಯ ವಾರ್ಷಿಕ – ಹದಿನಾಲ್ಕು ಸಂಪುಟಗಳಲ್ಲಿ

ಜಿ.ಎಸ್.ಎಸ್. ವಿದೇಶ ಪ್ರವಾಸ

ಅ) ೧೯೭೩ನೇ ಸೆಪ್ಟೆಂಬರ್‌ನಲ್ಲಿ ಭಾರತ–ಸೋವಿಯತ್ ಸಾಂಸ್ಕೃತಿಕ ವಿನಿಮಯ ಯೋಜನೆಯಲ್ಲಿ ರಷ್ಯಾದಲ್ಲಿ ಪ್ರವಾಸ

ಆ) ಅಮೆರಿಕಾ, ಇಂಗ್ಲೆಂಡ್ (೧೯೮೭); ಥಾಯ್‌ಲೆಂಡ್–ಸಿಂಗಪುರ (೧೯೯೪)
ಇಂಗ್ಲೆಂಡ್–ಯೂರೋಪು (೧೯೯೬); ಅಮೆರಿಕಾ (೧೯೯೭)

ಪ್ರಶಸ್ತಿ–ಗೌರವಗಳು

೧) ೧೯೭೪ರಲ್ಲಿ 'ಮಾಸ್ಕೋದಲ್ಲಿ ಇಪ್ಪತ್ತೆರಡು ದಿನ' ಎಂಬ ಪ್ರವಾಸ ಕಥನಕ್ಕೆ 'ಸೋವಿಯತ್ ಲ್ಯಾಂಡ್ ನೆಹರೂ' ಪ್ರಶಸ್ತಿ
೨) ೧೯೮೨ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪುರಸ್ಕಾರ
೩) ೧೯೮೩–೮೪ರಲ್ಲಿ ಯು.ಜಿ.ಸಿಯಿಂದ ರಾಷ್ಟ್ರೀಯ ಉಪನ್ಯಾಸಕ (National Lecturer) ಆಗಿ ನೇಮಕ
೪) ೧೯೮೪ರಲ್ಲಿ 'ಕಾವ್ಯಾರ್ಥ ಚಿಂತನ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ
೫) ೧೯೮೪ರಲ್ಲಿ "ಕಾವ್ಯಾರ್ಥ ಚಿಂತನ' ಕೃತಿಗೆ ವರ್ಷದ ಅತ್ಯುತ್ತಮ ಕೃತಿ ಎಂದು ಬಹುಮಾನ
೬) ೧೯೮೪ರಲ್ಲಿ ಕರ್ನಾಟಕ ರಾಜ್ಯ ಸರ್ಕಾರದಿಂದ ರಾಜ್ಯೋತ್ಸವ ಪ್ರಶಸ್ತಿ
೭) ಪ್ರೊ. ಭೂಸನೂರಮಠ ಪ್ರಶಸ್ತಿ – ೧೯೯೭
೮) ಕರ್ನಾಟಕ ಸರ್ಕಾರದ ಪಂಪ ಪ್ರಶಸ್ತಿ – ೧೯೯೭
೯) ಗೊರೂರು ಪ್ರಶಸ್ತಿ – ೧೯೯೯
೧೦) ಡಾ. ಮಾಸ್ತಿ ಪ್ರಶಸ್ತಿ – ೨೦೦೦
೧೧) ರಾಷ್ಟ್ರಕವಿ ಪುರಸ್ಕಾರ – ೨೦೦೬

೧) ೧೯೬೩ರಲ್ಲಿ ದೆಹಲಿಯ ರಾಷ್ಟ್ರೀಯ ಕವಿ ಸಮ್ಮೇಳನದಲ್ಲಿ ಕರ್ನಾಟಕದ ಪ್ರತಿನಿಧಿ
೨) ೧೯೬೪ರಲ್ಲಿ ತುಮಕೂರಿನಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯ ಅಧ್ಯಕ್ಷತೆ
೩) ೧೯೭೬ನೇ ಏಪ್ರಿಲ್‌ನಲ್ಲಿ ಮದರಾಸು ಕನ್ನಡಿಗರ ಸಮ್ಮೇಳನದ ಅಧ್ಯಕ್ಷತೆ
೪) ೧೯೯೨ನೇ ಜನವರಿಯಲ್ಲಿ ದಾವಣಗೆರೆಯಲ್ಲಿ ನಡೆದ ಅಖಿಲ ಭಾರತ ೬೧ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವ

ಗೌರವ ಗ್ರಂಥಗಳು

ಅ) ಸ್ನೇಹ ಕಾರ್ತೀಕ – ೧೯೯೭
ಆ) ಗೌರವ – ೨೦೦೧
ಇ) ಹಣತೆ – ೨೦೦೧

ಪರಿಸರ ಅಭಿವೃದ್ಧಿ ಆಧುನಿಕ ಕವಿಸಮಯ

ಚಿಂತಾಮಣಿ ಕೊಡ್ಲೆಕೆರೆ

ಪರಿಸರ, ಅಭಿವೃದ್ಧಿ ಮತ್ತು ಆಧುನಿಕ ಕವಿಸಮಯಗಳನ್ನು ಕುರಿತ ಈ ಎರಡು ದಿನಗಳ ಅಧ್ಯಯನ ಶಿಬಿರದಲ್ಲಿ ಒಬ್ಬ ಸೃಷ್ಟಿಶೀಲ ಬರಹಗಾರನಾಗಿ ಆಧುನಿಕ ಕವಿ ಸಮಯದ ಕುರಿತು ನನ್ನ ವಿಚಾರಗಳನ್ನು ಮಂಡಿಸುವಂತೆ ನಿರ್ದೇಶಕರು ಮತ್ತು ಸಂಚಾಲಕರು ನನಗೆ ಸೂಚಿಸಿದ್ದಾರೆ. ಪಶ್ಚಿಮಘಟ್ಟಗಳ ನೆರಳಿನಲ್ಲಿ ಕರಾವಳಿ ತೀರದಲ್ಲಿ ಹುಟ್ಟಿದ ನಾನು ಉದ್ಯೋಗದ ಕಾರಣಕ್ಕಾಗಿ ಬಯಲು ಸೀಮೆಯಲ್ಲಿರುವುದು ಕೂಡ ಆಧುನಿಕ ಕಾಲ ನನಗೆ ಕೊಟ್ಟ ಅವಕಾಶ ಮತ್ತು ನನ್ನಲ್ಲಿ ಹುಟ್ಟು ಹಾಕಿದ ಸಮಸ್ಯೆ ಎಂಬುದನ್ನಿಲ್ಲಿ ಪ್ರಪ್ರಥಮವಾಗಿ ಗುರುತಿಸಿಕೊಳ್ಳಬೇಕು. ನಮ್ಮದೇ ಸಂದರ್ಭ ಗಳಿಗೆ ಹೀಗೆ ಅನ್ಯರಾಗುತ್ತಾ ಹೋಗುವ ಇಂಥ ಕೋಟ್ಯಂತರ ಮಧ್ಯಮವರ್ಗದ ಆಧುನಿಕರನ್ನು ಈ ಅನೇಕ ವರ್ಷಗಳಿಂದ ಉತ್ಪಾದಿಸಿ ಹಳ್ಳಿಗಳಿಂದ ಹೊರಗೆಳೆಯುತ್ತಾ ಬಂದಿದ್ದೇವೆ. ಇದು ನಮ್ಮಂಥವರ ಪಾಲಿಗೆ ಬಿಡುಗಡೆಯೋ, ಅಭಿವೃದ್ಧಿಯೋ? ಒಂದು ಸಮಾಜವಾಗಿ ನಾವು ಇದರಿಂದ ಪಡೆದುಕೊಂಡಿದ್ದೆಷ್ಟು, ಕಳೆದುಕೊಂಡಿದ್ದೆಷ್ಟು? ನಮ್ಮ ಗ್ರಾಮಗಳಿಂದ, ಕಾಡುಗಳಿಂದ ನೈಸರ್ಗಿಕ ಸಂಪನ್ಮೂಲಗಳನ್ನು ಮಾತ್ರವಲ್ಲ ಮಾನವ ಸಂಪನ್ಮೂಲಗಳನ್ನೂ ಬರಿದಾಗಿಸುತ್ತಿದ್ದೇವೆ. ಬಹುತೇಕ ಚಿಕ್ಕ ಊರುಗಳಲ್ಲಿ ಈಗ ಉಳಿದಿರುವವರೆಂದರೆ ನಾನಾ ಕಾರಣಗಳಿಗಾಗಿ ಅಲ್ಲಿ ಉಳಿಯಲೇಬೇಕಾಗಿ ಬಂದಿರುವವರು. ನಗರಗಳ ರಸ್ತೆಗಳು ಏಕಮುಖಿ ರಸ್ತೆಗಳಾಗುತ್ತಿವೆ – ಒಳ ಹೋಗಲು ಮಾತ್ರ ಹಾದಿಗಳಿವೆ. ಉತ್ತರ ಕನ್ನಡದ ಮಟ್ಟಿಗೆ ಹೇಳುವುದಾದರೆ ಈ ಪ್ರಕ್ರಿಯೆಗೆ ಕಳೆದ ಒಂದೆರಡು ದಶಕಗಳಲ್ಲಿ ವಿಪರೀತ ಚಾಲನೆ ದೊರೆತಿದೆ. ನಮ್ಮ ಹಳ್ಳಿಗಳು, ಅಕ್ಷರಶ: ನಿರ್ಗತಿಕವಾಗತೊಡಗಿವೆ. ಇದೇ ಪರಿಸ್ಥಿತಿ ಕನ್ನಡನಾಡಿನ ಇತರ ಪ್ರದೇಶಗಳಲ್ಲೂ ಇದೆ, ಭಾರತದ ಇನ್ನಿತರ ರಾಜ್ಯಗಳಲ್ಲೂ ಇದೆ. ಇಷ್ಟು ವೇಗವಾಗಿ ನಡೆಯುತ್ತಿರುವ ಈ ವಲಸೆ ಹೋಗುವಿಕೆಯನ್ನು ನಿಯಂತ್ರಿಸುವ, ನಿಯಮಿಸುವ ಅಥವಾ ವಲಸೆಹೋದವರ ಜೀವನ ವಿಧಾನವನ್ನು ರೂಪಿಸುವ ಯಾವುದೇ ವಿಧಾನಗಳು ವ್ಯಕ್ತಿಗಳ ಮಟ್ಟದಲ್ಲಾಗಲೀ, ಸಮಾಜದ ಮಟ್ಟದಲ್ಲಾಗಲೀ ಇಲ್ಲವೆಂಬುದು ನಮ್ಮ ಕುರಿತು ನಮಗೇ ನಾಚಿಕೆ ಹುಟ್ಟಿಸುವ ಸಂಗತಿಯಾಗಿದೆ.

ಏಕೆಂದರೆ, ಬಹುದೊಡ್ಡ ಸಮಾಜವಾಗಿ ಬಾಳಿದವರು ನಾವು, ಊರಿನಲ್ಲಿ ಒಂದು ಮನೆಯಲ್ಲಿ ಮದುವೆ, ಮುಂಜಿ ಎಂದರೆ ಇಡೀ ಊರಿನ ಎಲ್ಲರೂ ಎಲ್ಲ ಜಾತಿಗಳವರೂ, ಒಂದಲ್ಲ ಒಂದು ಕಾರಣಕ್ಕೆ ಆ ಮದುವೆಯಲ್ಲಿ ಪಾಲುಗೊಳ್ಳುವಂತೆ ಕಾರ್ಯಕ್ರಮವಿರುತ್ತಿತ್ತು. ಇಂಥ ಸಾಮೂಹಿಕ ಆಚರಣೆಗಳು ಅನೇಕ ಕಾರಣಗಳಿಗಾಗಿ ಇಂದು ಅಸಾಧ್ಯವಾಗತೊಡಗಿವೆ. ಎಲ್ಲೆಲ್ಲೋ ಉದ್ಯೋಗದ ಕಾರಣಗಳಿಗಾಗಿ ವಾಸವಿರುವವರು ಊರಿಗೆ ಕೆಲದಿನಗಳ ಮಟ್ಟಿಗೆ ಬಂದು ಹಠಾತ್ತನೆ ಹಳೆಯ ಸಂಬಂಧಗಳನ್ನು ನವೀಕರಿಸಿ ಹಿರಿಯರ ದಿನವನ್ನೋ, ಕಿರಿಯರ ಮದುವೆಯನ್ನೋ ಮುಗಿಸಿ ಬಂದುದಕ್ಕಿಂತ ವೇಗವಾಗಿ ವಾಪಸು ಓಡುತ್ತಿರುತ್ತಾರೆ. ಇನ್ನು ಇರುವ ಜಾಗದಲ್ಲಾದರೂ ಇವರು ಸುಖವಾಗಿದ್ದಾರೋ ಎಂದರೆ ಅದೂ ಇಲ್ಲ. ಹೊತ್ತಿಗೆ ಸರಿಯಾಗಿ ನೀರು ಬಾರದ, ಬಸ್ಸು ಬಾರದ, ಗಾಳಿ ಬೆಳಕುಗಳಿಗೆ ಯಥೇಚ್ಚ ಅವಕಾಶವಿಲ್ಲದ ಅನೇಕ ದುಸ್ವಪ್ನಗಳ ನಡುವೆ ಅವರ ದೈನಿಕ ನಡೆಯುತ್ತಿವೆ. ಹೇಗಾದರೂ ಮಾಡಿ ಅದೇ ನಗರದಲ್ಲಿ ಒಂದು ಸೈಟುಕೊಳ್ಳುವುದು.

ಒಂದು ಮನೆ ಕಟ್ಟುವುದರೊಂದಿಗೆ ಅವರ ಜೀವನದ ಪುರುಷಾರ್ಥ ಮುಗಿಯುತ್ತದೆ. ಮುಂದೇನು? ಗೊತ್ತಿಲ್ಲ. ಇಲ್ಲ, ಇವರದೇ ಮಕ್ಕಳು ಓದಿದ್ದಾರೆ. ಮದುವೆಯಾಗಿದೆ, ಮಕ್ಕಳಾಗಿವೆ – ಆ ಕುಟುಂಬಕ್ಕೆ ಇವರೇ ಆಗಂತುಕರೋ, ಅನಪೇಕ್ಷಿತರೋ ಅನ್ನಿಸತೊಡಗಿದ್ದಾರೆ ಅಥವಾ ಹಾಗಲ್ಲದಿದ್ದರೆ ಹೀಗೆ: ಇವರ ಮಕ್ಕಳು ವಿದೇಶಗಳಿಗೆ ಹೋಗಿ ನೆಲೆಸಿದ್ದಾರೆ, ವಾಪಸು ಬರುವ ಸಂಭವ ಕಡಿಮೆ. ಅತ್ತ ಹುಟ್ಟಿದೂರು ಕೈ ಬಿಟ್ಟಿದೆ, ಇತ್ತ ನೆಲೆಸಿದೂರಿನಲ್ಲಿ ಬಂಧುಬಳಗವಿಲ್ಲ, ಸಾಧಿಸಬೇಕಾದ ಗುರಿಗಳು ಇಲ್ಲ. ಇಂಥ ಅನೇಕ ವೃದ್ಧರನ್ನು ನಿರ್ಮಿಸಿದ ನಮ್ಮ ಅಭಿವೃದ್ಧಿಶೀಲತೆ ಇದೀಗ ಅವರ ಯೋಗಕ್ಷೇಮಕ್ಕಾಗಿ ವೃದ್ಧಾಶ್ರಮಗಳನ್ನು ಕಟ್ಟಿ ಅರ್ಜಿಗಳನ್ನು ಆಹ್ವಾನಿಸತೊಡಗಿದೆ. ಅಂಶತಃ ವಿವರಗಳಲ್ಲಿ ಅಷ್ಟಿಷ್ಟು ವ್ಯತ್ಯಾಸಗಳಿರಬಹುದಾದರೂ ಹೆಚ್ಚು ಕಡಿಮೆ ಇಡೀ ಸಮಾಜದಲ್ಲಿ ಕಾಣುತ್ತಿರುವ ವಾಸ್ತವದ ಈ ಕಹಿಯನ್ನು ಒಪ್ಪಲು ಧೈರ್ಯಬೇಕು. ಉದ್ಯೋಗಸ್ಥ ದಂಪತಿಗಳ ಮಕ್ಕಳು ಬೆಳೆಯುತ್ತಿರುವುದು ಮನೆಗಳಲ್ಲಲ್ಲ, ಶಿಶುಪಾಲನಾಕೇಂದ್ರಗಳಲ್ಲಿ, ಇಡಿಯ ಮನೆಯ ಮೌನವನ್ನು ಒಂದು ಬೃಹತ್ ಬೀಗ ಹೊರಗಿನಿಂದ ಕಾಯುತ್ತಿದೆ. ಮನೆಯಲ್ಲಿ ಮಕ್ಕಳಿಲ್ಲ, ದೊಡ್ಡವರಿಲ್ಲ, ಯುವದಂಪತಿಗಳಿಗೂ ಅಲ್ಲಿ ಹೆಚ್ಚುಕಾಲ ಕಳೆಯುವ ಅವಕಾಶವಿಲ್ಲ. ಆದರೂ ಈ ಬಾಡಿಗೆ ಮನೆಗಳು ನಮ್ಮ ತರುಣರಿಗೆ ದೊಡ್ಡ ಬಿಡುಗಡೆಯನ್ನು ತಂದುಕೊಟ್ಟಂತೆ ಕಾಣುತ್ತದೆ. ಹಾಗಲ್ಲವಾದರೆ ನಮ್ಮ ಹೆಣ್ಣು ಮಕ್ಕಳೇಕೆ ಕಡಿಮೆ ಸಂಬಳವಾದರೂ ಚಿಂತೆಯಿಲ್ಲ, ನಗರದಲ್ಲಿರುವ ಗಂಡನೇ ಬೇಕೆಂದು ಹಠ ಹಿಡಿಯುತ್ತಿದ್ದರು? ನಾನು ಹುಟ್ಟಿ ಬೆಳೆದ ಹವ್ಯಕ ಸಮಾಜ ಬಹುತೇಕ ಕೃಷಿಯನ್ನವಲಂಬಿಸಿದ ಸಮೂಹ. ಇಂದು ಈ ಸಮಾಜದ ಜನ ಈ ಜಿಲ್ಲೆಯ ಬೇರಾವುದೇ ಊರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ರಾಜಧಾನಿಯಲ್ಲಿ ನೆಲೆಸಿದ್ದಾರೆ. ಇದು ಅಭಿವೃದ್ಧಿಯ ಹೆಗ್ಗುರುತೇ? ಅಭಿಮಾನದ ಸಂಗತಿಯೇ? ಹಿಂದುಳಿದ ಜಾತಿಗಳಲ್ಲೂ ಈ ವಲಸೆಯ ಪರಿಣಾಮಗಳು ಕಾಣಿಸಿಕೊಳ್ಳುವ ದಿನಗಳು ದೂರವಿಲ್ಲ.

* * * *

ಭೋಗಿಸುವ, ಬಳಸಿ ಎಸೆಯುವ, ಹಾಸ್ಯುಂಡು ಬೀಸಿ ಒಗೆಯುವ ಪ್ರವೃತ್ತಿಯನ್ನು ಪೋಷಿಸುವಂತೆ ನವಜೀವನ ವಿಧಾನ ರೂಪುಗೊಳ್ಳತೊಡಗಿದೆ. ಇಂಥ ತ್ಯಾಜ್ಯ ವಸ್ತುಗಳ ವಿಲೇವಾರಿ, ನಿರ್ವಹಣೆಗಳೇ ಒಂದು ಪ್ರತ್ಯೇಕ ಉದ್ದಿಮೆಯಾಗಿ ಬೆಳೆಯಹತ್ತಿದೆ. ನನ್ನ ಈವರೆಗಿನ ಮಾತುಗಳಿಂದ ಆಧುನಿಕವಾದುದೆಲ್ಲವನ್ನೂ ನಾನು ವಿರೋಧಿಸುತ್ತಿದ್ದೇನೆಂಬ ಭಾವನೆ ಮೂಡಿದ್ದರೆ ದಯಮಾಡಿ ಕ್ಷಮಿಸಬೇಕು. 'ಅಧುನಾ' ಎಂದರೇ ಈಗಿನದು. ಈ ಕ್ಷಣಕ್ಕೆ ಈ ಕ್ಷಣದ ಬದುಕಿಗೆ ಸ್ಪಂದಿಸದೇ ಕಾಲದ ನಿರಂತರತೆಯನ್ನು ಕಾಪಾಡಿಕೊಳ್ಳುವುದಾದರೂ ಹೇಗೆ? ಸಮಸ್ಯೆಗಳನ್ನು ತಾನೇ ನಿರ್ಮಿಸಿಕೊಂಡು ಆ ಸಮಸ್ಯೆಗಳ ವಿಷಗಾಳಿಯ ವರ್ತುಲದೊಳಗೇ ಬಾಳಿ ಪರಿಹಾರಕ್ಕೆಳಸುವ ಪ್ರವೃತ್ತಿಗಳನ್ನು ಮಾತ್ರ ನಾನು ಪ್ರಶ್ನಿಸುತ್ತಿದ್ದೇನೆ.

ಅಭಿವೃದ್ಧಿ ಮತ್ತು ವಿಜ್ಞಾನವನ್ನು ನಾವು ಒಟ್ಟಿಗಿಟ್ಟು ನೋಡುತ್ತ ಬಂದಿದ್ದೇವೆ. ವಿಜ್ಞಾನ, ತಂತ್ರಜ್ಞಾನಗಳು ನಮಗೆ ಒದಗಿಸಿದ ಬಹು ಉತ್ಪಾದನಾ ಸಾಮರ್ಥ್ಯ ಮತ್ತು ಬಹುಜನರನ್ನು ಬಳಸಿಕೊಂಡು ಸಾಧಿಸುವ ಉತ್ಪಾದನೆಗಳ ಸಾಮರ್ಥ್ಯ ಇವುಗಳ ಅಂತರದಲ್ಲಿ ಒಂದು ಬೃಹತ್ ಜನಾಂಗದ ಜೀವನಕ್ರಮವನ್ನೇ ಪಲ್ಲಟಗೊಳಿಸುವ ಧಾತುಗಳಿವೆ ಎಂಬುದನ್ನು ನಾವು ಅರಿಯಲಿಲ್ಲ. ಹಳ್ಳಿಗರೇ ನಿರ್ಮಿಸುತ್ತಿದ್ದ ಚಪ್ಪಲಿ, ಬಟ್ಟೆ, ಗಡಿಗೆ, ಬುಟ್ಟಿಗಳು ನಮಗಿಂದು ಬೇಡವಾಗಿವೆ. ದೊಡ್ಡ ಉದ್ದಿಮೆಗಳಾಗಿ ಇಂಥ ತಯಾರಿಕೆಗಳು ಎಲ್ಲೆಲ್ಲೂ ಸುಲಭ ಬೆಲೆಯಲ್ಲಿ ಸುಲಭವಾಗಿ ಸಿಕ್ಕತೊಡಗಿದ ದಿನಗಳಲ್ಲಿ ಇವು ಸೃಷ್ಟಿಸಿದ ನಿರುದ್ಯೋಗಿಗಳ ಸಮಸ್ಯೆಯನ್ನು ನಾವು ಊಹಿಸಲಿಲ್ಲ. ಮೀನುಗಾರನನ್ನು

ನೀವು ನೀರಿನಿಂದ ಪ್ರತ್ಯೇಕಿಸಿದರೆ ಅವನೂ ಸಹ ಮೀನಿನಂತೆ ಚಡಪಡಿಸತೊಡಗುತ್ತಾನೆ. ಒಂದು ನದಿ ಕಲುಷಿತಗೊಂಡರೆ ಆ ಜಲ ಮಾತ್ರವಲ್ಲ, ಜಲಚರಗಳು, ಸುತ್ತಲಿನ ವನ್ಯಸಂಪತ್ತು, ನದಿಯನ್ನವಲಂಬಿಸಿದ ಸಾವಿರಾರು ಕುಟುಂಬಗಳೂ ಅಸ್ಥಿರಗೊಳ್ಳತೊಡಗುತ್ತವೆ. 'ಪರಿಸರ ನಾಶ ಮತ್ತು ಅಭಿವೃದ್ಧಿ' ಪೂರಕ ಸಂಗತಿಗಳೆಂದು ವಾದಿಸುವವರು ಒಂದು ಜನಸಮುದಾಯಕ್ಕೆ ಸಾವಿರಾರು ವರ್ಷಗಳಿಂದ ಬದುಕಲು ಲಭ್ಯವಿದ್ದ ನೈಸರ್ಗಿಕ ವಿಧಾನವನ್ನು ಬಲಿ ತೆಗೆದುಕೊಳ್ಳುತ್ತಿದ್ದೇವೆ ಎಂಬ ಅರಿವಿಲ್ಲ. ಲಕ್ಷಾಂತರ ನತದೃಷ್ಟರನ್ನು ನಿರ್ಮಿಸುವುದು ಅಭಿವೃದ್ಧಿಯೇ? ನಗರಗಳ ಸುತ್ತ ಮುತ್ತಲಿನ ಕೃಷಿ ಭೂಮಿಯನ್ನು ವಿಶೇಷ ಆರ್ಥಿಕವಲಯ ಎಂದು ಗುರುತಿಸಿ ಉದ್ದಿಮೆಗಳಿಗಾಗಿ ಕಾದಿರಿಸುವ ಕಾರಣಕೊಟ್ಟು ರೈತರಿಂದ ಖರೀದಿಸಲಾಗುತ್ತದೆ. ಆ ರೈತರಿಗೆ ಪರಿಹಾರಧನ ಕೊಡಬಹುದು, ಆದರೆ ಪರಿಹಾರ ಜೀವನ ಕ್ರಮವನ್ನು ಕೊಡಲು ಸಾಧ್ಯವೇ? ಇಂಥ ಪ್ರಶ್ನೆಗಳನ್ನು ಕೇಳುವವರು ಪ್ರಗತಿ ವಿರೋಧಿಗಳಾಗಿ ಕಾಣುವ ವ್ಯಂಗ್ಯ ನಮ್ಮೆದುರಿಗಿದೆ. ನಮ್ಮ ಅಭಿವೃದ್ಧಿಗೆ ಸರ್ವೋದಯದ, ಇಡೀ ಸಮಾಜದ ಅಭ್ಯುದಯದ ಕನಸುಗಳಿಲ್ಲವಾದುದರಿಂದ ಚಿಕ್ಕ ಭೂಹಿಡುವಳಿದಾರನಾಗಿದ್ದ ರೈತ ತನ್ನದೇ ಜಮೀನಿನಲ್ಲಿ ಎದ್ದುನಿಂತ ಮಹಲಿನಲ್ಲಿ ಒಬ್ಬ ಕೂಲಿಯಾಳಾಗುತ್ತಾನೆ ಮತ್ತು ಈ ದುರಂತದ ಸ್ಪಷ್ಟ ಅರಿವನ್ನು ತಂದುಕೊಳ್ಳುವಲ್ಲಿಯೂ ನಾವು ವಿಫಲರಾಗಿದ್ದೇವೆ.

* * * *

ಗೆಳೆಯರೆ, ಆಧುನಿಕ ಕವಿ ಸಮಯದ ಕುರಿತು ಮಾತನಾಡಬೇಕಾದ ನಾನು, ನನ್ನನ್ನು ಕಾಡುತ್ತಿರುವ ಈ ಎಲ್ಲ ಸಂಗತಿಗಳ ಕುರಿತು ಇಷ್ಟಾದರೂ ವಿವರವಾಗಿ ಮಾತನಾಡದೆ ಮುಂದಿನ ವಿಚಾರಗಳನ್ನು ಮಂಡಿಸುವುದು ಕಷ್ಟ. ನನ್ನೀ ಆಧುನಿಕ ಕಾಲದಲ್ಲಿ ಕಾವ್ಯವು ಸಮಾಜದ ಕೇಂದ್ರದಲ್ಲಿ ಉಳಿದಿಲ್ಲ. ಅದೊಂದು ವರ್ತುಲದ ಪರಿಘದ ಯಾವುದೋ ಮೂಲೆಯಲ್ಲಿ ನಡೆಯುತ್ತಿರುವ ಚಟುವಟಿಕೆ. ನಾವಾದರೂ ಎಂಥ ಅಲ್ಪತೃಪ್ತರೆಂದರೆ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿಗಳು ಪ್ರಕಟವಾಗಿಬಿಟ್ಟರೆ ನಮ್ಮಂಥ ಸುಖಿಗಳು ಯಾರೂ ಇಲ್ಲ, ದೇಶದಲ್ಲಿ ಮತ್ತಿನ್ನಾವ ಸಮಸ್ಯೆಗಳೂ ಇಲ್ಲ ಎಂದು ತಿಳಿದಿದ್ದೇವೆ.

ಕವಿ ತನ್ನ ಕನಸುಗಳನ್ನು ಸಮಾಜ ಬಾಂಧವರ ಜೊತೆ ಹಂಚಿಕೊಳ್ಳುವುದು ಅನಿವಾರ್ಯವಾಗಿದೆ. ಭ್ರಮೆಗಳಲ್ಲದ ಕನಸುಗಳನ್ನು ಕಾಣುವುದನ್ನು ಅವನು ಸಮಾಜಕ್ಕೆ ಮತ್ತೆ ಕಲಿಸಬೇಕಾಗಿದೆ. ನಮ್ಮೆದುರಿಗಿರುವ ಸಮಸ್ಯೆಗಳು ತುಂಬ ಸಂಕೀರ್ಣ ಸ್ವರೂಪದವು. ಕುವೆಂಪು, ಬೇಂದ್ರೆ ಅಷ್ಟೇಕೆ ಅಡಿಗರು ಕಂಡ ಸಮಾಜದ ಸ್ವರೂಪಕ್ಕಿಂತ ನಾವು ಕಾಣುತ್ತಿರುವ ಸಮಾಜ, ಅದರ ಸಮಸ್ಯೆಗಳು ಘೋರವಾದವು ಎಂದು ನಾನು ತಿಳಿದಿದ್ದೇನೆ. ಇಂದು ನಾವು ಕಾಣುತ್ತಿರುವ ವಿಘಟನೆ, ವಿಪ್ಲವಗಳ ಬೀಜ ಅಂದೇ ಬಿದ್ದಿರುವುದಾದರೂ ಈ ಪರಿಣಾಮಗಳ ಬಗೆ ಆಗ ಸ್ಪಷ್ಟ ಕಲ್ಪನೆ ಇತ್ತೆಂದು ನನಗೆ ಅನಿಸುವುದಿಲ್ಲ. ತುಲನಾತ್ಮಕವಾಗಿ ಅವರು ಕಂಡ ಸಮಾಜ ಸ್ಥಿರವಾದುದೆಂದೇ ತಿಳಿಯಬೇಕು. ಇತ್ತೀಚಿನ ವರ್ಷಗಳಲ್ಲಿ ನಮ್ಮ ಸಮಾಜದಲ್ಲಿ ಕೆಲವರಿಗೆ ಸಿಕ್ಕ ಆರ್ಥಿಕ ಲಂಘನ ವಿಸ್ಮಯ ಹುಟ್ಟಿಸುವಂಥದು. ತಿಂಗಳಿಗೆ ಲಕ್ಷಾಂತರ ದುಡಿಯುವವರೂ, ಎರಡು ಸಾವಿರದ ಸಂಬಳ ಪಡೆಯುವವರೂ ಅದೇ ರಾಜಧಾನಿ ಬೆಂಗಳೂರಿನಲ್ಲಿ ಬದುಕುತ್ತಿರುವುದು ನಮ್ಮ ಅಭಿವೃದ್ಧಿ ಸೃಷ್ಟಿಸುತ್ತಿರುವ ಅಂತರಕ್ಕೆ ಸಾಕ್ಷಿಯಲ್ಲವೆ? ಅಷ್ಟು ಕಡಿಮೆ ವೇತನವಲ್ಲಾದರೂ ಯುವ ಪೀಳಿಗೆ ನಗರ ಜೀವನವನ್ನೇ ಬಯಸುತ್ತಿರುವುದರ ಹಿಂದಿನ ಪ್ರಲೋಭನೆಯಾದರೂ ಎಂಥದು? ಅರ್ಥ-

ಕಾಮಗಳಿಗೆ ಧರ್ಮದ ನಿಗ್ರಹವನ್ನು ನಮ್ಮ ಹಿರಿಯರು ಬಯಸಿದರು. ನಮ್ಮ ಕಾಲದ ಧರ್ಮದ ಸ್ವರೂಪವೇನು? ಈ ಕುರಿತು ಯಾರು ಚಿಂತಿಸಬೇಕು?

ಅಂಥದೊಂದು ಧಾರ್ಮಿಕ ಪರಿಕಲ್ಪನೆಯನ್ನು ಬೆಳೆಸುವುದಾದರೆ ಅದಕ್ಕೆ ಪರಿಸರ ಸ್ನೇಹಿಯಾದ ಅಭಿವೃದ್ಧಿಯ ಆಶಯ, ಸಂಕಲ್ಪಗಳು ಬೇಕಾಗುತ್ತವೆ ಎಂದು ನಾನು ತಿಳಿದಿದ್ದೇನೆ. ವಿಜ್ಞಾನ ನನಗೆ ಒದಗಿಸುವ ಅನುಕೂಲಗಳನ್ನು ಹದವರಿತು ಒಳಗು ಮಾಡಿಕೊಳ್ಳಬಲ್ಲ ಸಾಮಾಜಿಕ ಸಂರಚನೆಯನ್ನು ನಾನು ನಿರೀಕ್ಷಿಸುತ್ತಿದ್ದೇನೆ. ಕವಿ ಆಧುನಿಕನಾಗುವುದೆಂದರೆ ತನ್ನೆದುರಿನ ಕ್ಷಣಕ್ಕೆ ಸಂವೇದಿಸುವುದು, ಆಕ್ಷಣದ ಅನಂತ ಸ್ವರೂಪವನ್ನು, ಅವ್ಯಾಹತ ಸಾಗುವಿಕೆಯನ್ನೂ ಅರಿಯುವುದು. ಬಣ್ಣದ ಅಂಗಿಗಳನ್ನು ತೊಟ್ಟ ಚಿಣ್ಣರೆದುರು ತನ್ನ ಕನಸುಗಳನ್ನು ಕಟ್ಟಿಕೊಳ್ಳಬೇಕಾದ ಜೂದ ಕೆಲಸಗಾರ ಬಾಬುವಿನಲ್ಲೂ, ಅಂಗಡಿ ಎದುರು ಕರಡಿವೇಷ ಧರಿಸಿ ತನ್ನ ಸ್ವ–ರೂಪವನ್ನು ಕಳಚಿಕೊಂಡ ಭಯದಲ್ಲಿ ಕಂಗಾಲಾಗಿರುವ ಗಣೇಶನಲ್ಲೂ, ಬೆಂಗಳೂರಿನಿಂದ ಆಚೆ ಹಾರಿ ನಡೆವ ಗುಬ್ಬಿಗಳಲ್ಲೂ, ಕನಸಿನಲ್ಲಿ ತಿಂದ ವಿಷ ತನ್ನನ್ನು ಕೊಲ್ಲುತ್ತಿರುವ ವಿಹ್ವಲತೆಯಲ್ಲೂ, ಕಾಡು ಕಡಿಯುವ ಸುದ್ದಿಯನ್ನು ಮರಕ್ಕೆ ಅರುಹುವ ಹಕ್ಕಿಯ ಹಾಡಿನ ಒಡಕಿನಲ್ಲೂ ನನ್ನ ಬರಹಗಳು ನನ್ನ ಕಾಲದ ಸಮಸ್ಯೆಗಳನ್ನು ಅರಿಯುವ, ಮಿತಿಗಳನ್ನು ಮೀರುವ ಯತ್ನ ನಡೆಸಿವೆ. ಅದೇ ಕಾಲಕ್ಕೆ ನನ್ನಂಥವನು ಆತಂಕಗೊಳ್ಳುತ್ತಿರುವುದು ನಮ್ಮ ದೇಶಭಾಷೆಗಳು ನಗಣ್ಯಗೊಳ್ಳುತ್ತಿರುವ ಪರಿಯನ್ನು ಕುರಿತು. ಇತ್ತೀಚೆಗೆ ಒಂದು ಪತ್ರಿಕಾವರದಿ ನಮ್ಮ ಉದ್ಯಮಿಯೊಬ್ಬರ ವೇತನವನ್ನು ಡಾಲರ್ ರೂಪದಲ್ಲಿ ಹೇಳಿತ್ತು. ನಿಜಕ್ಕೂ ನನಗೊಮ್ಮೆ ಕಸಿವಿಸಿಯಾಯಿತು. ನಮ್ಮ ರೂಪಾಯಿಗಳೆಲ್ಲ ಡಾಲರುಗಳಾಗಿ, ನಮ್ಮೆಲ್ಲ ಭಾಷೆಗಳೂ ಇಂಗ್ಲಿಷಾಗಿ, ನಾವು ಕುಡಿಯುವ ನೀರೆಲ್ಲ ಅಮೆರಿಕದ ಕಣಿವೆಯ ನೀರಾಗಿ, ನಾವೆಲ್ಲ ವಿಭಿನ್ನ ವೇಷ ತೊಟ್ಟ ಅಮೆರಿಕನರಾಗಿ ಓಡಾಡುತ್ತೇವೆಂದು ಗೊತ್ತಿದ್ದರೆ ಪಂಪ ಇಲ್ಲಿ ಮತ್ತೆ ಹುಟ್ಟಬಯಸುತ್ತಿದ್ದನೇ? ಕಾವ್ಯವು ವ್ಯಕ್ತಿತ್ವಗಳ, ಸಮಾಜಗಳ ಅನನ್ಯತೆಯನ್ನು ಗುರುತಿಸುವಂಥದು, ಮನ್ನಿಸುವಂಥದು. ಕಾರ್ಖಾನೆಯ ಸೈರನ್ನುಗಳ ಮಧ್ಯೆ, ಅದರ ಕೊಳವೆಬಾಯಿಗಳು ಉಗುಳುವ ಕಪ್ಪು ಹೊಗೆಯ ಮಧ್ಯೆ ಕವಿಯೊಬ್ಬ ತನ್ನ ಕಾಲಕ್ಕೆ ಪದ್ಯ ಓದಿ ಹೇಳಬೇಕಾಗಿದೆ. ಆದರೆ ಈ ಗದ್ದಲದ ಮಧ್ಯೆ ನಾನು ನನ್ನ ಧ್ವನಿ ಕೇಳುವಂತೆ ಹೇಗೆ ಓದಬೇಕು ಎಂಬುದೇ ದೊಡ್ಡ ಸವಾಲಾಗಿದೆ.

❑

ಸಾಹಸಕ್ಕೆ ಇನ್ನೊಂದು ಹೆಸರು ಹರಿಹರಪ್ರಿಯ ಎಂಬ ಮಾತು ಮತ್ತೊಮ್ಮೆ ಸಾಬೀತಾಯಿತು. ನಿಮ್ಮ ಕ್ರಾಂತಿಕಾರೀ ಆಲೋಚನೆಗಳು "ಪುಸ್ತಕಮನೆ"ಯಿಂದ ಹೊರ ಹರಿದು "ಪ್ರಜಾಸಾಹಿತ್ಯ" ಸೇರಿದ್ದು ಸಂತಸ ತಂದಿತು. ಯಾವ ಮಂತ್ರಿಗಳು ಏನೇ ಹೇಳಲಿ, ವರ್ತಮಾನದಿಂದ ಭೂತವನ್ನು ಅಳೆಯಬಾರದು ಎಂಬ ಸಿ.ಎನ್. ರಾಮಚಂದ್ರನ್ ಅವರ ಅಭಿಪ್ರಾಯ ಸ್ವಾಗತಾರ್ಹ. ಇಷ್ಟು ವಸ್ತುನಿಷ್ಠವಾಗಿ ನಾವು ಘಟನೆಗಳನ್ನು ಕಾಣಲು ಶಕ್ತರಾದರೆ ಜಗಳಗಳೇ ಇರುವುದಿಲ್ಲ.

ಎಸ್.ವಿ. ಪ್ರಭಾವತಿ

ಓದು, ಬರಹ ಮತ್ತು ಗಣಕಗಳು

ಟಿ.ವಿ. ಶ್ರೀನಾಥ ಶಾಸ್ತ್ರಿ

ಜೀವಿಗಳ ಬಹುಮಟ್ಟಿನ ಚಟುವಟಿಕೆಗಳು ಆಯಾ ಚಟುವಟಿಕೆಗಳಿಗೆ ಸಂಬಂಧಿಸಿದ ವಿಷಯಗಳ ವಿವೇಚನೆಗಳ ಮೇಲೆ ನಿರ್ಧರಿತವಾಗುತ್ತವೆ. ಇದರಲ್ಲಿ ನೆನಪಿನ ಅಂಗಳದಲ್ಲಿ ವಿವಿಧ ಮಾಹಿತಿಗಳ ದಾಖಲೆ ಮಾಡಿಕೊಳ್ಳುವುದು, ಅಗತ್ಯ ಸಂದರ್ಭಗಳಲ್ಲಿ ಸೂಕ್ತವಾದವುಗಳನ್ನು ಆಯ್ದುಕೊಳ್ಳುವುದು ಮತ್ತು ಬೇಡಿಕೆಗಳ ಪೂರೈಕೆಗೆ ಅವುಗಳನ್ನು ಬಳಸಿಕೊಳ್ಳುವುದು ಮುಂತಾದವುಗಳು ಯಾವುದೇ ಜೀವಿಯ ಬಹುಮುಖ್ಯ ಚಟುವಟಿಕೆಗಳು. ಅನೇಕ ಸಂದರ್ಭಗಳಲ್ಲಿ ಜೀವಿಗಳ ನಡುವೆ ಮಾಹಿತಿಗಳ ಸಂವಹನೆ ಕಾರ್ಯಕ್ರಮಗಳೂ ನಡೆಯುತ್ತಿರುತ್ತವೆ. ಮಾನವ ಜೀವಿಗಳಲ್ಲಿ ಈ ಮೆದುಳಿನ ಚಟುವಟಿಕೆಗಳು ವೈವಿಧ್ಯಮಯವಾಗಿದ್ದು ಇದರಿಂದ ಜೀವಸಂಕುಲಗಳ ಅನೇಕ ವ್ಯವಹಾರಗಳು ನಡೆಯುತ್ತಾ ಅವುಗಳ ಚಟುವಟಿಕೆಗಳು ನಿರ್ಧರಿತವಾಗುತ್ತವೆ. ಈ ಮೆದುಳಿನ ಚಟುವಟಿಕೆಗಳನ್ನು ಮನದಿಂದ ಹೊರಗೆಡಹುವ ಸುವ್ಯವಸ್ಥಿತ ಬೌದ್ಧಿಕ ತಾಂತ್ರಿಕತೆಯೇ ಧ್ವನಿವೈವಿಧ್ಯತೆಗಳ ವೈಜ್ಞಾನಿಕ ವಿಶ್ಲೇಷಣೆಗೆ, ತನ್ಮೂಲಕ ಭಾಷೆಗಳ ಉಗಮಕ್ಕೆ ಕಾರಣವಾದವು. ಭಾಷೆಗಳ ಆರಂಭದೊಂದಿಗೆ ಅವುಗಳ ಬಳಕೆಯು ಎಲ್ಲ ವಿಧವಾದ ಆಲೋಚನೆಗಳಿಗೆ ಮೂರ್ತರೂಪವನ್ನು ನೀಡಲು ಸಾಧ್ಯವಾಯಿತು. ದಿನನಿತ್ಯ ಕಂಡುಬರುವ ವಿಷಯ ವೈವಿಧ್ಯಗಳೂ ಮತ್ತು ಅವುಗಳ ಆಳ ವೈಶಾಲ್ಯ ಮುಂತಾದವುಗಳು ಅತ್ಯಂತ ವ್ಯವಸ್ಥಿತವಾಗಿ ರೂಪುಗೊಳಿಸಿ ಪ್ರತ್ಯೇಕವಾದ ವಿಷಯ ಸಂಗ್ರಹಗಳನ್ನಾಗಿ ದಾಖಲುಮಾಡಿಕೊಳ್ಳುವ ತಂತ್ರಗಾರಿಕೆಗಳೂ ಮಾನವನಿಗೆ ಸಿದ್ಧಿಸಿದವು. ಹೀಗೆ ಮನದಲ್ಲಿ ದಾಖಲಾಗುವ, ದಾಖಲಾಗಬೇಕಾದ, ಎಂದೋ ಬಳಸಬಹುದಾದ ಮಾಹಿತಿಗಳನ್ನು ಧ್ವನ್ಯಾತ್ಮಕವಾಗಿ ಹೊರಗೆಡವುದರ ಜೊತೆಗೆ ಅವುಗಳನ್ನು ಬಾಹ್ಯಪರಿಕರಗಳಲ್ಲಿ ದಾಖಲಿಸುವ ಪ್ರವೃತ್ತಿ, ತಾಂತ್ರಿಕತೆಗಳು ಮಾನವನಲ್ಲಿ ಬೆಳೆದುಬಂದವು. ಹೀಗೆ ಬೆಳೆದುಬಂದ ಭಾಷೆಗಳು ಓದು ಬರಹಗಳಿಗೆ ಕಾರಣವಾಗಿವೆ. ನಮ್ಮ ಅದೃಷ್ಟವೆಂಬಂತೆ ಭಾರತೀಯ ಭಾಷೆಗಳು ಅತ್ಯಂತ ವೈಜ್ಞಾನಿಕ, ಅಸಂದಿಗ್ಧ, ಸಂಬದ್ಧ ರಚನೆಯ, ಉಚ್ಚಾರಣೆ ಮತ್ತು ಬರವಣಿಗೆಗಳ ನಡುವೆ ಅವಿನಾಭಾವ ಸಂಬಂಧವನ್ನು ಹೊಂದಿರುವ ತರ್ಕಬದ್ಧ ಭಾಷೆಗಳಾಗಿವೆ.

ಹೀಗೆ ಮನದಲ್ಲಿ ಅಭಿವೃದ್ಧಿಗೊಂಡ ಭಾಷೆಗಳು ಓದು ಬರಹಗಳಿಗೆ ಕಾರಣವಾಗಿವೆ. ಭಾಷೆಗಳ ಆರಂಭದೊಂದಿಗೆ ಅವುಗಳ ಬಳಕೆಯು ಎಲ್ಲ ವಿಧವಾದ ಆಲೋಚನೆಗಳಿಗೆ ಮೂರ್ತರೂಪವನ್ನು ನೀಡಲು ಸಾಧ್ಯವಾಯಿತು. ವಿಷಯ ವೈವಿಧ್ಯಗಳು ಮತ್ತು ಅವುಗಳ ಆಳ, ವೈಶಾಲ್ಯ ಮುಂತಾದವುಗಳನ್ನು ಅತ್ಯಂತ ವ್ಯವಸ್ಥಿತವಾಗಿ ರೂಪುಗೊಳಿಸಿ ಪ್ರತ್ಯೇಕವಾದ ವಿಷಯ ಸಂಗ್ರಹಗಳನ್ನಾಗಿ ದಾಖಲಿಸುವ ತಂತ್ರಗಾರಿಕೆಗಳೂ ಮಾನವನಿಗೆ ಸಿದ್ಧಿಸಿದವು. ಮುಂದುವರೆದು ಮನದಲ್ಲೇ ಸಿದ್ಧವಾಗುವ ವಿವಿಧ ಮಾಹಿತಿಸಂಗ್ರಹಗಳನ್ನು ಪ್ರತ್ಯೇಕವಾದ ನೆನಪಿನ ಅಂಶಗಳನ್ನಾಗಿ ಸಂಗ್ರಹಿಸಿಟ್ಟುಕೊಂಡು ಅಗತ್ಯವಾದಾಗಲೆಲ್ಲ ಬೇಕಾದವನ್ನು ಆಯ್ದು ಧ್ವನ್ಯಾತ್ಮಕವಾಗಿ ಹೊರತಂದು ಬಳಸುವ ಅಪಾರ ಪರಿಣತೆಯೂ ಮಾನವನಿಗೆ ಸಿದ್ಧಿಸಿದವು. ಮುಂದೆ ಭಾಷೆಗಳನ್ನು ಲಿಪಿಗಳ ಮೂಲಕ ದಾಖಲಿಸಿ ಅವುಗಳನ್ನು ಬರಹ ಮಾಧ್ಯಮದಲ್ಲಿ ಬಾಹ್ಯಪ್ರಪಂಚಕ್ಕೆ ತಲುಪಿಸುವ, ಅವುಗಳನ್ನು ಸರಿಯಾಗಿ ಓದುವ ಧ್ವನಿ–ಬರಹಗಳ ನಡುವಿನ ಅದ್ಭುತ ಸಾಮರಸ್ಯ ಸಾಧನೆಗಳೇ ಓದು ಬರಹಗಳ ವೈಜ್ಞಾನಿಕ ಬೆಳವಣಿಗೆಗೆ ದಾರಿಯಾದವು. ಶಿಲಾಬರಹಗಳಿಂದ ಆರಂಭಗೊಂಡು ಕಾಗದಗಳು ಹಾಗೂ ವೈವಿಧ್ಯಮಯ ಲೇಖನ ಸಾಮಗ್ರಿಗಳ ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯಗಳು ಅತ್ಯಂತ

ರೋಚಕ ವಿಚಾರಗಳಾಗಿವೆ. ಕಳೆದ ಇನ್ನೂರು ವರ್ಷಗಳಲ್ಲಿ ಈ ಪರಿಕರಗಳು ಮಾನವನ ಜೀವನದ ಅತ್ಯಗತ್ಯ, ಅನಿವಾರ್ಯ, ಅತ್ಯಮೂಲ್ಯ, ಅದ್ಭುತ ಹೀಗೆ ಅನೇಕ ಗುಣಮೌಲ್ಯದ ಸಾಧನಗಳಾಗಿ ಪರಿಣಮಿಸಿದವು. ಅಗಾಧ ಮಾಹಿತಿಗಳನ್ನು ನೆನಪಿಡಬೇಕಾದಂತಹ ಸಂದರ್ಭಗಳು ನೀಡಿದ ಸವಾಲನ್ನು ಈ ಬರಹಸಾಧನಗಳು ನಿವಾರಿಸಿದವು.

ಆದರೆ ಬರಹರೂಪದಲ್ಲಿ ಇಡಲಾರಂಭಿಸಿದ ಮಾಹಿತಿಗಳ ಪ್ರಮಾಣಗಳು ಅಗಾಧವಾಗಿ ಪರಿಣಮಿಸುತ್ತಾ ಇವುಗಳನ್ನು ನಾಶವಾಗದಂತೆ ಅನೇಕಾನೇಕ ಗ್ರಂಥಗಳ ಮೂಲಕ ವ್ಯವಸ್ಥಿತವಾಗಿ ಶೇಖರಿಸಿಡುವ ಸಮಸ್ಯೆಗಳೂ ಹೆಚ್ಚುತ್ತಾ ಹೋದವು. ಅಲ್ಲದೆ ಮುಖ್ಯವಾಗಿ ವಿವಿಧ ವೈಜ್ಞಾನಿಕ ಶಾಸ್ತ್ರಗಳ ಬೆಳವಣಿಗೆಗಳು ಅವುಗಳನ್ನು ಬಳಸುವಲ್ಲಿ, ಅವುಗಳಲ್ಲಿನ ನಿಯಮಗಳಾನುಸಾರವಾದ ಲೆಕ್ಕಾಚಾರಗಳನ್ನು ಮಾಡುವಲ್ಲಿ ಅನೇಕಾನೇಕ ನಿಗದಿತ ಮಾರ್ಗಗಳಲ್ಲಿ ವಿಚಾರಗಳನ್ನು ಬೆಳೆಸುವಲ್ಲಿ ಮನಕ್ಕೆ ಶ್ರಮದಾಯಕ ಎನ್ನುವ ಬೌದ್ಧಿಕ ಕಸರತ್ತುಗಳನ್ನು ಎದುರಿಸಬೇಕಾಗುತ್ತದೆ ಎಂಬುದನ್ನು ಕಂಡುಕೊಳ್ಳಲಾಯಿತು. ಈ ಹಂತದಲ್ಲೇ ಸುಮಾರು ೬೦ ವರ್ಷಗಳಿಗೂ ಹಿಂದೆ ಸುವ್ಯವಸ್ಥಿತ ಗಣಕಯಂತ್ರದ ಆವಿಷ್ಕಾರವಾಯಿತು. ಆರಂಭದಲ್ಲಿ ಗಣಿತೀಯ ಲೆಕ್ಕಾಚಾರಗಳಿಗೆಂದು ಅಭಿವೃದ್ಧಿಗೊಂಡ ಗಣಕಗಳು ಕ್ರಮೇಣ ಗ್ರಂಥಸ್ತ ಮಾಹಿತಿಗಳನ್ನು ವಿದ್ಯುನ್ಮಾನ ರೂಪದಲ್ಲಿ ದಾಖಲಿಸಬಹುದಾದ ಸೌಲಭ್ಯಗಳನ್ನು ನೀಡವಂತಾದವು. ಯಾಂತ್ರಿಕತೆಯ ಬೆಳವಣಿಗೆಯಾದಂತೆ ಇವುಗಳಲ್ಲಿ ದಾಖಲಾಗುವ ಮಾಹಿತಿಗಳು ಅತಿ ಸೂಕ್ಷ್ಮರೂಪದಲ್ಲಿದ್ದು ಬೀರುವೊಂದರಲ್ಲಿನ ಪುಸ್ತಕಗಳು ಅಂಗೈಯೊಳಗೆ ದೊರಕಲು ಸಾಧ್ಯವಾಯಿತು. ಹೀಗೆ ದಾಖಲುಗೊಂಡ ಅಪಾರ, ವೈವಿಧ್ಯಮಯ ಮಾಹಿತಿಗಳು, ಗ್ರಂಥಗಳ ವಿಚಾರಗಳು ಮನದಲ್ಲಿನ ನೆನಪಿನ ಕೋಶದಿಂದ ಬಾಹ್ಯ ಮನದ ಮೇಲೆ ಮೂಡುವಷ್ಟೇ ವೇಗದಿಂದ ಗಣಕ ಪರದೆಯ ಮೇಲೆ ಮೂಡಲಾರಂಭಿಸಿದವು. ಗಣಕಗಳಲ್ಲಿನ ಕಾರ್ಯನಿರ್ವಹಣಾ ಮಾಧ್ಯಮವಾದ ವೈವಿಧ್ಯಮಯ ತಂತ್ರಾಂಶಗಳ ಅಭಿವೃದ್ಧಿಯ ಕಾರಣದಿಂದ ಅಪಾರವಾಗಿರುವ ವೈವಿಧ್ಯಮಯ ರೀತಿಯಲ್ಲಿನ ಮಾಹಿತಿಗಳನ್ನು ಆಯ್ಕೆ ಮಾಡಲು ಸಾಧ್ಯವಾಗಿದೆ. ಮಾಹಿತಿಗಳ ಲೋಕದಲ್ಲಿ ಹೇಗೆಂದರೆ ಹಾಗೆ ಸಂಚರಿಸಿ ಬೇಕಾದ್ದನ್ನು ಆಯ್ಕೆ ಮಾಡಿ ಪರದೆಯ ಮೇಲೆ ಮೂಡಿಸುವ, ಮುದ್ರಕಗಳ ಮೂಲಕ ಕಾಗದಗಳ ಮೇಲೆ ಮುದ್ರಿಸಿಕೊಳ್ಳುವ ಕ್ಷಣಮಾತ್ರದ ಸೌಲಭ್ಯಗಳು ಓದು, ಬರಹ ಹಾಗೂ ಗಣಕಗಳ ನಡುವೆ ಅವಿನಾಭಾವ ಸಂಬಂಧಗಳನ್ನು ಉಂಟುಮಾಡುತ್ತಿವೆ. ಕೇವಲ ಲಿಪಿರೂಪದ ಮಾಹಿತಿಗಳೇ ಅಲ್ಲದೆ ಧ್ವನಿರೂಪದ, ಚಿತ್ರಾತ್ಮಕವಾದ ಮಾಹಿತಿಗಳನ್ನೂ ಅವುಗಳ ಎಲ್ಲ ರೀತಿಯ ವೈವಿಧ್ಯತೆಗಳೊಡನೆ ಗಣಕದೊಳಗೆ ದಾಖಲಿಸಿಟ್ಟು ಅದೇ ರೂಪಗಳಲ್ಲಿ ಮತ್ತೆ ಪಡೆಯುವಂತಾಗಿರುವುದು ಕ್ರಾಂತಿಕಾರಕ ಬೆಳವಣಿಗೆಯಾಗಿ ಪರಿಣಮಿಸಿದೆ. ಇದರಿಂದ ಗ್ರಂಥಗಳ ಗಣಕೀಕರಣದಲ್ಲಿ ಕ್ರಾಂತಿಕಾರಕ ಕಾರ್ಯಗಳಾಗಿವೆ. ಮುಖ್ಯವಾಗಿ ಗಣಕಗಳಿಗೆ ಮಾಹಿತಿಗಳನ್ನು ಊಡಿಸುವ ದಿಕ್ಕಿನ ಕ್ರಾಂತಿಕಾರಕ ಸಾಧನೆಗಳು ಕಂಡುಬರುತ್ತಿವೆ. ಮೊದಲನೆಯದಾಗಿ, ಕೈಬರಹ, ಬೆರಳಚ್ಚು ಯಂತ್ರ ಹಾಗೂ ಮುದ್ರಣಯಂತ್ರಗಳಿಂದ ಮೂಡಿಬಂದ ಮಾಹಿತಿಗಳನ್ನು ಓದಿ ಗಣಕದ ನೆನಪಿನಕೋಶಗಳಲ್ಲಿ ಶೇಖರಿಸಿಡಬಲ್ಲ ಗಣಕಗಳು ಅಭಿವೃದ್ಧಿಗೊಂಡು ಬಳಕೆಗೆ ಬರುತ್ತಿವೆ. ಇನ್ನೂ ಮುಂದುವರೆದ ಅಭಿವೃದ್ಧಗೊಳ್ಳುತ್ತಿರುವ ತಾಂತ್ರಿಕತೆಯ ಉದ್ದೇಶವು ನಮ್ಮ ಮಾತುಗಳನ್ನು ಗ್ರಹಿಸಿ ಅದನ್ನು ಲಿಪ್ಯಂತರಗೊಳಿಸಿ ಗಣಕದೊಳಗೆ ಶೇಖರಿಸಿಟ್ಟು ತೆರೆಯ ಮೇಲೆ ಮೂಡಿಸಲು ನಂತರ ಮುದ್ರಿಸಿಕೊಳ್ಳಲು ಅನುವು ಮಾಡಿಕೊಡುವುದಾಗಿದೆ. ಗ್ರಂಥಗಳನ್ನೂ ಓದುವ ಜಾಣ ತಂತ್ರಾಂಶವು ಪರದೆಯ ಮೇಲೆ ಮೂಡಿರುವ ಮಾಹಿತಿಗಳನ್ನು ಧ್ವನ್ಯಾತ್ಮಕವಾಗಿ ಓದಿಹೇಳುವ ತಾಂತ್ರಿಕತೆಯಾಗಿದೆ. ಇದು ದೃಷ್ಟಿಮಾಂದ್ಯರಿಗೆ ಒಂದು ವರದಾನವಾಗಿದೆ. ಮತ್ತೊಂದು ಹೀಗೆ ರೋಚಕ ಮಾನವನ ಸಾಧನೆ ಎಂದರೆ ಮೆದುಳಿನ ಕ್ರಿಯೆಗಳ ಕೆಲವಾರು ಪ್ರಮುಖ ಅಂಶಗಳನ್ನು ಯಾಂತ್ರೀಕರಿಸುವ ತಾಂತ್ರಿಕ ಕ್ರಿಯೆಗಳ ಮಾಹಿತಿ ತಂತ್ರಜ್ಞಾನದ ಅಪೂರ್ವ ಸಾಧನೆಗಳಾಗಿವೆ. ಈ ಎಲ್ಲ ವಿಚಾರಗಳು

ಸಾಂಪ್ರದಾಯಿಕ ಓದು ಬರಹ ಚಟುವಟಿಕೆಗಳಲ್ಲಿ ಅಪಾರ ಬದಲಾವಣೆಗಳನ್ನು ತರುತ್ತಿವೆ. ಇವು ಬೌದ್ಧಿಕ ಚಟುವಟಿಕೆಗಳಲ್ಲಿ ಅನೇಕ ಸ್ವಾಗತಾರ್ಹವಾದ ಆದರೆ ಕೆಲವೊಮ್ಮೆ ಬುದ್ಧಿಶಕ್ತಿಗೆ ಆಘಾತಕರವಾದ ಪರಿಣಾಮಗಳನ್ನು ಉಂಟುಮಾಡುವುದನ್ನು ಕಾಣಬಹುದಾಗಿದೆ. ಅಂದರೆ ಓದು ಬರಹಗಳಲ್ಲಿ ಗಣಕಗಳ ಬಳಕೆಯ ಉದ್ದೇಶಗಳೊಡನೆ ಬಳಕೆಯ ಹಾದಿಯಲ್ಲಿದ್ದಾಗ ಬೌದ್ಧಿಕ ಚಟುವಟಿಕೆಯ ಕೇಂದ್ರೀಕರಣದ ಬಿಂದುವಿನ ವ್ಯತ್ಯಾಸ ಆಗುವ ಸಂದರ್ಭಗಳು ಮುಂತಾದವುಗಳನ್ನು ತೀವ್ರವಾಗಿ ಪರಿಗಣಿಸಬೇಕಾಗುತ್ತದೆ.

ಗಣಕಗಳು ಬರುವ ಮುನ್ನ ಗ್ರಂಥಗಳ ಬಾಹುಳ್ಯವಿದ್ದರೂ ಗ್ರಂಥಸ್ಥವಾದ ಅನೇಕ ಪರಸ್ಪರ ಸಂಬಂಧಿ ಸಂಗತಿಗಳು ಓದುಗನ ನೆನಪಿನ ಕೋಶದಲ್ಲಿದ್ದು ಅವುಗಳ ಬಗ್ಗೆ ಯಾವಾಗೆಂದರೆ ಆವಾಗ ಚಿಂತನ ಮಂಥನಗಳನ್ನು ನಡೆಸುವ ಹೆಚ್ಚಿನ ಅವಕಾಶಗಳು ಮತ್ತು ಸಂದರ್ಭಗಳು ಉಂಟಾಗುತ್ತಿದ್ದವು. ಬೌದ್ಧಿಕ ಚಟುವಟಿಕೆಯ ಕಾಲದಲ್ಲಿ ನೂತನ ಅನ್ವೇಷಣೆಗಳು, ಸಾಧನೆಗಳು ಮುಂತಾದವುಗಳಿಗೆ ಭೂಮಿಕೆಯಾಗಿ ಇವು ಅವಶ್ಯವೆನಿಸುತ್ತವೆ. ಗಣಕಗಳು ಬಂದ ನಂತರ ಅದರಲ್ಲಿ ಎಲ್ಲ ಮಾಹಿತಿಗಳೂ ದೊರಕುವುದರಿಂದ ಅವುಗಳನ್ನು ಎಷ್ಟೇ ವೇಗವಾಗಿ ಪಡೆಯಬಹುದೆಂದರೂ ಅದು ಯಾಂತ್ರಿಕತೆಯನ್ನು ಅವಲಂಬಿಸಿರುತ್ತದೆ. ಇದರಿಂದಾಗಿ, ಪರಸ್ಪರ ಸಂಬಂಧಿ ಮಾಹಿತಿಗಳನ್ನು ಮೆದುಳಿನಲ್ಲಿ ಇಟ್ಟುಕೊಳ್ಳುವ ಪ್ರವೃತ್ತಿ ಕಡಮೆಯಾಗುತ್ತದೆ. ಪರಿಣಾಮವಾಗಿ ನೂತನ ವಿಚಾರಗಳ ಮೂಡುವಿಕೆಯ ಹಾದಿಯಲ್ಲಿ ಎಡರು ತೊಡರುಗಳು ಉಂಟಾಗಬಹುದಾಗಿದೆ.

ಆದರೆ ಇದಕ್ಕೆ ವಿರುದ್ಧವಾಗಿ ಗಣಕಗಳಲ್ಲಿನ ವಿಷಯ ಬಾಹುಳ್ಯದಿಂದಲೂ ಅವುಗಳನ್ನ ಯಾವುದೇ ಕ್ರಮದಲ್ಲಾದರೂ, ಯಾವುದೇ ವಿಷಯಾಧಾರವಾಗಿಯೂ ವಿಂಗಡಿಸಿ ಕ್ಷಣಮಾತ್ರದಲ್ಲಿ ನೀಡಬಹುದಾದ ವ್ಯವಸ್ಥೆಯಿಂದಲೂ ಅಪಾರ ಅನುಕೂಲತೆಗಳು ಇರುತ್ತವೆ. ತನ್ನ ಆಲೋಚನೆಗಳ ಮಾರ್ಗದಲ್ಲಿ ಈಗಾಗಲೇ ನಡೆದಿರುವ ಕಾರ್ಯಕ್ರಮಗಳ ಅತಿ ಶೀಘ್ರವಾದ ಸಮಗ್ರ ಅವಲೋಕನ ಇದರಿಂದ ಸಾಧ್ಯವಾಗುತ್ತದೆ. ನೂತನ ವಿಚಾರಗಳ ಸಂಶೋಧನೆಯ ಹಾದಿಯಲ್ಲಿ ಇವು ಅತ್ಯಂತ ಉಪಯುಕ್ತವಾದ ಅಂಶಗಳಾಗಿರುತ್ತವೆ.

ಈ ಎರಡೂ ವಿಚಾರಗಳನ್ನು ಕುರಿತು ಮುಕ್ತವಾಗಿ, ಆಳವಾಗಿ ಪರಿಶೀಲಿಸಬೇಕಾಗುತ್ತದೆ. ಗ್ರಂಥಗಳನ್ನಾದರೋ ಎಲ್ಲೆಂದರಲ್ಲಿಗೆ ಜೊತೆಯಲ್ಲಿ ಒಯ್ಯಬಹುದಾದ ಅಲ್ಲದೆ ಯಾವುದೇ ಕಾಲ ಹಾಗೂ ಸ್ಥಳದಲ್ಲಿ ತೆರೆದು ಓದಬಹುದಾದ ಅನುಕೂಲತೆಗಳಿರುತ್ತವೆ. ಆದರೆ ಜೊತೆಯಲ್ಲಿನ ಗ್ರಂಥಗಳ ಸಂಖ್ಯೆಗೆ ಮಿತಿ ಇರುತ್ತದೆ. ಗಣಕದ ಮುಂದೆ ಕುಳಿತರೆ ನಾವು ಪರಿಶೀಲಿಸಬಹುದಾದ ಗ್ರಂಥಗಳಿಗೆ ಮಿತಿ ಇರುವುದಿಲ್ಲ. ಸಮಯ ಸ್ಥಾನಗಳ ವಿಷಯಗಳಲ್ಲಿ ಸ್ವಾತಂತ್ರ್ಯವಿರುವುದಿಲ್ಲ ಎಂಬುದನ್ನು ಗಮನಿಸಬೇಕು. ಇವೆರಡೂ ಪ್ರಗತಿಗಾಮಿಯಾಗಿರುವುದರಿಂದ ಎರಡೂ ಒಂದಕ್ಕೊಂದು ಪೂರಕವಾಗುವಂತೆ ನೋಡಿಕೊಳ್ಳಬೇಕು. ಅಂದರೆ ಪುಸ್ತಕಗಳು ಮುದ್ರಿತ ರೂಪದಲ್ಲಿರಲಿ ಅಥವಾ ಗಣಕದಲ್ಲಿರಲಿ ಅವುಗಳ ಆಳವಾದ ಓದು, ಅಧ್ಯಯನಗಳಿಗೆ ಅನುಕೂಲವಾಗಿರುವಂತೆ ನಮ್ಮ ಇತರ ಚಟುವಟಿಕೆಗಳನ್ನು ಹೊಂದಿಸಿಕೊಳ್ಳಬೇಕಾಗುತ್ತದೆ. ಮರುಮಾಪನ ಮಾಡಿಕೊಳ್ಳಬೇಕಾಗುತ್ತದೆ. ಓದಿಗೆ ಸಂಬಂಧಿಸಿದಂತೆ ಗ್ರಂಥಗಳ ವಿನಿಮಯ ಸಾಗಾಟ, ಮುಂತಾದ ಕಾರ್ಯಗಳಲ್ಲಿ ಗಣಕೀಕರಣ ವ್ಯವಸ್ಥೆಯಲ್ಲಿ ಆಕರ್ಷಕ ಪರಿಕರಗಳು ದೊರಕಲಾರಂಭಿಸಿವೆ. ಗ್ರಂಥಗಳ ಅಪೇಕ್ಷಿತ ಭಾಗಗಳನ್ನು ಗಣಕದೊಳಗೆ ಸಂಗ್ರಹಿಸಿ, ಬಹುದೊಡ್ಡ ಪ್ರಮಾಣದಲ್ಲಿದರೂ ಅವುಗಳನ್ನು ಕೈಗಾತ್ರದ ಲೇಖನಿ ಗಾತ್ರದ ಪರಿಕರಗಳ ಒಳಗೆ ಸಂಗ್ರಹಿಸಬಹುದಾದ ತಾಂತ್ರಿಕತೆ ಜೇಬಿನಲ್ಲಿಟ್ಟು ಒಯ್ಯಬಹುದಾದ ಅನುಕೂಲತೆಗಳು ಈಗ ಸಿದ್ಧವಾಗಿದೆ.

ವೈಜ್ಞಾನಿಕ ಕ್ಷೇತ್ರದಲ್ಲಿನ ಕಾರ್ಯಗಳಲ್ಲಿ ತೊಡಗಿರುವಾಗ ಈ ದ್ವಂದ್ವಗಳು ಹೆಚ್ಚು ಪಾರದರ್ಶಕವಾಗಿ ಕಾಣಬರುತ್ತದೆ. ಉದಾಹರಣೆಗೆ ಗಣಿತ ಶಾಸ್ತ್ರಾಧ್ಯಯನವನ್ನು ಗಮನಿಸಿ ಆರಂಭದಲ್ಲಿ ಸಂಕಲನ,

ವ್ಯವಕಲನ, ಗುಣಾಕಾರ, ಭಾಗಾಕಾರ ಮುಂತಾದ ಅಂಕಗಣಿತ ಕ್ರಿಯೆಗಳು ಮನಪಾಠದಲ್ಲಿ ಬೇರೂರಿ ಅಂಕಗಣಿತ ಲೆಕ್ಕಾಚಾರಗಳನ್ನು ಮನದಲ್ಲೇ ಮಾಡಿಕೊಂಡು ಥಟ್ ಎಂಬಂತೆ ಉತ್ತರವನ್ನು ನೀಡುವ ಕ್ರಿಯೆಗಳು ಎಲ್ಲರಲ್ಲೂ ಬೇರೂರಿದ್ದವು. ಆದರೆ ಲೆಕ್ಕಾಚಾರ ಯಂತ್ರಗಳು ಕೈಗೆ ಬರಲಾರಂಭಿಸಿ ದೊಡನೆ ಈ ಕ್ರಿಯೆಗಳೆಲ್ಲವೂ ಮರೆತು ಗಣಿತದ ಲೆಕ್ಕಾಚಾರಗಳು ಪೂರ್ಣ ಯಂತ್ರಾವಲಂಬಿ ಆಗುತ್ತಿವೆ. ಇದರ ಪರಿಣಾಮವಾಗಿ ಅತಿ ಸುಲಭ, ಸರಳ, ಹಾಗೂ ನೇರ ಲೆಕ್ಕಾಚಾರಗಳು ಎದುರಾದಾಗಲೂ ಯಂತ್ರಗಳ ಮೊರೆ ಹೋಗುವ ಮುಖ್ಯವಾಗಿ, ಚಿಕ್ಕವಯೋಮಾನದ ಮಕ್ಕಳು ಗಣಿತ ಲೆಕ್ಕಾಚಾರಗಳ ಅಂತರ್ಯದ ನಿಯಮಗಳು ಲಕ್ಷಣಗಳು ಮುಂತಾದವುಗಳನ್ನು ಪೂರ್ಣವಾಗಿ ಅರಿಯದಂತೆ ಆಗುವ ಸಂದರ್ಭಗಳು ಉಂಟಾಗುತ್ತವೆ. ಇದು ಇತರ ಎಲ್ಲಾ ವಿಜ್ಞಾನ ವಿಷಯಗಳಿಗೂ ಅನ್ವಯವಾಗುತ್ತವೆ. ವಿಷಯವೊಂದರ ಹಲವಾರು ಅಂಗಗಳ ನಡುವಿನ ಸಂಬಂಧಗಳು, ಪರಸ್ಪರ ಪರಿಣಾಮಗಳು ಮುಂತಾದವನ್ನು ಪ್ರತಿನಿಧಿಸುವ ಲಕ್ಷಣಗಳು, ಸಮೀಕರಣಗಳು, ಸೂತ್ರಗಳು ಮುಂತಾದವುಗಳು ಮನದಟ್ಟಾಗಿ ಆಗಾಗ್ಗೆ ಬಳಸುವಂತಾಗಲು ಅವುಗಳಲ್ಲಿನ ಬಹುಪಾಲು ಅಂಶಗಳು ನೆನಪಿನ ಅಂಗಳದಲ್ಲಿ ಇರಬೇಕಾಗುತ್ತದೆ. ಆದರೆ, ಗಣಕೀಕೃತಗೊಂಡ ಇವೆಲ್ಲವೂ ಕ್ಲಿಕ್ಕಿಸಿದಾಗ ದೊರೆಯುವಂತಾದರೆ ಮನದಲ್ಲಿ ಇವು ಇರದಂತಾಗಿ ಆ ಮಟ್ಟಿಗೆ ಆಲೋಚನಾ ಪ್ರವೃತ್ತಿ, ಬೌದ್ಧಿಕವಾಗಿ ಬೆಳೆಯಲು ಬೇಕಾದ ನಿಜವಾದ ಸೃಜನಾತ್ಮಕ ಶಕ್ತಿ ಮುಂತಾದವುಗಳು ಕುಂಠಿತವಾಗಬಹುದು.

ಇನ್ನು ಬರವಣಿಗೆಗೆ ಸಂಬಂಧಿಸಿದಂತೆಯೂ ಹಲವಾರು ದ್ವಂದ್ವಗಳ ವಿವೇಚನೆಯು ಸೂಕ್ತವೆನಿಸುತ್ತದೆ. ಕೈಬರಹದಲ್ಲಿ ಅವಲಂಬಿತವಾಗಿದ್ದಾಗ ಎಲ್ಲೆಂದರಲ್ಲಿ ಜೇಬಿನಲ್ಲಿ, ಬಗಲಿನಲ್ಲಿ, ಕೈಯಲ್ಲಿ ಕಾಗದದ ಹಾಳೆಗಳು, ಚೀಟಿಗಳು ಇದ್ದು ನಮಗೆ ಆ ಕ್ಷಣದಲ್ಲಿ ತೋರಿದರೂ ಮುಂದೆ ಮರೆಯಬಹುದಾದ ವಿಚಾರಗಳ ದಾಖಲೆಗಳಿಗೆ ಅವಕಾಶವಿರುತ್ತದೆ. ಈ ಬರಹಗಳು ಕಾಲ, ಸ್ಥಾನ, ಮಿತಿಗಳಿಂದ ಹೊರತಾಗಿ ಮೂಡುತ್ತವೆ. ಆದರೆ ಮಾಹಿತಿಗಳ ಊಡಿಕೆಯು ಕೇವಲ ಗಣಕಾವಲಂಬಿಯಾಗಿ ಪರಿಣಮಿಸಿದರೆ ಇಂತಹ ದಿಢೀರ್ ದಾಖಲೆಗಳ ಅನುಕೂಲತೆಗಳಿಂದ ವಂಚಿತರಾಗುತ್ತೇವೆ. ಗಣಕದಲ್ಲಾದರೋ ಬರಹದ ಯಾವುದೇ ಭಾಗದಲ್ಲಿನ ಯಾವುದೇ ಅಂಶವನ್ನಾದರೂ (ಉಳಿದ ಭಾಗಗಳಲ್ಲಿ ಯಾವುದೇ ವ್ಯತ್ಯಯಗಳಾಗದಂತೆ) ಬದಲಿಸಬಹುದಾದ ಅನುಕೂಲತೆಗಳಿರುವುದನ್ನು ಗಮನಿಸಬೇಕು. ಇನ್ನು ಮುಂದೆ ಗಣಕದ ಧ್ವನಿಜಾಣ ತಂತ್ರಾಂಶ ಪರಿಕರವು ಸುಲಭವಾಗಿ ಕೈಗೆಟಕುವಂತಾದರೆ, ನಾವು ಬಾಯಿಯಲ್ಲಿ ನುಡಿಯುವ ಮಾತುಗಳು ಲಿಖಿತರೂಪದಲ್ಲಿ ದಾಖಲಾಗಿಬಿಡುವ ಸೌಲಭ್ಯವು ಸುಲಭವಾಗಿ ದೊರಕುವಂತಾಗಿ ನಮ್ಮ ಮನದಲ್ಲಿ ಹೊಳೆಯುವ ವಿಚಾರಗಳ ಅಭಿವ್ಯಕ್ತಿಗೆ ಕೈಬರಹದ ಅಗತ್ಯವೇ ಇಲ್ಲದಂತಾಗಬಹುದು. ಆದರೆ ಈ ಸೌಲಭ್ಯಗಳು ಯಂತ್ರಾವಲಂಬಿ, ಎಂಬುದನ್ನು ನಾವು ಗಮನಿಸಬೇಕು.

ಒಟ್ಟಿನಲ್ಲಿ ಓದು, ಬರಹ ಹಾಗೂ ಗಣಕಗಳಿಗೆ ಸಂಬಂಧಿಸಿದಂತೆ ಹಲವಾರು ಆಗುಹೋಗುಗಳಿಗೆ ಕಾರಣವಾಗಬಹುದಾದ ವಿಚಾರಗಳ ಬಗ್ಗೆ ನಾವು ಗಂಭಿರವಾಗಿ ಪರಿಶೀಲಿಸಬೇಕಾದ ಕಾಲ ಬರುತ್ತಿದೆ.

ಗಣಕ ಪರಿಸರದಲ್ಲಿಯಾದರೋ ಅಗಾಧ ವಿಷಯಗಳ ಅತ್ಯಾಕರ್ಷಕ ಹಾಗೂ ಮನಮುಟ್ಟುವ ರೂಪದಲ್ಲಿ ಅತ್ಯಂತ ವ್ಯವಸ್ಥಿತವಾಗಿ ಸಂಗ್ರಹಿಸಲ್ಪಟ್ಟಿರುವ ದಾಖಲೆಗಳು ಅವುಗಳ ಅತಿ ಸುಲಭದ ರೂಪದಲ್ಲಿ ... ಅತ್ಯಂತ ವ್ಯವಸ್ಥಿತವಾಗಿ

ಗಮನಾರ್ಹವಾಗಿವೆ. ಹೀಗೆ ಬೌದ್ಧಿಕ ಬೆಳವಣಿಗೆಯ ಇತ್ತೀಚಿನ ಸಮಸ್ಯೆಗಳನ್ನು ಪರಿಹರಿಸಲು, ಸಾಂಪ್ರದಾಯಕ ಓದು ಬರಹಗಳ ಮತ್ತು ಗಣಕಾಧಾರಿತ ಅಧ್ಯಯನದ ಪರಿಸರಗಳನ್ನು ತಾರ್ಕಿಕವಾಗಿ ವಿಮರ್ಶಿಸಿ ಅವುಗಳ ಸಾಧಕ ಬಾಧಕಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿ ಈ ಎರಡೂ ಕ್ರಿಯೆಗಳು ಪರಸ್ಪರ ಪೂರಕವಾಗುವಂತೆ ಬಹು ಮುಖ್ಯವಾಗಿ, ೧೨ ವರ್ಷ ವಯಸ್ಸಿನೊಳಗೆ ಇರುವ ಮಕ್ಕಳು ತಾವು ಕಲಿತ ವಿಷಯಗಳನ್ನು ಮನದಲ್ಲಿಟ್ಟುಕೊಂಡು ಅವುಗಳ ಬಗ್ಗೆ ತಮ್ಮದೇ ಆದ ಆಲೋಚನಾ ಪ್ರವೃತ್ತಿಗಳನ್ನು ಬೆಳೆಸಿಕೊಳ್ಳಲು ಅನುವಾಗುವಂತಹ ಕ್ರಿಯಾಮಾರ್ಗಗಳನ್ನು ರೂಪಿಸಬೇಕು. ಮುದ್ರಿತ ಪುಸ್ತಕಗಳನ್ನು ಓದುವ, ಲೇಖನಿಯನ್ನು ಹಿಡಿದು ಬರೆಯುವ ದಿಕ್ಕಿನಲ್ಲಿ ಧನಾತ್ಮಕ ವಿಚಾರಗಳನ್ನು ನಾವು ಗುರುತಿಸಿಕೊಂಡು ಅವುಗಳ ಆಚರಣೆಯಲ್ಲಿ ಉಳಿಸಿಕೊಳ್ಳುವ ಅಗತ್ಯತೆಯನ್ನು ಎಲ್ಲರಿಗೂ ತಿಳಿಯಪಡಿಸಬೇಕು. ಇವುಗಳಿಂದ ವಿಮುಖರಾದಂತೆ ಮಕ್ಕಳಿಗೆ ತಿಳಿಹೇಳುವ ಕಾರ್ಯವೂ ಆಗಬೇಕು. ಅಂತೆಯೇ ಓದು, ಬರಹ ಕ್ರಿಯೆಗಳಲ್ಲಿ ಕ್ರಾಂತಿಕಾರಿ ಸುಧಾರಣೆಗಳನ್ನು ತರುತ್ತಿರುವ ಗಣಕ ಪರಿಸರಕ್ಕೆ ಹೊಂದಿಕೊಳ್ಳುವ, ಅವುಗಳನ್ನು ಬಳಸಿಕೊಳ್ಳುವ ದಾರಿಯನ್ನೂ ತೋರಿಸಬೇಕಾಗುತ್ತದೆ. ಈ ಎರಡೂ ಕ್ರಿಯೆಗಳು ಪರಸ್ಪರ ಪೂರಕವಾಗಿರಬೇಕೆಂಬುದೇ ನಮ್ಮ ಚಿಂತನೆಗಳ ಉದ್ದೇಶವಾಗಿರಬೇಕು. ❑

ಎಂ.ಎಂ. ಕಲಬುರ್ಗಿ ಅವರಿಗೆ ಅಭಿನಂದನೆ

ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ ಪಡೆದ; ಹಿರಿಯ ಸಂಶೋಧಕರಾದ, 'ಪ್ರಜಾಸಾಹಿತ್ಯ' ಬಳಗದವರೂ ಆದ ಎಂ.ಎಂ. ಕಲಬುರ್ಗಿ ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು.

ಯಾವ "ಮಾರ್ಗ"ದಿಂದ ವೈಯಕ್ತಿಕವಾಗಿ, ಕೌಟುಂಬಿಕವಾಗಿ ಜರ್ಜರಿತರಾಗಿದ್ದರೊ, ಅದೇ "ಮಾರ್ಗ" ಹಿಡಿದು, ಈ ಸಾಲಿನ ರಾಷ್ಟ್ರಮಟ್ಟದ ಪ್ರಸ್ತಿ ದೊರಕಿರುವುದು ಹೆಮ್ಮೆಯ, ಸತ್ಯ ಮಾರ್ಗಕ್ಕೆ ಸಂದ ಮನ್ನಣೆಯಾಗಿದೆ.

ಸಹಜವಾಗಿ ಕಲಬುರ್ಗಿಯವರಿಗೂ ಈ ಮೊದಲೇ ಮಾರ್ಗ ೧, ಅಥವಾ ೨, ಅಥವಾ ೩ ಗ್ರಂಥಗಳಿಗೆ ಪ್ರಶಸ್ತಿ ಬರಬೇಕಿತ್ತು. ೪ರ ಮೂಲಕ, ನಾಲ್ಕಕ್ಕೂ ಬಂದಂತಾಯಿತು. ಪ್ರಶಸ್ತಿ ಬಂದ ಸಂದರ್ಭ, ಸುವರ್ಣ ಕರ್ನಾಟಕ; ಅದೂ ಉತ್ತರ ಕರ್ನಾಟಕದ ಹಿರಿಯರೊಬ್ಬರಿಗೆ ಸಂದಿರುವುದು, ಅಖಂಡ ಕರ್ನಾಟಕಕ್ಕೇ ಸಂತೋಷವಾಗಿದೆ.

ಮುಖ್ಯವಾಗಿ, ತಮ್ಮ ಜೀವಮಾನವೆಲ್ಲವೂ ಸಂಶೋಧನಾ ಕ್ಷೇತ್ರಕ್ಕೆ, ಶಿಕ್ಷಣ ಕ್ಷೇತ್ರಕ್ಕೆ ತೊಡಗಿಸಿಕೊಂಡ ಕಲಬುರ್ಗಿಯವರಿಗೆ ಸಂದ ಪ್ರಶಸ್ತಿ, ಸಂಶೋಧನಾ ಪ್ರಕಾರಕ್ಕೇ ಮಾನ್ಯತೆ ದೊರಕಿ, ಆ ಕ್ಷೇತ್ರ ಉಸಿರಾಡುವಂತೆ ಆಗಿದೆ. ಜಿ.ಎಸ್.ಎಸ್. ಅವರಂತೆಯೇ ಅಸಂಖ್ಯಾತ, ಸಮರ್ಥ ಶಿಷ್ಯವರ್ಗವನ್ನೂ ಪಡೆದ, ನಾಡಿನಾದ್ಯಂತ ಗೆಳೆಯರು ಅಭಿಮಾನಿಗಳನ್ನು ಪಡೆದ ಕಲಬುರ್ಗಿಯವರ ಸ್ನೇಹ, ಸರಸ, ಸಜ್ಜನಿಕೆ ಮತ್ತಷ್ಟು ಕಾಲ ನಾಡು, ನುಡಿ, ಸಂಸ್ಕೃತಿಗೆ ದೊರಕುವಂತಾಗಲಿ.

ಸಂಪಾದಕ

ಕರ್ನಾಟಕ ಶಾಸ್ತ್ರೀಯ ಸಂಗೀತ ಲಯವಾದ್ಯಪಠ್ಯಪುಸ್ತಕಗಳು

ಸಾತವಲ್ಲಿ ಜಗತಿಪ್ರಿಯ

ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯು ಸಂಗೀತ, ನೃತ್ಯ ತಾಳವಾದ್ಯ ವಿಷಯಗಳಲ್ಲಿ ಪರೀಕ್ಷೆಯನ್ನು ಪ್ರತೀ ವರ್ಷವೂ ನಡೆಸುತ್ತಿದ್ದು, ಅದಕ್ಕೆ ಪೂರಕವಾಗಿ ಅಗತ್ಯವಿರುವ ಪಠ್ಯಪುಸ್ತಕಗಳನ್ನು ಪಠ್ಯಪುಸ್ತಕ ನಿರ್ದೇಶನಾಲಯವು ಹೊರತಂದಿದೆ. ಕೆಲವು ವರ್ಷಗಳ ಹಿಂದೆ ಈ ಪರೀಕ್ಷೆಗಳ ಪಠ್ಯವಸ್ತುವನ್ನು ಪರಿಷ್ಕರಿಸಿ ನಾಲ್ಕು ಹಂತಗಳಲ್ಲಿ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ. (ಪ್ರಾಥಮಿಕ ಹಂತ, ಮಾಧ್ಯಮಿಕ ಹಂತ, ವಿದ್ವತ್ ಪೂರ್ವ ಹಂತ ಹಾಗೂ ವಿದ್ವತ್ ಹಂತ) ಕರ್ನಾಟಕ ಶಾಸ್ತ್ರೀಯ ಸಂಗೀತದ ಲಯವಾದ್ಯಕ್ಕೆ ಸಂಬಂಧಪಟ್ಟಂತೆ ಮೊದಲ ಮೂರು ಹಂತಗಳಿಗೆ ಪಠ್ಯಪುಸ್ತಕಗಳನ್ನು ರಚಿಸಲಾಗಿದ್ದು ಇವುಗಳ ಸ್ಥೂಲ ಪರಿಚಯವನ್ನು ನೀಡುವುದು ಈ ಲೇಖನದ ಉದ್ದೇಶ.

ಕರ್ನಾಟಕ ಶಾಸ್ತ್ರೀಯ ಸಂಗೀತಕ್ಕೆ ಸಂಬಂಧಪಟ್ಟಂತೆ ಬಹಳ ಹಿಂದಿನಿಂದ ಹಲವಾರು ಶಾಸ್ತ್ರಗ್ರಂಥಗಳು ರಚನೆಯಾಗಿವೆ. ಹಾಗೆಯೇ ಹಲವಾರು ಭಾಷೆಗಳಲ್ಲಿರುವ ಶಾಸ್ತ್ರಗ್ರಂಥಗಳಲ್ಲಿ ಕೆಲವು ಕನ್ನಡಕ್ಕೂ ಅನುವಾದಗೊಂಡಿವೆ. ಹಾಗೆಯೇ ಹಿರಿಯ ವಾಗ್ಗೇಯಕಾರರ ಕೃತಿಗಳೂ ಕೂಡ ಕನ್ನಡದಲ್ಲಿ ಸ್ವರಪ್ರಸ್ತಾರ ಸಹಿತ ಲಭ್ಯವಿದೆ. ಆದರೆ ಕರ್ನಾಟಕ ಸಂಗೀತದ ಲಯವಾದ್ಯಗಳ ಕೃತಿಗಳು ಬಹಳ ವಿರಳ. ತೆಲುಗಿನಲ್ಲಿ ವಿದ್ವಾನ್ ಧರ್ಮಾಲ ರಾಮಮೂರ್ತಿಯವರು, ಇಂಗ್ಲಿಷಿನಲ್ಲಿ ವಿದ್ವಾನ್ ಟಿ.ಎ.ಎಸ್. ಮಣಿಯವರು ಮತ್ತು ವಿದ್ವಾನ್ ಟಿರುಚ್ಚಿ ಶಂಕರನ್ ಅವರು ಹಾಗೂ ತಮಿಳಿನಲ್ಲಿ ಕೆಲವು ಪುಸ್ತಕಗಳನ್ನು ವಿದ್ವಾಂಸರು ತಮ್ಮ ಪಾಠಕ್ರಮದ ಅನುಸಾರ ರಚಿಸಿದ್ದಾರೆ. ವಿದ್ವಾನ್ ಆರ್.ಆರ್. ಕೇಶವಮೂರ್ತಿಯವರು ಬರೆದಿರುವ "ಸಂಗೀತ ಲಕ್ಷ್ಯ ವಿಜ್ಞಾನ" ಎಂಬ ಕೃತಿಯಲ್ಲಿ ತಾಳ–ಲಯಕ್ಕೆ ಸಂಬಂಧಿಸಿದ ಕೆಲವು ಅಧ್ಯಾಯಗಳನ್ನು ರಚಿಸಿರುವುದನ್ನು ಬಿಟ್ಟರೆ ಪೂರ್ಣಪ್ರಮಾಣದಲ್ಲಿ ಕನ್ನಡದಲ್ಲಿ ಬೇರೆ ಯಾವುದೇ ಪುಸ್ತಕ ಪ್ರಕಟವಾಗಿಲ್ಲ. ಈ ನಿಟ್ಟಿನಲ್ಲಿ ಶಿಕ್ಷಣ ಇಲಾಖೆಯು ರಾಜ್ಯದ ಹಿರಿಯ ಲಯವಾದ್ಯಗಾರರ ನೇತೃತ್ವದಲ್ಲಿ ಹೊರತಂದಿರುವ ಈ ಮೂರೂ ಪುಸ್ತಕಗಳು ವಿದ್ಯಾರ್ಥಿಗಳಿಗೂ ವಿದ್ವಾಂಸರಿಗೂ ಬಹು ಉಪಯುಕ್ತವಾಗಿದೆ. ಪ್ರತಿಯೊಂದು ಪಠ್ಯಪುಸ್ತಕ ರಚನೆಗೆ ಪ್ರತ್ಯೇಕ ಸಮಿತಿಯನ್ನು ನೇಮಿಸಲಾಗಿದ್ದು ರಾಜ್ಯದ ಹಿರಿಯ ಲಯವಾದ್ಯಗಾರರ ಸಹಕಾರದಿಂದ ಸರಳ ಹಾಗೂ ವಿದ್ವತ್‌ಪೂರ್ಣ ಪುಸ್ತಕಗಳು ಹೊರಬಂದಿವೆ.

ಪ್ರಾಥಮಿಕ ಹಂತ:

ಪ್ರಾಥಮಿಕ ಹಂತದ ಪಠ್ಯಪುಸ್ತಕ ರಚನಾ ಸಮಿತಿಗೆ ರಾಜ್ಯದ ಹಿರಿಯ ಲಯವಾದ್ಯ ಕಲಾವಿದರಾದ ಶ್ರೀ ಎ.ವಿ. ಆನಂದ್ ಅವರು ಅಧ್ಯಕ್ಷರು. ಶ್ರೇಷ್ಠ ಗುರುಪರಂಪರೆಗೆ ಸೇರಿದ ಶ್ರೀಯುತರು ತಮ್ಮ ಸಾಧನೆಯಿಂದ ವಿಶಿಷ್ಟ ಛಾಪನ್ನು ಮೂಡಿಸಿದವರು. ಇವರು ತಮ್ಮ ದೀರ್ಘ ಅನುಭವದ ಸಾರವನ್ನು ಈ ಕೃತಿಗೆ ಧಾರೆ ಎರೆದಿದ್ದಾರೆ. ಸಮಿತಿಗೆ ರಾಜ್ಯದ ಮತ್ತಿಬ್ಬರು ಹಿರಿಯ ಕಲಾವಿದರ ಶ್ರೀ ಎಂ. ವಾಸುದೇವರಾವ್ ಮತ್ತು ಶ್ರೀ ಜಿ.ಕೆ. ಚಂದ್ರಮೌಳಿ ಅವರು ಸದಸ್ಯರು. ರಾಜ್ಯದ ಹಿರಿಯ ಲಯವಾದ್ಯಗಾರರಾದ ಶ್ರೀ ಟಿ.ಎ.ಎಸ್.ಮಣಿ ಅವರು ಪರಿಶೀಲಕರಾಗಿದ್ದಾರೆ.

ಹದಿಮೂರು ಅಧ್ಯಾಯಗಳನ್ನು ಒಳಗೊಂಡಿರುವ ಈ ಪುಸ್ತಕದ ವಸ್ತುವನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು.

೧) ತಾಳದ ಬಗ್ಗೆ ಕಿರುಪರಿಚಯ, ಕರ್ನಾಟಕ ತಾಳವಾದ್ಯಗಳ ಬಗ್ಗೆ ಹಾಗೂ ಕೆಲವು ಹಿರಿಯ ಲಯ ವಿದ್ವಾಂಸರ ಸಂಕ್ಷಿಪ್ತ ಜೀವನ ಚರಿತ್ರೆ

೨) ಪ್ರಾರಂಭಿಕ ವರಸೆಗಳು, ಸೂಳಾದಿ ತಾಳಗಳಿಗೆ ಸಂಬಂಧಪಟ್ಟ ನಡೆಗಳು, ಮೊಹರ, ಮುಕ್ತಾಯ ಇತ್ಯಾದಿ.

೩) ಪ್ರಾಥಮಿಕ ಹಂತದ ಪರಿಷ್ಕೃತ ಪಠ್ಯವಸ್ತು, ಮಾರ್ಗಸೂಚಿ ಪ್ರಶ್ನೆಪತ್ರಿಕೆ ಹಾಗೂ ಪ್ರಶ್ನಾವಳಿ.

ಲಯವಾದ್ಯದ ಅಡಿಪಾಯವಾದ ತಾಳದ ಬಗ್ಗೆ ಕಿರುಪರಿಚಯ ನೀಡುವ ಮೂಲಕ ಪ್ರಾರಂಭವಾಗುವ ಮೊದಲ ಭಾಗವು ಸೂಳಾದಿ ಸಪ್ತತಾಳಗಳ ಬಗ್ಗೆ ವಿವರಣೆ ಒಳಗೊಂಡಿದೆ. ತಾಳದ ಅಂಗಗಳು, ಜಾತಿಗಳು ಹಾಗೂ ಸಪ್ತತಾಳಗಳ ರಚನಾಕ್ರಮವನ್ನು ವಿವರಿಸಲಾಗಿದೆ. ನಂತರ ಬಾಲಪಾಠಗಳನ್ನು ನುಡಿಸುವ ವಿಧಾನವನ್ನು ಚಿತ್ರಸಹಿತ ಸುದೀರ್ಘವಾಗಿ ವಿವರಿಸಲಾಗಿದೆ. ಈ ಮೂರೂ ಪುಸ್ತಕಗಳಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ ಎಲ್ಲ ಪಾಠಗಳನ್ನು ನಕ್ಷೆಯ ರೂಪದಲ್ಲಿ ಕೋಷ್ಟಕದಲ್ಲಿ ಕೊಡಲಾಗಿದೆ. ಇದರ ಮೂಲಕ ಮೃದಂಗ ಪಾಠವನ್ನು ಕ್ರಮಬದ್ಧವಾಗಿ ತ್ರಿಕಾಲದಲ್ಲಿ ಬರೆಯುವುದನ್ನು ತಿಳಿಯಬಹುದು. ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿಗಳಲ್ಲಿ ಉಪಯೋಗಿಸುವ ಲಯವಾದ್ಯಗಳಾದ ಮೃದಂಗ, ಖಂಜರಿ, ಘಟ, ಮೋರ್ಚಿಂಗ್ ಮತ್ತು ಡೋಲು ಇವುಗಳ ಬಗ್ಗೆ ವಿವರಿಸಲಾಗಿದೆ. ಪ್ರತಿಯೊಂದು ವಾದ್ಯದ ರಚನಾಕ್ರಮ, ವೈಶಿಷ್ಟ್ಯ ಹಾಗೂ ನುಡಿಸಾಣಿಕೆಯ ವ್ಯತ್ಯಾಸವನ್ನು ಸ್ಥೂಲವಾಗಿ ವಿವರಿಸಲಾಗಿದೆ. ಲಕ್ಷ್ಯ-ಲಕ್ಷಣದ ವಿವರಣೆಯ ಜೊತೆಗೆ, ಪುಸ್ತಕದಲ್ಲಿ ನಾಲ್ಕು ಜನ ಹಿರಿಯ ಲಯವಾದ್ಯಗಾರರಾದ (ಶ್ರೀ ಪಳನಿ ಕೃಷ್ಣ ಅಯ್ಯರ್, ಶ್ರೀ ಡಿ. ಶೇಷಪ್ಪ, ಶ್ರೀ ಎಲ್. ಶೇಷಗಿರಿರಾವ್ ಹಾಗೂ ಶ್ರೀ ಎಂ.ಎಲ್. ವೀರಭದ್ರಯ್ಯ) ಸಂಕ್ಷಿಪ್ತ ಜೀವನ ಚರಿತ್ರೆಯನ್ನು ಅಳವಡಿಸಲಾಗಿದೆ.

ಎರಡನೇ ಭಾಗದಲ್ಲಿ ನಡೆ, ಮುಕ್ತಾಯ, ಕೊರಪು, ಮೊಹರ ಇವುಗಳ ವೈಶಿಷ್ಟ್ಯ, ರಚನಾಕ್ರಮ ಹಾಗೂ ಇವುಗಳ ಮಹತ್ತ್ವವನ್ನು ವಿವರಿಸಲಾಗಿದ್ದು, ಬಹು ಉಪಯುಕ್ತ ಮಾಹಿತಿಯನ್ನು ಇಲ್ಲಿ ಸರಳವಾಗಿ ಕೊಡಲಾಗಿದೆ. ಸೂಳಾದಿ ಸಪ್ತತಾಳಗಳ ರಚನೆ, ಪ್ರಾರಂಭಿಕವರಸೆ, ನಡೆ, ಮೊಹರ ಮತ್ತು ಮುಕ್ತಾಯಗಳನ್ನು ತ್ರಿಕಾಲಗಳಲ್ಲಿ ಕ್ರಮಬದ್ಧವಾಗಿ ಕೋಷ್ಟಕದಲ್ಲಿ ಬರೆಯಲಾಗಿದೆ. ಪುಸ್ತಕದ ಕೊನೆಯ ಭಾಗದಲ್ಲಿ ಪ್ರಾಥಮಿಕ ಹಂತದ ಪರಿಷ್ಕೃತ ಪಠ್ಯವಸ್ತು, ಪ್ರಶ್ನಾವಳಿಗಳು ಹಾಗೂ ಮಾರ್ಗಸೂಚಿ ಪ್ರಶ್ನೆ ಪತ್ರಿಕೆಯನ್ನು ಕೊಟ್ಟಿರುವುದು ಪರೀಕ್ಷೆಗೆ ಸಿದ್ಧಗೊಳ್ಳಲು ವಿದ್ಯಾರ್ಥಿಗಳಿಗೆ ಬಹಳ ಸಹಕಾರಿಯಾಗುವಂತಹುದು. ೧೦೫ ಪುಟಗಳುಳ್ಳ ಈ ಮೊದಲ ಪುಸ್ತಕವು ಲಯವಾದ್ಯದ ಬಗ್ಗೆ ಉತ್ತಮ ಮಾರ್ಗದರ್ಶನ ನೀಡುತ್ತದೆ.

ಮಾಧ್ಯಮಿಕ ಹಂತ:

ಎರಡನೇ ಪುಸ್ತಕದ ರಚನಾ ಸಮಿತಿಗೆ ರಾಜ್ಯದ ಹಿರಿಯ ಘಟ ವಿದ್ವಾಂಸರೂ, ಪರ್ಕಸಿವ್ ಆರ್ಟ್ ಸೆಂಟರ್‌ನ ಸ್ಥಾಪನೆಯ ಮೂಲಕ ರಾಜ್ಯದಲ್ಲಿ ಶಾಸ್ತ್ರೀಯ ಸಂಗೀತ ಅದರಲ್ಲಿಯೂ ವಿಶೇಷವಾಗಿ ಲಯವಾದ್ಯದ ಪ್ರಚಾರ ಹಾಗೂ ಬೆಳವಣಿಗೆಗೆ ಕಾರಣಕರ್ತರಾದ ದಿವಂಗತ ಶ್ರೀ ಬೆಂಗಳೂರು ಕೆ.ವೆಂಕಟರಾಂ ಅವರು ಅಧ್ಯಕ್ಷರಾಗಿದ್ದಾರೆ. ಶ್ರೀ ಟಿ.ಎ.ಎಸ್. ಮಣಿ, ಶ್ರೀ ಹೆಚ್.ಎಸ್. ಸುಧೀಂದ್ರ ಹಾಗೂ ಶ್ರೀ ಆನೂರು ಅನಂತ ಕೃಷ್ಣಶರ್ಮ ಅವರು ಸಮಿತಿಯ ಸದಸ್ಯರಾಗಿರುತ್ತಾರೆ. ಶ್ರೀ ಎ.ವಿ. ಆನಂದ್ ಅವರು ಪರಿಶೀಲಕರಾಗಿರುತ್ತಾರೆ.

ಸುಂದರವಾದ ಮುಖಪುಟ ಹೊಂದಿರುವ ೧೩೦ ಪುಟಗಳಿರುವ ಈ ಪುಸ್ತಕವನ್ನು ಪಠ್ಯವಸ್ತುವಿಗೆ ಅನುಗುಣವಾಗಿ ನಾಲ್ಕು ಭಾಗಗಳಾಗಿ ವಿಂಗಡಿಸಲಾಗಿದೆ. ಶಾಸ್ತ್ರವಿಭಾಗದಲ್ಲಿ ೨ ಪತ್ರಿಕೆಗಳು ಹಾಗೂ

ಪ್ರಾಯೋಗಿಕ ವಿಭಾಗದಲ್ಲಿ ೨ ಪತ್ರಿಕೆಗಳಿದ್ದು ಅದೇ ಕ್ರಮದಲ್ಲಿ ಇಲ್ಲಿಯೂ ಒಟ್ಟು ೪ ಭಾಗಗಳಿವೆ. ಮೊದಲನೆಯ ಭಾಗದಲ್ಲಿ ತಾಳದ ಬಗ್ಗೆ ದೀರ್ಘ ಮಾಹಿತಿಯಿದ್ದು ತಾಳದ ಚಾರಿತ್ರಿಕ ಹಿನ್ನೆಲೆ, ತಾಳದ ದಶಪ್ರಾಣಗಳ ಸುದೀರ್ಘ ವಿವರಣೆ ಹಾಗೂ ಅವುಗಳ ಪ್ರಾಯೋಗಿಕ ಮಹತ್ತ್ವವನ್ನು ಉದಾಹರಣೆ ಸಹಿತ ವಿವರಿಸಲಾಗಿದೆ. ನಂತರ ವಿವಿಧ ತಾಳಗಳ ಪರಿಚಯವನ್ನು ಕೊಡಲಾಗಿದ್ದು ಸೂಳಾದಿ ತಾಳಗಳ (೩೫ ತಾಳಗಳ) ವ್ಯವಸ್ಥಾಕ್ರಮ ಹಾಗೂ ಅವುಗಳ ಹೆಸರನ್ನು ತಿಳಿಸಿಕೊಡಲಾಗಿದೆ. ಹಾಗೆಯೇ ಛಾಪುತಾಳಗಳು, ದೇಶಾದಿ ಮತ್ತು ಮಧ್ಯಾದಿ ತಾಳಗಳ ವಿವರಣೆಯೂ ಇದೆ.

ಎರಡನೇ ಭಾಗದಲ್ಲಿ ಸಂಗೀತ ವಾದ್ಯಗಳ ಬಗ್ಗೆ ಮಾಹಿತಿಯನ್ನು ಕೊಡಲಾಗಿದೆ. ವಾದ್ಯಗಳ ವರ್ಗೀಕರಣವನ್ನು ಅವುಗಳ ಚಿತ್ರಸಹಿತವಾಗಿ ವಿವರಿಸಲಾಗಿದೆ. ಪ್ರಾಥಮಿಕ ಹಂತದ ಪುಸ್ತಕದಲ್ಲಿ ವಿವರಿಸಲಾಗಿರುವ ತಾಳವಾದ್ಯಗಳ ತಯಾರಿಕಾ ಕ್ರಮವನ್ನು ಸುದೀರ್ಘವಾಗಿ ಇಲ್ಲಿ ಚಿತ್ರ ಸಹಿತ ವಿವರಿಸಲಾಗಿದೆ. ವಿದ್ಯಾರ್ಥಿಗಳಿಗಷ್ಟೇ ಅಲ್ಲದೆ ಕರ್ನಾಟಕ ಸಂಗೀತದ ಲಯವಾದ್ಯಗಳ ರಚನೆಯನ್ನು ತಿಳಿಯಬಯಸುವವರಿಗೆ ಇದು ಬಹು ಉಪಯುಕ್ತ ಮಾಹಿತಿ. ಮೃದಂಗ, ಘಟ, ಖಂಜರಿ, ಮೋರ್ಚಿಂಗ್ ಹಾಗೂ ಡೋಲು ವಾದ್ಯಗಳ ತಯಾರಿಕೆಯನ್ನು ಮೊದಲ ಹಂತದಿಂದ ಕೊನೆಯ ಹಂತದವರೆಗೆ ಹಾಗೂ ಅದರಲ್ಲಿ ಬಳಸುವ ವಸ್ತುಗಳ ವಿವರವನ್ನು ಕೊಡಲಾಗಿದೆ. ಹಾಗೆಯೇ ವಾದ್ಯಗಳನ್ನು ಶ್ರುತಿ ಮಾಡುವ ಕ್ರಮವನ್ನೂ ತಿಳಿಸಲಾಗಿದೆ. ಈ ಪುಸ್ತಕದ ಮತ್ತೊಂದು ವಿಶೇಷವೆಂದರೆ ಮೊದಲ ಬಾರಿಗೆ ಕರ್ನಾಟಕ ಶಾಸ್ತ್ರೀಯ ಸಂಗೀತದ ಕೆಲವು ಕೃತಿಗಳಿಗೆ ಆಯಾ ತಾಳದ ರಚನೆಗನುಸಾರವಾಗಿ ಸ್ವರ-ಸಾಹಿತ್ಯಕ್ಕೆ ಹೊಂದುವಂತೆ ಮೃದಂಗಾಕ್ಷರಗಳನ್ನು ಕೊಡಲಾಗಿದೆ. ಕೃತಿಗಳಿಗೆ ಅನುಸರಿಸುವ ಕ್ರಮವನ್ನೂ ಹಾಗೂ ಕಛೇರಿಯಲ್ಲಿ ತನಿ ನುಡಿಸುವ ಬಗ್ಗೆಯೂ ವಿವರಿಸಲಾಗಿದೆ. ಮೊದಲ ಪುಸ್ತಕದಲ್ಲಿ ಇರುವಂತೆ ಇಲ್ಲಿಯೂ ಪಠ್ಯವಸ್ತುವಿನಲ್ಲಿ ಹೆಸರಿಸಿರುವ ಲಯವಾದ್ಯಗಾರರ ಕಿರುಪರಿಚಯವನ್ನು ನೀಡಲಾಗಿದೆ. (ಶ್ರೀ ನಾರಾಯಣಸ್ವಾಮಿ ಅಪ್ಪ, ಶ್ರೀಪುದುಕ್ಕೋಟೆ ದಕ್ಷಿಣಾಮೂರ್ತಿ ಪಿಳ್ಳೆ, ಶ್ರೀ ಟಿ. ಮುತ್ತುಸ್ವಾಮಿ ತೇವರ್, ಶ್ರೀ ಹೆಚ್. ಪುಟ್ಟಾಚಾರ್, ಶ್ರೀ ಟಿ.ಎಂ. ಪುಟ್ಟಸ್ವಾಮಯ್ಯ ಹಾಗೂ ಶ್ರೀ ಸಿ.ಕೆ. ಅಯ್ಯಾಮಣಿ ಅಯ್ಯರ್)

ಮೂರನೇ ಹಾಗೂ ನಾಲ್ಕನೇ ಭಾಗದಲ್ಲಿ ನಾಲ್ಕು ತಾಳಗಳಿಗೆ (ಚತುರಶ್ರ್ಯಜಾತಿ ತ್ರಿಪುಟತಾಳ, ತ್ರಿಶ್ಯಜಾತಿ ತ್ರಿಪುಟತಾಳ, ಚತುರಸ್ರಜಾತಿ ರೂಪಕತಾಳ ಹಾಗೂ ಮಿಶ್ರಜಾತಿ ಝಂಪೆತಾಳ) ಚತುರಶ್ರ, ತಿಶ್ರ ಹಾಗೂ ಖಂಡನಡೆಗಳಲ್ಲಿ ಮೊಹರ ಮುಕ್ತಾಯ ಕೊಡಲಾಗಿದೆ. ವಿಶೇಷವೆಂದರೆ ಈ ಎಲ್ಲಾ ಪಾಠಗಳನ್ನು ವ್ಯವಸ್ಥಿತವಾಗಿ ಕೋಷ್ಟಕದಲ್ಲಿ ನೀಡಲಾಗಿದೆ. ಕೊನೆಯದಾಗಿ ಪ್ರಾಥಮಿಕ ಹಂತದ ಪುಸ್ತಕದಲ್ಲಿ ನೀಡಿರುವಂತೆಯೇ ಪರಿಷ್ಕೃತ ಪಠ್ಯವಸ್ತು, ಪ್ರಶ್ನಾವಳಿ ಹಾಗೂ ಮಾರ್ಗಸೂಚಿ ಪ್ರಶ್ನೆಪತ್ರಿಕೆಯನ್ನು ಕೊಡಲಾಗಿದೆ.

ವಿದ್ವತ್‌ಪೂರ್ವ ಹಂತ:

ಮೂನೆಯ ಹಾಗೂ ಇಲ್ಲಿಯವರೆಗೆ ಹೊರಬಂದಿರುವ ಕೊನೆಯ ಪಠ್ಯಪುಸ್ತಕ ಇದಾಗಿದ್ದು, ಅಂತರರಾಷ್ಟ್ರೀಯ ಖ್ಯಾತಿಯ ಮೃದಂಗವಾದಕರೂ, ಹಿರಿಯ ಬೋಧಕರೂ ಆದ ಶ್ರೀ ಟಿ.ಎ.ಎಸ್. ಮಣಿ ಅವರು ಈ ಪಠ್ಯಪುಸ್ತಕ ರಚನಾ ಸಮಿತಿಯ ಅಧ್ಯಕ್ಷರಾಗಿದ್ದಾರೆ. ಇವರು ಇಂಗ್ಲೀಷಿನಲ್ಲಿ "ಸೊಗಸುಗಾ ಮೃದಂಗ ತಾಳಮು" ಎಂಬ ಪುಸ್ತಕವನ್ನು ಐದು ಭಾಗಗಳಲ್ಲಿ ರಚಿಸಿದ್ದಾರೆ. ಶ್ರೀ ಎ.ವಿ. ಆನಂದ್, ದಿವಂಗತ ಶ್ರೀ ಹೆಚ್.ಪಿ. ರಾಮಾಚಾರ್ ಹಾಗೂ ಶ್ರೀ ಎಂ.ಟಿ. ರಾಜಕೇಸರಿ ಅವರುಗಳು ಸಮಿತಿಯ ಸದಸ್ಯರಾಗಿದ್ದು ದಿವಂಗತ ಶ್ರೀ ಬೆಂಗಳೂರು ಕೆ. ವೆಂಕಟರಾಂ ಅವರು ಪರಿಶೀಲಕರಾಗಿದ್ದಾರೆ.

ಮೊದಲೆರಡು ಪುಸ್ತಕಗಳಿಗಿಂತ ಗಾತ್ರದಲ್ಲಿ ಹಾಗೂ ವಿಷಯ ಸಾಮಗ್ರಿಯಲ್ಲಿ ಇದು ಹಿರಿದಾಗಿದೆ. ಪಠ್ಯವಸ್ತುವಿಗೆ ಅನುಗುಣವಾಗಿ ಈ ಪುಸ್ತಕವನ್ನು ೪ ಭಾಗಗಳಾಗಿ ವಿಂಗಡಿಸಲಾಗಿದೆ. ಶಾಸ್ತ್ರಭಾಗದ ೨ ಭಾಗಗಳೂ ಹಾಗೂ ಪ್ರಾಯೋಗಿಕ ಭಾಗದ ೨ ಭಾಗಗಳಿವೆ. ಮೊದಲ ಭಾಗದಲ್ಲಿ ಲಲಿತಕಲೆಗಳ ಪ್ರಾಮುಖ್ಯತೆ, ಲಲಿತಕಲೆಗಳಲ್ಲಿ ಸಂಗೀತದ ಸ್ಥಾನವನ್ನು ವಿದ್ಯಾರ್ಥಿಗಳಿಗೆ ಸುಲಭವಾಗಿ ಅರ್ಥವಾಗುವ ರೀತಿಯಲ್ಲಿ ವಿವರಿಸಲಾಗಿದೆ. ವಿವಿಧ ತಾಳವಾದ್ಯಗಳ ಪರಿಚಯವು ಹಲವು ಜಾನಪದ ವಾದ್ಯಗಳಾದ ಡೋಲ್ಕಿ, ಸಮ್ಮೇಳ, ಚಂಡೆ, ಗೆತ್ತುವಾದ್ಯ, ನಗಾರಿ, ಉಡಕ್ಕ, ಚೌಡಿಕೆ, ಢಮರು ಹಾಗೂ ತಮಟೆಯ ವಿವರಗಳನ್ನು ಒಳಗೊಂಡಿದೆ. ಅಷ್ಟೋತ್ತರ ಶತ ತಾಳಗಳ (೧೦೮ ತಾಳಗಳು) ವಿವರಣೆ ಹಾಗೂ ಅವರ ಪ್ರಸ್ತಾರವನ್ನು ನೀಡಲಾಗಿದ್ದು, ಮಾರ್ಗ ಮತ್ತು ದೇಶಿ ತಾಳಗಳ ವಿವರಣೆಯನ್ನೂ ನೀಡಲಾಗಿದೆ. ಕೆಲವು ಕಡೆ ಮೊದಲ ಎರಡು ಪುಸ್ತಕಗಳಲ್ಲಿ ವಿವರಿಸಲಾಗಿರುವ ವಿಷಯಗಳ ಪುನರಾವರ್ತನೆ ಆದಂತೆ ಕಂಡುಬಂದರೂ ಪುಸ್ತಕದ ಸಮಗ್ರತೆಯ ದೃಷ್ಟಿಯಿಂದ ಇಲ್ಲಿ ಕೂಡಾ ಪ್ರಸ್ತಾಪಿಸಿರುವುದು ಸೂಕ್ತವಾಗಿದೆ.

ಈ ಪುಸ್ತಕದ ಬಹುಮುಖ್ಯ ಹಾಗೂ ವಿಶಿಷ್ಟ ಅಂಶ ಎಂದರೆ ಮನೋಧರ್ಮ ಸಂಗೀತದ ವೈಶಿಷ್ಟ್ಯವನ್ನೂ ಅದರಲ್ಲಿ ಲಯವಾದ್ಯಗಾರನ ಪಾತ್ರವನ್ನೂ ವಿವರಿಸಿರುವುದು. ಹಲವಾರು ಕೃತಿಗಳಿಗೆ ತಾಳದ ಚೌಕಟ್ಟಿನಲ್ಲಿ ಸ್ವರ-ಸಾಹಿತ್ಯಗಳಿಗೆ ಹೊಂದುವಂತೆ ಮೃದಂಗದ ಧಾತುಗಳನ್ನು ಅಳವಡಿಸಲಾಗಿದೆ. ಪುಸ್ತಕದ ಎರಡನೆಯ ಭಾಗದಲ್ಲಿ ತ್ಯಾಗರಾಜರ ಪಂಚರತ್ನ ಕೃತಿಗಳಲ್ಲಿ ಕಂಡುಬರುವ ಲಯದ ವೈಶಿಷ್ಟ್ಯವನ್ನು ವಿವರಿಸಲಾಗಿದೆ. ಪ್ರತಿಯೊಂದು ಕೃತಿಗಳಲ್ಲಿನ ಲಯದ ವೈಶಿಷ್ಟ್ಯತೆ ಹಾಗೂ ಕೃತಿಯ ನಿರೂಪಣೆಯಲ್ಲಿ ಲಯವಾದ್ಯಗಾರನ ಪಾತ್ರವನ್ನು ವಿವರಿಸಲಾಗಿದೆ. ನಂತರ ತಾಳಗಳಿಗೆ ನಡೆಭೇದ ಮಾಡುವ ವಿಧಾನವನ್ನೂ ಹಾಗೂ ಬೇರೆ ಬೇರೆ ತಾಳಗಳಿಗೆ ಬೇರೆ ಬೇರೆ ನಡೆಗಳಲ್ಲಿ ಮುಕ್ತಾಯವನ್ನು ಮಾಡುವ ವಿಧಾನವನ್ನೂ ನೀಡಲಾಗಿದೆ. ಭಾರತದ ವಿವಿಧ ಪ್ರಾಂತ್ಯಗಳ ಸಂಗೀತ ಪ್ರಕಾರಗಳು, ಪ್ರತಿ ಪ್ರಕಾರಗಳಲ್ಲಿ ಚಾಲ್ತಿಯಲ್ಲಿರುವ ಅವನದ್ಧವಾದ್ಯಗಳೂ, ಅವುಗಳ ಸ್ಥಾನ-ಹೊಣೆಗಾರಿಕೆಯನ್ನು ಸ್ಥೂಲವಾಗಿ ವಿವರಿಸಲಾಗಿದೆ. ಎಲ್ಲ ವಾದ್ಯಗಳ ಚಿತ್ರಗಳನ್ನು ಸಹ ನೀಡಲಾಗಿದೆ. ಹಾಗೆಯೇ ಕರ್ನಾಟಕ ಸಂಗೀತ ಹಾಗೂ ಹಿಂದೂಸ್ಥಾನಿ ಸಂಗೀತದ ಪದ್ಧತಿಗಳಲ್ಲಿನ ತಾಳವಾದ್ಯಗಳ ತುಲನೆಯನ್ನು ಮಾಡಲಾಗಿದೆ. ನುಡಿಸಾಣಿಕೆ ಕ್ರಮ, ಸಂಗೀತಕ್ಕೆ ಅನುಸರಣಾ ಕ್ರಮದಲ್ಲಿನ ವ್ಯತ್ಯಾಸ ಹಾಗೂ ತಾಳಗಳಲ್ಲಿನ ಸಾಮ್ಯ-ವ್ಯತ್ಯಾಸಗಳನ್ನು ವಿವರಿಸಲಾಗಿದೆ. ಆಧುನಿಕ ತಂತ್ರಜ್ಞಾನದ ಸಂಶೋಧನೆಯ ಫಲವಾದ ಎಲೆಕ್ಟ್ರಾನಿಕ್ ಸಂಗೀತವಾದ್ಯಗಳ ಕಿರುಪರಿಚಯವನ್ನು ಇಲ್ಲಿ ಅಳವಡಿಸಿರುವುದು ಬಹಳ ಸೂಕ್ತವಾಗಿದೆ. ಕಛೇರಿಗಳಲ್ಲಿ ಉಪಯೋಗಿಸುವ ಎಲೆಕ್ಟ್ರಾನಿಕ್ ತಂಬೂರ, ಶ್ರುತಿಪೆಟ್ಟಿಗೆ ಅಲ್ಲದೇ ಎಲೆಕ್ಟ್ರಾನಿಕ್ ತಾಲೋಮೀಟರ್, ತಬಲಗಳ ಬಗ್ಗೆ ವಿವರಣೆ ಕೊಡಲಾಗಿದೆ. ಮೊದಲ ಎರಡು ಪುಸ್ತಕಗಳಂತೆ ಇಲ್ಲಿಯೂ ಕೆಲವು ಹಿರಿಯ ಲಯವಾದ್ಯಗಾರರ ಸಂಕ್ಷಿಪ್ತ ಜೀವನ ಚರಿತ್ರೆಯನ್ನು ನೀಡಲಾಗಿದೆ. (ಶ್ರೀ ಪುದುಕ್ಕೋಟೆ ಮನ್‌ಪೂಂಡಿಯಾ ಪಿಳ್ಳೆ, ಶ್ರೀಕುಂಭಕೋಣಂ ಆಳಗನಂಬಿ ಪಿಳ್ಳೆ, ಶ್ರೀ ಎಂ. ವೆಂಕಟೇಶ ದೇವರು, ಶ್ರೀ ಪಾಲ್ಘಾಟ್ ಮಣಿ ಅಯ್ಯರ್, ಶ್ರೀ ಪಳನಿ ಸುಬ್ರಹ್ಮಣ್ಯ ಪಿಳ್ಳೆ, ಶ್ರೀ ಕೆ.ಎಸ್. ಮಂಜುನಾಥನ್, ಶ್ರೀ ಉಮಯಾಳ್‌ಪುರಂ ಕೋದಂಡರಾಮ ಐಯ್ಯರ್, ಶ್ರೀ ನೀಡಮಂಗಲಮ್ ಮೀನಾಕ್ಷಿ ಸುಂದರಂ ಪಿಳ್ಳೆ, ಶ್ರೀ ಟಿ.ಎಸ್. ವಿಲ್ವಾದ್ರಿ ಅಯ್ಯರ್ ಹಾಗೂ ಶ್ರೀ ಮನಾರ್‌ಗುಡಿ ನಟೇಶ ಪಿಳ್ಳೆ)

ಮುಂದಿನ ಎರಡೂ ಭಾಗಗಳಲ್ಲಿ ವರ್ಣಗಳಿಗೆ ಹಾಗೂ ಕೃತಿಗಳಿಗೆ ಮೃದಂಗ ಅನುಸರಣೆಯ ಕ್ರಮವನ್ನು ವಿವರಿಸಲಾಗಿದ್ದು, ಆದಿತಾಳದ-ಜಲಜಾಕ್ಷ (ರಾಗ-ಹಂಸಧ್ವನಿ), ಖಂಡಜಾತಿ ಅಟ್ಟತಾಳ-ವಿರಿಬೋಣಿ (ರಾಗ-ಭೈರವಿ), ಚತುರಶ್ರಜಾತಿ ರೂಪಕತಾಳ-ಗಜಾನನನಾಯ ನಮಸ್ತೇ (ರಾಗ-

ಶಂಕರಾಭರಣ) ಮಿಶ್ರಜಾತಿ ಝಂಪೆತಾಳ-ಪಿರಬೋಣಿ (ರಾಗ-ಕೇದಾರಗೌಳ), ತಿಶ್ರಜಾತಿ ತ್ರಿಪುಟತಾಳ-ಸರಸಿಜಾಕ್ಷ (ರಾಗ-ನಾಯಕಿ) ಈ ಎಲ್ಲಾ ವರ್ಣಗಳಿಗೆ ಮೃದಂಗಾಕ್ಷರಗಳನ್ನು ನೀಡಲಾಗಿದೆ. ನಂತರ ಆದಿತಾಳದ ಸಮ ಮತ್ತು ವಿಷಮಗ್ರಹದ ಕೀರ್ತನೆಗಳಿಗೆ ಹೊಂದಾಣಿಕೆಯಿಂದ ನುಡಿಸುವ ಕ್ರಮವನ್ನು ವಿವರಿಸಲಾಗಿದ್ದು ಉದಾಹರಣೆಯ ರೂಪದಲ್ಲಿ ೨ ಕೀರ್ತನೆಗಳಿಗೆ ಮೃದಂಗಾಕ್ಷರವನ್ನು ನೀಡಲಾಗಿದೆ. ಕೊನೆಯದಾಗಿ ತ್ಯಾಗರಾಜರ ಪಂಚರತ್ನ ಕೀರ್ತನೆಗಳಿಗೆ ಅನುಸರಿಸಬೇಕಾದ ಮಾರ್ಗವನ್ನು ನೀಡಲಾಗಿದ್ದು, ಪಂಚರತ್ನ ಕೀರ್ತನೆಗಳಲ್ಲಿ ಒಂದಾದ ಶ್ರೀರಾಗದ "ಎಂದರೋ ಮಹಾನುಭಾವುಲು" ಕೀರ್ತನೆಯ ಎಲ್ಲಾ ಚರಣಗಳ ಸ್ವರ-ಸಾಹಿತ್ಯ ಸಮೇತ ಮೃದಂಗಾಕ್ಷರವನ್ನು ನೀಡಲಾಗಿದೆ. ಪುಸ್ತಕದ ಕೊನೆಯಲ್ಲಿ ವಿದ್ವತ್‌ಪೂರ್ವ ಹಂತದ ಪಠ್ಯವಸ್ತುವನ್ನೂ ಪ್ರಶ್ನಾವಳಿಯನ್ನೂ ಹಾಗೂ ಮಾರ್ಗಸೂಚಿ ಪ್ರಶ್ನೆ ಪತ್ರಿಕೆಯನ್ನೂ ನೀಡಲಾಗಿದೆ.

ಸಮಾಪ್ತಿ:

ಲಯವಾದ್ಯವನ್ನು ಕಲಿಸಲು ಅನುಸರಿಸುವ ಕ್ರಮವು ವಿಭಿನ್ನವಾಗಿದ್ದು, ಒಂದೇ ವಾದ್ಯವನ್ನು ನುಡಿಸಲು ವಿದ್ವಾಂಸರುಗಳು ಬೇರೆ ಬೇರೆ ಶಬ್ದಾಕ್ಷರಗಳನ್ನು ಬಳಸುವುದು ಲಯವಾದ್ಯಕ್ಕೆ ಸಂಬಂಧಿಸಿದ ಹೆಚ್ಚು ಪುಸ್ತಕಗಳು ಹೊರ ಬರದಿರುವುದಕ್ಕೆ ಮುಖ್ಯಕಾರಣ. ಕರ್ನಾಟಕ ಸಂಗೀತದ ಲಯವಾದ್ಯಗಳಿಗೆ ಒಂದು ಪಠ್ಯಕ್ರಮದ ಚೌಕಟ್ಟಿನಲ್ಲಿ ಲಕ್ಷ್ಯ-ಲಕ್ಷಣಗಳನ್ನು ಒಳಗೊಂಡ ಪುಸ್ತಕವು ಬೇರೆ ಯಾವುದೇ ಭಾಷೆಯಲ್ಲಿ ಹೊರಬಂದಿಲ್ಲ. ಈ ಹಿನ್ನೆಲೆಯಲ್ಲಿ ಈ ಪಠ್ಯಪುಸ್ತಕ ರಚನೆಗೆ ರಾಜ್ಯದ ಎಲ್ಲಾ ಹಿರಿಯ ವಿದ್ವಾಂಸರೂ ಭಾಗವಹಿಸಿ ತಮ್ಮ ಅನುಭವದ ಆಧಾರದ ಮೇಲೆ ಇವುಗಳನ್ನು ರಚಿಸಿದ್ದು ಇದು ಮುಂದಿನ ಪೀಳಿಗೆಯವರಿಗೆ ಬಹುಮುಖ್ಯ ದಾಖಲೆಗಳಾಗಲಿವೆ. ಈ ಪುಸ್ತಕಗಳ ರಚನೆಯಲ್ಲಿ ಪರೀಕ್ಷೆಯನ್ನಷ್ಟೇ ದೃಷ್ಟಿಯಲ್ಲಿ ಇಟ್ಟುಕೊಳ್ಳದಿರುವುದರಿಂದ ಇವು ಆಕರಗ್ರಂಥಗಳಾಗಲಿವೆ. ಶಾಸ್ತ್ರ ಹಾಗೂ ಪ್ರಾಯೋಗಿಕ ವಿಚಾರದೊಂದಿಗೆ ಹಿರಿಯ ಲಯವಾದ್ಯಗಾರರ ಸಂಕ್ಷಿಪ್ತ ಜೀವನ ಚರಿತ್ರೆಯನ್ನು ನೀಡಿರುವುದು ಸೂಕ್ತವಾಗಿದೆ. ಈ ಮೂರೂ ಪುಸ್ತಕಗಳ ಮತ್ತೊಂದು ವೈಶಿಷ್ಟ್ಯವೆಂದರೆ ಎಲ್ಲಾ ಪಾಠಗಳನ್ನೂ ಕೋಷ್ಟಕಗಳಲ್ಲಿ ನೀಡಲಾಗಿದ್ದು ಇವು ಲಯವಾದ್ಯದ ಲಿಪಿಯನ್ನು (Notation)ಕ್ರಮಬದ್ಧವಾಗಿ ಬರೆಯುವುದನ್ನು ತಿಳಿಸಿಕೊಡುತ್ತದೆ. ಕೃತಿಗಳಿಗೆ ಮೃದಂಗಾಕ್ಷರಗಳನ್ನು ರಚಿಸುವಾಗಲೂ ಇದೇ ಕ್ರಮವನ್ನು ಅನುಸರಿಸಲಾಗಿದೆ. ಈ ಪುಸ್ತಕಗಳ ಮೂಲಕ ಇನ್ನು ಮುಂದೆಯಾದರೂ ಒಂದೇ ಪಾಠಕ್ರಮವು ಬಳಕೆಗೆ ಬಂದರೆ ಉತ್ತಮ. ಹಾಗೆಯೇ ಈ ಪುಸ್ತಕವು ಬೇರೆ ಬೇರೆ ಭಾಷೆಗೆ ಅನುವಾದಗೊಂಡರೆ ಇನ್ನೂ ಹೆಚ್ಚಿನ ಜನರಿಗೆ ತಲುಪಲು ಸಾಧ್ಯವಾಗುತ್ತದೆ. ವಿದ್ವತ್ ಹಂತದ ಪುಸ್ತಕ ಇನ್ನೂ ಹೊರಬರಬೇಕಾಗಿದ್ದು, ಲಯವಾದ್ಯಗಳಿಗೆ ಸಂಬಂಧಪಟ್ಟ ಪುಸ್ತಕಗಳನ್ನು ಹೊರತಂದ ಪಠ್ಯಪುಸ್ತಕ ನಿರ್ದೇಶನಾಲಯದ ಕೆಲಸ ಶ್ಲಾಘನೀಯ.

❑

ಪ್ರೀತಿಯ ಹರಿಹರಪ್ರಿಯ ಅವರಿಗೆ,

ಪತ್ರಿಕೆ ತುಂಬಾ ಚೆನ್ನಾಗಿದೆ. ಪ್ರತಿಷ್ಠಿತ ಸಂಸ್ಥೆಗಳ ಒಳಹೊರಗನ್ನು ಬಯಲಿಗೆಳೆಯುವ 'ತಲಸ್ಪರ್ಶಿ' (ಬೆಳದಿಂಗಳ ಪೂಜೆ) ಹೊಸ ಹೊಸ ಸಂಗತಿಗಳನ್ನು ಸಾರ್ವಜನಿಕವಾಗಿ ಗೊತ್ತಾಗುವಂತೆ ಮಾಡುತ್ತಿದೆ.

ಧನ್ಯವಾದಗಳು

ರಂಗಾರೆಡ್ಡಿ ಕೋಡಿರಾಂಪುರ

ಅಪರೂಪದ ಪುಸ್ತಕಗಳು

ಮನೋಹರ ಮಲಗೋಂಕರ್

ಸಾವಿರದ ಒಂಭೈನೂರಾನಲುವತ್ತೈದನೆಯ ಇಸವಿಯಲ್ಲಿ ಸುತ್ತಲೂ ಕೆರೆಗಳಿಂದ ಆವೃತ್ತಿಗೊಂಡು ವಿಶಾಲವಾಗಿ ಹರಡಿದ್ದ ಈ ಬೆಂಗಳೂರು ನಗರವು (ಮೈಸೂರು) ಒಡೆಯರಡಿಯಲ್ಲಿದ್ದರೂ ಇಂಗ್ಲಿಷ್ ಸಾಮ್ರಾಜ್ಯದ ಗಾಳಿಯನ್ನು ಸ್ವಲ್ಪ ಮಟ್ಟಿಗೆ ಪಡೆದಿತ್ತು. ರಸ್ತೆಗಳನ್ನು ದಾಟುವಲ್ಲೆಲ್ಲಾ "ನಿಂತು ಹೊರಡಿ" ಎಂಬ ಫಲಕಗಳು ಚಾಲಕರನ್ನು ಎಚ್ಚರಿಸಲು ಸ್ಥಾಪನೆಗೊಂಡಿದ್ದುವು. ಕಬ್ಬನ್ ಪಾರ್ಕ್ ಹಚ್ಚಹಸಿರಿನ ಮರಗಿಡಗಳಿಂದ ರಾರಾಜಿಸುತ್ತಲೂ ಪಕ್ಕದ ಮಹಾತ್ಮಗಾಂಧಿ ರಸ್ತೆ ಸೌತ್‌ಪೆರೇಡ್ ಎಂಬ ಹೆಸರಿನಿಂದ ಪ್ರಸಿದ್ಧಗೊಂಡಿತ್ತು. ಅದೆಷ್ಟು ಬರಿದಾಗಿರುತ್ತೆಂದರೆ ಜನರು ಸಮಾಧಾನದಿಂದ ಇಲ್ಲಿ ಬೆಳಗಿನ ವಾಕಿಂಗಿಗೂ ಕುದುರೆ ಸವಾರಿ ನಡೆಸಲು ಉಪಯೋಗಿಸುತ್ತಿದ್ದರು.

ಈ ಸಮಯದಲ್ಲೇ ಶ್ರೀ ಕೆ.ಬಿ.ಕೆ. ರಾವ್ ಎಂಬ ಗಣ್ಯವ್ಯಕ್ತಿಯೊಬ್ಬರು ಈ ರಸ್ತೆಯಲ್ಲಿನ ನವೀನ ಅಂಗಡಿಗಳ ಕೂಗಳತೆಯ ದೂರದಲ್ಲಿಯೇ ಸಣ್ಣದೊಂದು ಪುಸ್ತಕದ ಅಂಗಡಿಯೊಂದನ್ನಿಟ್ಟು ಕೊಂಡಿದ್ದರು. ಅವರ ಗಿರಾಕಿಗಳಿಗೆ ಆಶ್ಚರ್ಯವೆನಿಸುವ ಹಾಗೆ ಅವರಿಗೆ ಅವರ ಕಪಾಟುಗಳಲ್ಲಿನ ಪ್ರತಿ ಪುಸ್ತಕದ ಹೆಸರು ಹಾಗೂ ಅದರ ವಿಷಯ ಅವರಿಗೆ ತಿಳಿದಿರುತಿತ್ತು. ಅವರ ಪುಸ್ತಕ ಪ್ರೇಮ ಜತೆಗೆ ಅಪಾರ. ನನ್ನಂತಹ ಯುವಕ ಅವರ ಅಂಗಡಿ ನುಗ್ಗಿ ಸುಮ್ಮನೆ ಪುಸ್ತಕಗಳನ್ನು ನೋಡಿ ಏನೂ ಖರೀದಿಸದೆ ಹೋದರೂ ಅದನ್ನವರು ಕಾಲಹರಣವೆಂದು ತಿಳಿಯುವ ವ್ಯಕ್ತಿಯಾಗಿರಲಿಲ್ಲ.

ನಾನೆಂದೂ ಬೆಂಗಳೂರಿನಲ್ಲಿ ಜೀವಿಸಿದವನಲ್ಲ. ಆಗಾಗ್ಗೆ ಹೋಗುವ ಅಭ್ಯಾಸವಿದ್ದುದರಿಂದ ಈ ಸೆಲೆಕ್ಟ್ ಪುಸ್ತಕದಂಗಡಿಯ ಪರಿಚಯ ಸುಮಾರು ಅರವತ್ತರ ದಶಕದಿಂದ ಶುರುವಾಗಿತ್ತು. ನಾನು ಬರೀ ಒಬ್ಬ ಸಾಮಾನ್ಯ ಗಿರಾಕಿಯಲ್ಲದೆ ಸ್ಪೆಷಲ್ ಅನ್ನಿಸುವ ಹಾಗೆ ಶ್ರೀ ರಾವ್‌ರವರು ನನಗೆ ಬೇಕಾಗಬಹುದೆಂಬ ಪುಸ್ತಕಗಳ ಪಟ್ಟಿಯನ್ನು ಆಗ್ಗಿಂದಾಗೆ ಕಳುಹಿಸುತ್ತಿದ್ದರು. ನಾನು ನನ್ನ ಬರಹಗಳಿಗೆ ಬೇಕಾಗುವಂತಹ ಮಾಹಿತಿಯನ್ನು ಒದಗಿಸುವ ಪುಸ್ತಕಗಳನ್ನು ಅಲ್ಲಲ್ಲಿ ಹುಡುಕುವ ಬದಲು ಅವರನ್ನೇ ಕೇಳುವ ರೂಢಿ ಮಾಡಿಕೊಂಡೆ.

ಹಳೆಯ ಪುಸ್ತಕಗಳು ಹಾಗೂ ಮರು ಮುದ್ರಿತವಾಗದಂತಹ ಪುಸ್ತಕಗಳು ಅಪರೂಪದವು ಎಂದೆನಿಸಿಕೊಳ್ಳುತ್ತವೆ. ಇಂತಹ ಪುಸ್ತಕಗಳನ್ನು ದುಬಾರಿ ಬೆಲೆಗೆ ಅನೇಕ ವಿಶೇಷ ಪುಸ್ತಕದ ಅಂಗಡಿಗಳು ಮಾರುವ ವ್ಯವಹಾರ ತುಂಬಾ ವ್ಯಾಪ್ತಿಯಲ್ಲಿದೆ. ಆದರೆ ಇಂತಹ ಸುಮಾರು ಎರಡು ಡಜನ್ ಮೀರಿದ ಪುಸ್ತಕಗಳನ್ನು ಶ್ರೀ ರಾವ್ ಕೈಯಿಂದ ಬರೀ ಪುಕ್ಕಸಟ್ಟೆ ಎಂಬ ದರಗಳಲ್ಲಿ ನನಗೆ ಸಿಕ್ಕಿವೆ.

ಸಾವಿರದ ಒಂಭೈನೂರಾ ಎಪ್ಪತ್ತರ ದಶಕದಲ್ಲಿ ನಾನು ಬೆಂಗಳೂರಿನಾಗೆ ದಾಟುವ ಸಂದರ್ಭದಲ್ಲಿ ಸುಮಾರು ಅರ್ಧಘಂಟೆ ಸಮಯವನ್ನು ಸೆಲೆಕ್ಟ್ ಪುಸ್ತಕದಂಗಡಿಯಲ್ಲಿ ಕಳೆದೆ. ಹಾಗೆಯೇ ಮಾಡನಾಡುತ್ತಿರುವಾಗ ಸಂತ ಫ್ರಾನ್ಸಿಸ್ ಕ್ಷೇವಿಯರ್ ಅವರ ಜೀವನ ಚರಿತ್ರೆ ಎಲ್ಲೂ ನನಗೆ ಸಿಗದಿದ್ದುದನ್ನು ಶ್ರೀ ರಾವ್ ರವರಿಗೆ ತಿಳಿಸಿದೆ. ಗೋವಾದ ವಿಷಯ ಏನೋ ಪುಸ್ತಕವೊಂದನ್ನು ನಾನಾಗ ಬರೆಯಲು ಹೊರಟಿದ್ದುದರಿಂದ ನನಗೆ ಆ ಚರಿತ್ರೆ ಬೇಕಾಗಿತ್ತು. ಮುಂದೆ ಆ ಪುಸ್ತಕ ಬರೆಯಲೇ ಆಗಲಿಲ್ಲ ನನಗೆ. ವರ್ಷಗಳೇ ಕಳೆಯುತ್ತಲೂ ಬೆಂಗಳೂರಿಗೆ ಹೋಗುವ ಅವಕಾಶಗಳೂ ದೊರಕಲಿಲ್ಲ. ಆದರೆ ನನ್ನ ಮಗಳಿಗೆ ಸೆಲೆಕ್ಟ್ ಪುಸ್ತಕದ ಅಂಗಡಿಯ ವಿಷಯ ಯಾವಾಗಲೋ

ಹೇಳಿದ್ದೆ. ಅವಳು ಸಣ್ಣ ವಯಸ್ಸಿನಲ್ಲಿಯೇ ಬಟ್ಟೆ ರಫ್ತಿನ ವ್ಯವಹಾರದಲ್ಲಿಯೇ ತೊಡಗಿ ತುಂಬ ಯಶಸ್ವಿಯಾಗಿದ್ದರೂ ಪುಸ್ತಕವೆಂದರೆ ಅವಳಿಗೆ ಪಂಚಪ್ರಾಣ. ತುಂಬಾ ಓದುವ ಹವ್ಯಾಸವನ್ನಿಟ್ಟು ಕೊಂಡಿದ್ದಳು. ಬೆಂಗಳೂರಿಗೆ ಹೋಗಿದ್ದಾಗ ಅಕಸ್ಮಾತ್ ಸೆಲೆಕ್ಟ್‌ಗೆ ಹೋಗಿ ಶ್ರೀರಾವ್‌ರವರಿಗೆ ತನ್ನನ್ನು ಪರಿಚಯಿಸಿಕೊಂಡಳು.

"ಓ, ತುಂಬಾ ಸಂತೋಷ, ನೀವು ಬಂದಿದ್ದು" ಎಂದು ಉತ್ತರಿಸಿದವರು, "ಈಗ ತಾನೇ ನಿಮ್ಮ ತಂದೆ ಕೇಳಿದ ಪುಸ್ತಕ ಸಿಕ್ಕಿತು, ಬರೆಯಲು ಹೊರಟಿದ್ದೆ, ನಾನವರಿಗೆ" ಎಂದರಂತೆ.

ಅದೊಂದು ಜೇಮ್ಸ್ ಬ್ರೊಕ್‌ರಿಕ್ ಬರೆದ ಸಂತ ಫ್ರಾನ್ಸಿಸ್ ಕ್ಷೇವಿಯರ್ ಅವರ ಜೀವನ ಚರಿತ್ರೆಯಾಗಿತ್ತು, ಅದೂ ಹೊಚ್ಚ ಹೊಸದಾದ ಕಂಡಿಷನ್ನಿನಲ್ಲಿ. ಅದರ ಕ್ರಯ ಎಷ್ಟಿತ್ತೋ ಅವಳು ಅದಕ್ಕೆ ಎಷ್ಟು ಕೊಟ್ಟಳೆಂಬುದೇ ನನಗೀಗ ನೆನಪಿಲ್ಲ. ಓ, ಮರೆಯುವ ಮುನ್ನ, ಆ ಪುಸ್ತಕ ನನಗೆ ಮುಂದೆ ಬಹಳ ಉಪಕಾರಿಯಾಯಿತು, ಯಾಕೆಂದರೆ ಗೋವಾದ ಚರಿತ್ರೆಯ ಪುಸ್ತಕ ಇನ್‌ಸೈಡ್ ಗೋವಾದದಲ್ಲಿ ಒಂದಿಡೀ ಅಧ್ಯಾಯವನ್ನೇ ಅದನ್ನು ಆಧರಿಸಿ ಬರೆಯಲು ಸಾಧ್ಯವಾಯಿತು.

ಅನು : ಸುಮಾ ಪೊನ್ನಮ್ಮ

❑

ಪದ್ದು ನಂದು ಹಬ್ಬ, ವಿಠಲ ರಾಜ್ಯ-ಭಾರ

ಬೆಳದಿಂಗಳ ಪೂಜೆ

ಪ್ರತಿಭಾ ಪ್ರಹ್ಲಾದ್ ಅವರಿಂದ ಕೆಲಕಾಲ ನೃತ್ಯಕ್ಷೇತ್ರ ಗಡಗಡ ನಡುಗಿದ್ದು ಉಂಟು. ಆಕೆಯ ವೈಯಕ್ತಿಕ ಬದುಕು, ಭಾವನೆಗಳು ಸ್ತ್ರೀವಾದಿ ಅಧ್ಯಯನಕ್ಕೆ ಉಚಿತವೇ ಇರಬಹುದು. ಆದರೆ ಆಕೆ ಪ್ರತಿಭಾವಂತ ಕಲಾವಿದೆ ಎನ್ನುವುದರಲ್ಲಿ ಎರಡು ಮಾತಿಲ್ಲ.

ಪದ್ಮಿನಿ ರವಿ, ನಂದಿನಿ ಆಳ್ವ, ಉರುಫ್ ಪದ್ದು + ನಂದು, ನೃತ್ಯ ಕ್ಷೇತ್ರದ ಘನ ಸಾಧನೆಯನ್ನು ಕೈಬಿಟ್ಟು ಈಗ ಈ ಮಟ್ಟಕ್ಕೆ ಇಳಿದು, ಇಡೀ ನಾಡಿನ ಸಾಂಸ್ಕೃತಿಕ ಲೋಕವನ್ನು ವರ್ಷದ ಜಾತ್ರೆ ಸಂತೆ, ಹಬ್ಬಕ್ಕೆ ತಂದು ಬಿಟ್ಟರೆ; ಅವರ ಆಶೋತ್ತರಗಳಾದರು ಏನು ಎನ್ನುವುದಾಗಿದೆ.

ಕೇವಲ ಮನರಂಜನೆಯೆ? ಹಣ ಸಂಪಾದನೆಯೆ? ಪ್ರಚಾರ ಪ್ರಿಯತೆಯೆ? ಮಕ್ಕಳನ್ನು ಮರೆಸುವುದೆ? ಬೇರೆ ಕೆಲಸವಿಲ್ಲವೆ? ಯಾವುದಕ್ಕೆ ಎಂದು ಒಬ್ಬೊಬ್ಬರು ಒಂದೊಂದು ನಂಬುವುದಾಗಿದೆ.

ಕನ್ನಡಿಗರಿಗೆ ಅನ್ಯಾಯ ಅಂದ ಕೂಡಲೇ ಕನ್ನಡ ಚಳುವಳಿ ನಾಯಕರನ್ನೇ ಕರೆಸುವುದು, ಯಾವುದೋ ಒಂದು ಕಡೆಗೆ ಕೇಂದ್ರೀಕರಿಸಿದ್ದೀರಿ ಎಂದರೆ ಸಿಕ್ಕ ಸಿಕ್ಕಲೆಲ್ಲ ಆವರಿಸಿಕೊಳ್ಳುವುದು, ಗ್ರಾಮೀಣ ಕಲೆಗೆ ಅನಾದರ ಎಂದರೆ ಬೀದಿಗೆ ಎಳೆ ತಂದು ಕುಣಿಸುವುದು, ಶಾಸ್ತ್ರೀಯ ಕಲಾವಿದರಿಗೆ ಆದರ ಎಂದರೆ ಚಿತ್ತಲ್‌ಪ್ರದರ್ಶನಕ್ಕೂ ಇಳಿಸುವುದು..... ಈ ಚತುರ ಮಹಿಳೆಯರ ಹುನ್ನಾರವೇನು ಎಂಬುದೆ ಬೆಂಗಳೂರಿನವರಿಗೆ ನಿಗೂಢ, ರಹಸ್ಯವಾಗಿ ಬಿಟ್ಟಿದೆ.

ಹೋಗಲಿ ಪ್ರತಿಭಾವಂತ ಕಲಾವಿದರನ್ನು ಈ ಮೂಲಕ ಬೆಳಕಿಗೆ ತರುವ ಸಾಧ್ಯತೆ ಈ ಹಬ್ಬದಿಂದ ಇದೆಯೆ? ಇವತ್ತಿನ ಸಮಾಜದ ಮುಂದಿರುವ ಗೊಂದಲ, ಸಮಸ್ಯೆಗಳಿಗೆ ಸಾಂಸ್ಕೃತಿಕ ಮಾರ್ಗೋಪಾಯ ಕಂಡುಕೊಳ್ಳುವ ಜವಾಬ್ದಾರಿ ಇವರ ತಲೆಯಲ್ಲಿದೆಯೆ?

ಒಂದು ವೇದಿಕೆ ನಿರ್ಮಾಣ, ವೇದಿಕೆ ಬಳಕೆ, ವೇದಿಕೆ ಏರುವುದು ಎಂದರೇನೆ ಹೆಗ್ಗಳಿಕೆ ಆಗಬೇಕಾಗಿತ್ತು ಎಂಬ ಅರಿವು ಇವರಿಬ್ಬರ ತಲೆಯಲ್ಲೇ ಇರುವಂತಿಲ್ಲ.

ಹಿಂದೂಸ್ತಾನಿ ಕಲಾವಿದರಿಗೆ ತೋರಿದ ಅನ್ಯಾಯ, ಕಾವ್ಯವಾಚನದ ನೆಪದಲ್ಲಿ ಮಾಡಿದ ಹಾಸ್ಯೋತ್ಸವ-ಇವೆಲ್ಲ ನೋಡಿದರೆ ಯಾವ ಜನ್ಮಕ್ಕಾದರೂ ಇವರಿಗೆ ಹಿರಿದಾದದ್ದು ಸಾಧಿಸುವ ಕನಸು ಇದೆಯೇ ಅನ್ನಿಸುತ್ತಿದೆ.

ಸ್ಥಳೀಯ ಕಲಾವಿದರಿಗೆ ಅಗೌರವ, ಕಡಿಮೆ ಸಂಭಾವನೆ, ಅವಕಾಶ ವಂಚನೆ, ಹೊರರಾಜ್ಯದವರಿಗೆ ಹೇರಳ ಮನ್ನಣೆ.

ಇವೆಲ್ಲವನ್ನೂ ನೋಡಿದರೆ ಇವರಿಬ್ಬರೂ ನಿಜವಾಗಿ ಕನ್ನಡದವರೇನಾ? ಇವರ ಬದುಕು, ಮಾತುಕತೆ, ರೀತಿನೀತಿ, ಆಲೋಚನೆಗಳು, ಈ ನಾಡಿನ ಈ ಜನತೆಯ ಈ ಸಂಸ್ಕೃತಿಗೆ ಯಾವ ರೀತಿಯಲ್ಲಾದರೂ ಸಂಬಂಧಿಸಿರುವುದೇನಾ?

ರುಕ್ಮಿಣಿ ಅರುಂಡೇಲ್ ಅಂಥವರನ್ನು ರಾಷ್ಟ್ರಪತಿ ಸ್ಥಾನದವರೆಗು ನಾವು ಸ್ವೀಕರಿಸಿದ್ದೇವೆ. ವೆಂಕಟಲಕ್ಷ್ಮಮ್ಮ, ಮಾಯಾರಾವ್, ಪದ್ಮಾಸುಬ್ರಹ್ಮಣ್ಯ ಅಂಥವರನ್ನು ನಾವು ಸಾಂಸ್ಕೃತಿಕ ರಾಯಭಾರಿಗಳು ಎನ್ನುವಂತೆ ಪರಿಗಣಿಸಿದ್ದೇವೆ.

ಇವರಿಬ್ಬರ ವೈಖರಿಗೆ ಇವರಿಬ್ಬರೆ ಕಾರಣರೂ ಅಲ್ಲವೊ ಎನ್ನುವಂತಾಗಿದೆ. ಇದಕ್ಕೆ ತಕ್ಕಂತೆ I am vittalamurty ಅವರು, ಅವರಂಥವರು ಈ–ಇಂಥ ಎಲ್ಲ ಅಧ್ವಾನಕ್ಕೂ ಕಾರಣ ಅನ್ನಿಸುವಂತಾಗಿದೆ.

ಹೆಸರಿಗೆ ಸಂಸ್ಕೃತಿ ಇಲಾಖೆ ಸಚಿವ ಎಂದು, ಸಂಪುಟ ರಚನೆ ದಿನ ಘೋಷಿಸಿಕೊಂಡ ಎಚ್.ಡಿ. ಕುಮಾರಸ್ವಾಮಿ ಅವರಿಗೆ, ತೂರಿಸಿಕೊಳ್ಳುವುದಕ್ಕೂ ಪುರಸತ್ತೇ ಇಲ್ಲವೆಂದು ಕಾಣುತ್ತದೆ. ಹಾಗಿದ್ದಿದ್ದರೆ ಈ ವಿಠಲಮೂರ್ತಿಯಂತಹ ಅಧಿಕಾರಿಗಳನ್ನು ನಂಬಿ ಹಾಳಾಗುತ್ತಿರಲಿಲ್ಲ. ಸ್ವತಃ ಮುಖ್ಯಮಂತ್ರಿ, ಉಪಮುಖ್ಯಮಂತ್ರಿಗಳೇ ಇತ್ತೀಚೆಗೆ ಅಧಿಕಾರಿಗಳನ್ನು ಕರೆದು ಛೀಮಾರಿ ಹಾಕುವ ಪ್ರಸಂಗ ಬರುತ್ತಿರಲಿಲ್ಲ.

ಮಹಾನಗರದ ಮಧ್ಯೆ ಜಾತ್ರೆ ಮಾಡಿಸುವುದು, ಅದಕ್ಕೆ ಜಾನಪದದ ಹೆಸರಿಟ್ಟು ಗ್ರಾಮೀಣ ಸಂಸ್ಕೃತಿಗೆ ಅವಮಾನ ಮಾಡಿಸುವುದು. ಷೂಟು ಬೂಟುಧಾರಿ ಗೃಹಮಂತ್ರಿ ಕೈಯಿಂದ ಡೊಳ್ಳು ಬಾರಿಸಿ, ಕುಣಿಸುವುದು ಈ ಶತಮಾನದ ಒಂದು ಹಾಸ್ಯಪ್ರಸಂಗವೇ ಸರಿ. ಈ ಎಲ್ಲ ತಮಾಷೆಗೆ ತನ್ನ ಮನೆಯ ಮದುವೆಯೊ, ಸತ್ಯನಾರಾಯಣ ಪೂಜೆಯೊ ಎನ್ನುವಂತೆ ರೇಷ್ಮೆ ಪಂಚೆ ಅಂಗಿ ತೊಟ್ಟು ಐ.ಎ.ಎಸ್. ಅಧಿಕಾರಿ ಮಿರಿಮಿರಿ ಮಿಂಚುವುದು – ಅಬ್ಬೋ ಎಂಥ ಘನ ಸಾಧನೆ ನಮ್ಮ ಸರ್ಕಾರದ್ದು! ಇಡೀ ವಾರ್ತಾ ಇಲಾಖೆಯನ್ನೇ ಬೆಂಗಳೂರಿನ ಹಬ್ಬದಲ್ಲಿ ಸಮೂಹ ಮಾಧ್ಯಮಗಳಿಗೆ ಅಡ ಇಟ್ಟ ಈ ಭೂಪತಿರಂಗ, ಈ ನಾಡನ್ನು ಐಷಾರಾಮ ಜೀವನದ ಕಡೆ ಹೊರಳಿಸುವ ಭಗೀರಥ ಸಂಕಲ್ಪ ತೊಟ್ಟಂತಿದೆ.

ಒಬ್ಬನೇ ಒಬ್ಬ ಪ್ರಜಾಪ್ರತಿನಿಧಿ–ವಿಧಾನಸಭೆ ಪರಿಷತ್ತುಗಳಲ್ಲಿ ಈ ಎಲ್ಲ ದುಂದುವೆಚ್ಚ, ದುರಹಂಕಾರಿ ವರ್ತನೆಗಳನ್ನು ಪ್ರಶ್ನಿಸಿದಂತೆ ಕಾಣುತ್ತಿಲ್ಲ.

ಎಫ್.ಎಂ. ಬ್ಯಾಂಡುಗಳ ಬಗ್ಗೆ ಮೂಡಬಿದರೆಯಲ್ಲಿ ಸಿಡಿದೆದ್ದ ಕಾವ್ಯ ಚಕೋರಿ, ನಾಡಿನ ರಾಜಧಾನಿಯ ಚಕೋರಿಗಳ ವಾಸನೆಗೆ ಮಾರುಹೋಯಿತೆ?

ಒಡಳಾದ ಸಾಕವ್ವ, ಇದೆಲ್ಲ ಸಾಕು ಎಂದು ಚಾಮುಂಡಿ ಕ್ಷೇತ್ರದ ಬೆನ್ನು ಬಿದ್ದಿತೆ?

ದಲಿತ ಭಾಷಣಕಾರ, ಎರಡನೇ ಅವಧಿಗಾಗಿ ತನ್ನ ಮೈಮನಸ್ಸುಗಳನ್ನು ತುಂಬಿಕೊಳ್ಳುವ ಕ್ರಿಯಾತ್ಮಕ ಚಟುವಟಿಕೆಯಲ್ಲಿ ಮುಳುಗಿಹೋಯಿತೆ?

ಬೂಸಾ ಕವಿ, ರಾಮಕೃಷ್ಣ ಹೆಗಡೆ ಆದರೇನು? ಕುಮಾರಸ್ವಾಮಿ ಯಡಿಯೂರಪ್ಪ ಆದರೇನು, ಆಳುವವರೆಲ್ಲ ಒಂದೇ ಪಾರ್ಟಿ ಎಂದು ತಮ್ಮ ಅಧಿಕಾರ ಮಂತ್ರದಂಡದಲ್ಲಿ ನಿಟ್ಟುಸಿರು ಬಿಡುತ್ತಾ ಊರುಕೇರಿ ಸುತ್ತತೊಡಗಿತೆ?

ಇಷ್ಟಾಗಿ ಇವರೆಲ್ಲ ಕಲಾವಿದರ ಪ್ರತಿನಿಧಿಗಳೊ ಅಥವಾ ತಮ್ಮ ತಮ್ಮ ಜಾತಿ–ಕುಲ–ಪಂಗಡಗಳ ನಾಯಕ ನಾಯಕಿಯರಾಗಿ ಆ ಜನ್ಮ ಮೆರೆಯುವ ಪಣತೊಟ್ಟ ಧ್ರುವತಾರೆಗಳೊ?

ನಾಡಿನ ಹಣ ಸ್ವಾಮಿ ಹಣ
ರೈತರ ಹೆಣ ಬೀಳುತ್ತಿವೆ
ದಲಿತರ ಬಣ ನರಳುತ್ತಿದೆ
ಖಟಬಿಟಿ ಬೆಳೆಯುತ್ತಿದೆ
ಪದ್ದು ನಂದು ಹಬ್ಬುತ್ತಿವೆ
ವಿಠಲ ರಾಜ್ಯವೆ ದಿಕ್ಕೆಡಿಸಿದೆ
ಯಾರಿಗುಂಟು ಯಾರಿಗಿಲ್ಲ
ಜಾತ್ರೆ, ಹಬ್ಬ, ಸಂತೆ
ಈಗಲ್ಲದೆ ಮತ್ತ್ಯಾವಾಗಂತೆ. □

ಪ್ರಜಾಸಾಹಿತ್ಯ

ಬಳಗ...

ಜಿ.ಎಸ್. ಶಿವರುದ್ರಪ್ಪ	೮೬೭, ಚೈತ್ರ, ೧೮ನೇ ಮುಖ್ಯರಸ್ತೆ ಬನಶಂಕರಿ ೨ನೇ ಹಂತ ಬೆಂಗಳೂರು ೫೬೦ ೦೭೦
ಚೆನ್ನವೀರ ಕಣವಿ	ಚೆಂಬೆಳಕು, ೯ನೇ ಅಡ್ಡರಸ್ತೆ ಕಲ್ಯಾಣನಗರ, ಧಾರವಾಡ ೫೮೦ ೦೦೭
ಎಚ್.ಎಸ್. ವೆಂಕಟೇಶಮೂರ್ತಿ	೩೦, ಸಂಕಲ್ಪ, ಪುಷ್ಪಗಿರಿನಗರ ಬನಶಂಕರಿ ೩ನೇ ಹಂತ ಬೆಂಗಳೂರು ೫೬೦ ೦೮೫
ಚಿಂತಾಮಣಿ ಕೊಡ್ಲೆಕೆರೆ	ಸಿ-೨-೨, ಡಬ್ಲ್ಯುಎಂಎಸ್ ಕಾಂಪೌಂಡ್ ೪೭ನೇ ಅಡ್ಡರಸ್ತೆ, ೯ನೇ ಮುಖ್ಯರಸ್ತೆ ಜಯನಗರ ೫ನೇ ವಿಭಾಗ ಬೆಂಗಳೂರು ೫೬೦ ೦೪೧
ಟಿ.ವಿ. ಶ್ರೀನಾಥಶಾಸ್ತ್ರಿ	೧೨೩/೧, ಮೊದಲ ಮಹಡಿ ಅನುಗ್ರಹ, ನೇತಾಜಿ ರಸ್ತೆ ೪ನೇ ವಿಭಾಗ, ತ್ಯಾಗರಾಜನಗರ ಬೆಂಗಳೂರು ೫೬೦ ೦೨೮
ಸಾತವಲ್ಲಿ ಜಗತಿಪ್ರಿಯ	C/o ಪ್ರಜಾಸಾಹಿತ್ಯ ಕಛೇರಿ
ಸುಮಾ ಪೊನ್ನಮ್ಮ	C/o ೭೧, ಬ್ರಿಗೇಡ್ ರೋಡ್ ಕ್ರಾಸ್ ಬೆಂಗಳೂರು ೫೬೦ ೦೦೧

ಪ್ರಿಯ ಹರಿಹರಪ್ರಿಯರೇ ಶುಭಾಶಯಗಳು.

ಕ್ರಿಯಾಶೀಲತೆಗೆ ಜನಮುಖಿ ಸಂಘರ್ಷವು ಸೇರಿದರೆ ಹೇಗಿರಬಹುದೆಂದು ಹುಟ್ಟಿಕೊಂಡ ಕುತೂಹಲದ ಪ್ರಶ್ನೆಗೆ ನೀವು ಎಷ್ಟು ನಿಷ್ಠುರವಾದ ನಿಕಟ ಉತ್ತರವಾಗುತ್ತೀರಲ್ಲ!

ಪ್ರಜಾಸಾಹಿತ್ಯದ ಐದು ಸಂಚಿಕೆಗಳನ್ನು ಓದಿ ಹರ್ಷಗೊಂಡೆ. ನಿಮಗೆ ನನ್ನ ಶುಭಕಾಮನೆಗಳು.

ಶುದ್ಧ ಮನಸ್ಸಿನ ಸಾಂಸ್ಕೃತಿಕ ತುಡಿತಕ್ಕೆ ಐದನೆಯ ಸಂಚಿಕೆಯ ಸಂಪಾದಕೀಯ ಗಮನಿಸಬೇಕು. ನಾವು ಇಲ್ಲಿ ತಿಳಿದುಕೊಳ್ಳುವುದಿದೆ. ಹೀಗೆ ಮಾಡುವುದೇ ನಿಮ್ಮ ಪಟ್ಟು, ಅದು ಪ್ರಜಾಸಾಹಿತ್ಯದ ಧ್ಯೇಯವು ಆಗಿ ಎಲ್ಲರನ್ನೂ ತಲುಪುವ ದಿಕ್ಕಿನಲ್ಲಿ ತಾಳುವ ತಣ್ಣನೆಯ ಕಾವು, ವಿಚಾರವಂತಿಕೆ ಸಾಗುತ್ತಿರಲಿ ಎಂದು ಬಯಸುವೆ.

ಸಂಸ್ಕೃತಿ ಕಲೆಗಳು ಕೇವಲ ಪ್ರದರ್ಶನಪರವಾದ ಸಾಧನಗಳಲ್ಲ; ಅವು ಕರ್ತೃತ್ವ ಶಕ್ತಿಉಳ್ಳಂಥವು. ಜಾಗತೀಕರಣದಿಂದ, ವ್ಯಾಪಾರೀಕರಣದಿಂದ ಸಂಕೀರ್ಣಗೊಂಡ ಮನಸ್ಸುಗಳ ಸ್ಥಿತಿಯಲ್ಲಿ ಈ ಸಂಗತಿ ಅತ್ಯಂತ ಮುಖ್ಯ ಅನಿಸುತ್ತದೆ.

ಕಾ ತ ಚಿಕ್ಕಣ್ಣ